ಸಂಪುಟ 1 ಸಂಚಿಕೆ 7
ಜುಲೈ 15, 2007


ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ರೂ. 5/-

ಸಾರ್ವಜನಿಕ ಉದ್ದಿಮೆಗಳು





'ಬಕ'ಗಳ ಬಾಯಿಗೆ ಭಾರತದ ಕಾಮಧೇನು!

ಪೇಜ್ 5



ಬೆಂಗಳೂರು ಮೂಲದ ಭಯೋತ್ಪಾದಕರು ?

ಪೇಜ್ 4

ICICI Bank

ಖಾಸಗಿ ಬ್ಯಾಂಕ್‌ಗಳ ಗೂಂಡಾಗಿರಿ



ಸಾಲಿಗೆ ದರ ಹೆಚ್ಚಳ ಜನರ ಕಿಸೆಗೆ ಕನ್ನ

'ಜನಶಕ್ತಿ ಛಲೋ ಹೊಂಟೈತಿ'
ಜನರತ್ತ ಜನಶಕ್ತಿ - ಸಿದ್ಧತೆ

'ಜನಶಕ್ತಿ ಬಾಳ ಚಲೋ ಬಂದದ, ನುಗ ಹಳೆಯ ನೆನಪಾಯ್ತು. ಇಷ್ಟು ಒಳ್ಳೇ ಪೇಪರ್‌ಗೆ ಬರೀ ಐದು ರೂಪಾಯಿ ಬೆಲೆ ಇಟ್ಟಿರಲ್ಲಾ...., ಹೆಂಗ ನಿಭಾಯಿಸ್ತೀರಿ. ನಾನು ಏನರ ಸಹಾಯ ಮಾಡ್ಬೇಕಾ, ಹೇಳ್ತಮ್ಮಾ....' ಹೀಗೆಂದವರು ನಾಡಿನ ಹಿರಿಯ ಸಾಹಿತಿ ಶಾಂತರಸರವರು. ಈ ಸಂಗತಿಯನ್ನು ಅವರು ಹಂಚಿಕೊಂಡದ್ದು ಪತ್ರಿಕೆಯ ಸಂಪಾದಕ ಮಂಡಳಿಯ ಕೆ.ನೀಲಾರೊಂದಿಗೆ. ಪತ್ರಿಕೆಯ ಕುರಿತು ಇಂತಹ ಮಾತುಗಳು ಹೊರಬಂದಿದ್ದು ಗುಲ್ಬರ್ಗಾದಲ್ಲಿ. ಜುಲೈ 4 ರಂದು ಕನ್ನಡ ಭವನದಲ್ಲಿ ನಡೆದ ಸಿದ್ಧತಾ ಸಭೆಯಲ್ಲಿ.

ಮೇ 27 ರಂದು ಬೆಂಗಳೂರಿನಲ್ಲಿ ಪತ್ರಿಕೆ ಬಿಡುಗಡೆಗೊಂಡ ಬಳಿಕ ರಾಜ್ಯದ ವಿವಿಧ



ಪ್ರದೇಶಗಳಲ್ಲಿಯೂ ಸಮಾರಂಭ ನಡೆಸಿ, ಆ ವಾರದ ಸಂಚಿಕೆಯನ್ನು ಬಿಡುಗಡೆಗೊಳಿಸುವ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿತ್ತು. ಆ ಬಳಿಕ ಕೋಲಾರದಲ್ಲಿ ಪತ್ರಿಕೆಯನ್ನು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ಬಿಡುಗಡೆಗೊಳಿಸಿದರು. ಹಾಗೆಯೇ ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ದಕ್ಷಿಣ ಕನ್ನಡ, ಉಡುಪಿ, ಮೈಸೂರು, ತುಮಕೂರು, ಶಿರಸಿ ಮುಂತಾದೆಡೆಗಳಲ್ಲಿ ಪತ್ರಿಕೆಯುನ್ನು ಬಿಡುಗಡೆಗೊಳಿಸಲು ಯೋಜಿಸಲಾಗಿದೆ.

ಗುಲ್ಬರ್ಗಾದಲ್ಲಿ ಪತ್ರಿಕೆಯ ಮೇಲೆ ಅತೀವ ಪ್ರೀತಿ ಇರಿಸಿ ಬೆಳೆಸುತ್ತಿರುವ ಬಹುತೇಕರು ಅಂದು ಆ ಸಭೆಗೆ ಬಂದಿದ್ದರು. ವೈಯಕ್ತಿಕವಾಗಿ ಹಾಗೂ ಜನ ಸಾಮಾನ್ಯರಿಂದ ಬಂದ ಪ್ರತಿಕ್ರಿಯೆಗಳನ್ನು ಎಲ್ಲರೆದುರು ಬಿಡಿಸಿಟ್ಟರು. ಇಲ್ಲಿ ಹಲವು ಸಲಹೆಗಳೂ ಬಂದವು. ಪತ್ರಿಕೆಯನ್ನು ಇನ್ನೂ ಅರ್ಥಪೂರ್ಣವಾಗಿ ವೈವಿಧ್ಯಮಯಗೊಳಿಸಲು ಮುಕ್ತ ಚರ್ಚೆಗಳಾದವು. ಮಾತ್ರವೇ ಅಲ್ಲ ಪತ್ರಿಕೆಯ ಪ್ರಸಾರದತ್ತ ಎಲ್ಲರ ಗಮನ. 'ನಾನು 60 ಕಾಪಿ ಮಾರಿದೆರಿ. ಮಂದಿ ಛಲೋ ಹೊಂಟೈತಿ' ಅಂದರು ಎಂದರು ರೈತ ನಾಯಕ ವಿರುಪಾಕ್ಷಪ್ಪ ತಡಕಲ್, 'ನರೋಣ ಸರ್ಕಲ್‌ನಲ್ಲಿ 100 ಕಾಪಿ ಮಾರ್‍ತೇವೆ' ಎಂದರು ನಾಗೇಂದ್ರಮ್ಮ. ಹೀಗೆ ಎಲ್ಲಾ ತಾಲ್ಲೂಕುಗಳಲ್ಲಿ ವಿವಿಧ ರಂಗಗಳಲ್ಲಿನ ಪ್ರಮುಖರು ಹಾಜರಿದ್ದರು. ಸ್ಫೂರ್ತಿದಾಯಕ ಚರ್ಚೆಗೆ ಚಾಲನೆ ನೀಡಿದವರು ಹೈದ್ರಾಬಾದ್ ಕರ್ನಾಟಕದ ಛೇಂಬರ್ ಆಫ್ ಕಾಮರ್ಸ್‌ನ ಉಮಾಕಾಂತ ನಿಗ್ಗುಡಗಿಯವರು.

ಪತ್ರಿಕೆ ಸಂಚಿಕೆ ಬಿಡುಗಡೆ ಸಮಾರಂಭ ಜುಲೈ 21 ರಂದು ಸಂಜೆಗೆ ವ್ಯವಸ್ಥೆಗೊಳಿಸಲು ನಿರ್ಧರಿಸಲಾಯಿತು. ಇಂತಹುದೇ ಇನ್ನೊಂದು ಸಭೆ ರಾಯಚೂರಿನಲ್ಲಿ. ಅಲ್ಲಿಯ ಇನ್ನೊಂದು ವಿಶೇಷವೆಂದರೆ ಸಿಐಟಿಯು ಸಂಘಟನೆಯ ರಾಜ್ಯ ಕಾರ್ಯಕರ್ತರುಗಳ ಶಿಬಿರದಲ್ಲಿ ದುಡಿವ ಜನರ ಪ್ರಾಣ ಮಿತ್ರ ಜನಶಕ್ತಿ ಕುರಿತು ಪರಿಚಯ ಮಾಡಲಾಯಿತು. ಅಲ್ಲೆಲ್ಲರ ಮನದಲ್ಲೂ ಪತ್ರಿಕೆಯ ಬಗೆಗೆ ಅಪಾರ ಕಾಳಜಿ, ಪ್ರೀತಿ. ರಾಯಚೂರಿನಲ್ಲಿ ಪತ್ರಿಕೆಯ ಸಂಚಿಕೆ ಬಿಡುಗಡೆ ಸಮಾರಂಭ ಆಗಸ್ಟ್ 12 ರಂದು.

ಬಳ್ಳಾರಿಯಲ್ಲಿಯೂ ಒಂದು ವಿಸ್ತೃತ ಚರ್ಚೆ ಅಲ್ಲಿ. ಪತ್ರಿಕೆ ಸಂಚಿಕೆ ಬಿಡುಗಡೆ **ಜುಲೈ 22** ರಂದು ಬೆಳಿಗ್ಗೆ ಎಂದು ನಿಗದಿ. ದಕ್ಷಿಣ ಕನ್ನಡದ **ಮಂಗಳೂರಿನಲ್ಲಿ ಜುಲೈ 30 ರಂದು..**

ಇನ್ನೂ ಹಲವಾರು ಜಿಲ್ಲೆಗಳಲ್ಲಿ ಸಿದ್ಧತೆಗಳು ನಡೆದಿವೆ. ನೀವು ಇದರ ಯಶಸ್ಸಿಗೆ, ಪ್ರಸಾರದ ಹೆಚ್ಚಳದ ಆಂದೋಲನಕ್ಕೆ ಕೈ ಜೋಡಿಸಬೇಕಲ್ಲವೇ?

ಸಂ.

ಜುಬ್ಬುಮುದ್ದು

''ಹಿಂದೂ ಧರ್ಮದಲ್ಲಿ ಇಲ್ಲದ ಲೋಪದೋಷಗಳನ್ನು ಎತ್ತಿ ತೋರಿಸಿ ಬೌದ್ಧ ಹಾಗೂ ಇನ್ನಿತರ ಧರ್ಮಗಳಿಗೆ ಮತಾಂತರಗೊಳ್ಳುತ್ತಿರುವ ಬೆಳವಣಿಗೆಯ ಹಿಂದೆ ವ್ಯವಸ್ಥಿತ ಪಿತೂರಿಯಿದೆ. ಹಿಂದೂ ಧರ್ಮದ ಬಗ್ಗೆ ಅಪನಂಬಿಕೆ ಮಾಡುವ ರೀತಿಯಲ್ಲಿ ವಾಮ ಪಕ್ಷಗಳ ಮುಖಂಡರು ಹಾಗೂ ಬುದ್ಧಿ ಜೀವಿಗಳು ಅಪಪ್ರಚಾರವನ್ನು ಆರಂಭಿಸಿದ್ದಾರೆ...'

'.....ದೇವಾಲಯಗಳಲ್ಲಿ ದಲಿತರನ್ನು ಅರ್ಚಕರನ್ನಾಗಿ ನೇಮಿಸಬೇಕು ಎಂಬ ಒತ್ತಾಯದ ಬಗ್ಗೆ ಸ್ಪಷ್ಟ ನಿಲುವನ್ನು ಪ್ರಕಟಿಸುವುದು ಕಷ್ಟ. ಏಕೆಂದರೆ ಒಂದೊಂದು ದೇವಾಲಯದ ರೀತಿ ನೀತಿ ಒಂದೊಂದು ರೀತಿಯಲ್ಲಿವೆ.......'

ಪೇಜಾವರ ಮಠಾಧೀಶ
ಶ್ರೀ ವಿಶ್ವೇಶ್ವತೀರ್ಥರು

→ ಹೊರಗೆ ಥಳುಕು, ಒಳಗೆ ಹುಳುಕು - ಅಲ್ಲವೇ ಮಾರಾಯ್ರೆ

★

'ಕಾಂಗ್ರೆಸ್ಸಿಗರು ತಮ್ಮ ರಾಜಕೀಯ ಸಮಸ್ಯೆಗಳಿಗಿಂತ ಹೆಚ್ಚಾಗಿ ಜನರ ಸಮಸ್ಯೆಗಳು ಏನು? ಅವುಗಳನ್ನು ಪರಿಹರಿಸುವುದು ಹೇಗೆ? ಈ ವಿಚಾರಗಳ ಬಗ್ಗೆ ಹೆಚ್ಚು ತಲೆಕೆಡಿಸಿ ಕೊಳ್ಳಬೇಕು'

ಎಂ.ಎಂ.ಜೇಕಬ್,
ಎಐಸಿಸಿ ಕಾರ್ಯಕಾರಣಿ ಸದಸ್ಯರು, ರಾಜ್ಯ ಉಸ್ತುವಾರಿ ಪದಾಧಿಕಾರಿಗಳು

→ ಬೋಧಿವೃಕ್ಷದ ಕೆಳಗೆ ಕುಳಿತಿಲ್ಲ ತಾನೆ? ಇದು ಯಾವುದರ ವೈರಾಗ್ಯ?

''ದೇಶಾದ್ಯಂತ ಸನಾತನ ಹಿಂದೂ ಧರ್ಮವನ್ನು ನಶಿಸಿ ಹೋಗದಂತೆ ತಡೆಗಟ್ಟಿ ಅವುಗಳನ್ನು ಉಳಿಸಿ ಬೆಳೆಸಬೇಕಾಗಿರುದು ಅವಶ್ಯವಾಗಿದೆ. ಧರ್ಮ ರಕ್ಷಣೆಗಾಗಿ ಶ್ರೀ ಶಂಕರ ಭಾಗವತ್ಪಾದರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವೆಲ್ಲ ಮುಂದುವರೆದು ಧರ್ಮ ರಕ್ಷಣೆ ಪಾಲನೆಗೆ ಸಜ್ಜಾಗಬೇಕು.

ಇಂದಿನ ಯುವ ಪೀಳಿಗೆ ಸಂಧ್ಯಾವಂದನೆ ಆಚರಣೆಗಳನ್ನು ಕಡೆಗಣಿಸುತ್ತಿದೆ. ಇನ್ನು ಹೋಮ, ಯಜ್ಞ ಯಾಗಾದಿಗಳು ದೂರ ಉಳಿದಿವೆ''

ಶೃಂಗೇರಿ ಮಠದ ಜಗದ್ಗುರು
ಶ್ರೀ ಭಾರತೀ ತೀರ್ಥ ಸ್ವಾಮಿಗಳು

→ ಹಿಂದೂ ಧರ್ಮ ಅಂದರೆ ಸಂಧ್ಯಾವಂದನೆ ಯಜ್ಞ, ಯಾಗ... ಅಷ್ಟೇನಾ? ವರ್ಣಾಶ್ರಮ ಇಲ್ಲವಾ?

★

''ಅರವತ್ತು ವರ್ಷಗಳ ಕಾಲ ರಾಜ್ಯವನ್ನಾಳಿದ ಸರ್ಕಾರಗಳದ್ದು ತುಘಲಕ್ ಆಡಳಿತ. ಅವು ಜನತೆಯನ್ನು ವಂಚಿಸಿವೆ. ಕಾಂಗ್ರೆಸ್‌ನ ದುರಾಡಳಿತದಿಂದ ರಾಜ್ಯ ದಿವಾಳಿಯಾಗಿತ್ತು. ಈಗ ಎಲ್ಲವೂ ಸರಿಯಾಗಿದೆ''

ಉಪಮುಖ್ಯಮಂತ್ರಿ
ಬಿ.ಎಸ್.ಯಡಿಯೂರಪ್ಪ

→ ಅದಕ್ಕೆ ಬಡವರಿಗೆ ರೇಷನ್ ಕಾರ್ಡು ಇಲ್ಲ, ರೇಷನ್ ಅಂತೂ ಮೊದಲೇ ಇಲ್ಲ.



ಎಡರಂಗ ಸರ್ಕಾರಕ್ಕೆ 30 ವರ್ಷಗಳು
ಸಂಭ್ರಮದ ಆಚರಣೆಗೆ ಸಿದ್ಧತೆ
ಜುಲೈ 28 ರಂದು ಬೆಂಗಳೂರಿನಲ್ಲಿ ಸಮಾರಂಭ

ಪಶ್ಚಿಮ ಬಂಗಾಳದ ಎಡರಂಗದ ಸರ್ಕಾರಕ್ಕೆ ಮೂವತ್ತು ವರುಷಗಳು ತುಂಬುತ್ತಿರುವ ಈ ಸಂದರ್ಭವನ್ನು ದೇಶದೆಲ್ಲೆಡೆ ಸಂಭ್ರಮದಿಂದ ಆಚರಿಸಲು ಸಿದ್ಧತೆಗಳು ನಡೆದಿವೆ. ಈಗಾಗಲೇ ಕೋಲ್ಕೊತ್ತಾದಲ್ಲಿ ಆಚರಣೆಗೆ ಚಾಲನೆ ದೊರೆತಿದೆ.

ಬೆಂಗಳೂರು ಒಳಗೊಂಡು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿಯೂ ಆಚರಿಸಲು ಪೂರ್ವಭಾವಿಯಾಗಿ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್ ನ ನಾಯಕರುಗಳ ಸಭೆ ಜರುಗಿ ಯೋಜನೆ ರೂಪಿಸಲಾಗಿದೆ. ಅದರಂತೆ ಜುಲೈ 28 ರಂದು ರಾಜಧಾನಿ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸಮಾರಂಭ ಜರುಗಲಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಮುಂತಾದವರು ಭಾಗವಹಿಸುವರು. ನಂತರ ಜಿಲ್ಲೆಗಳಲ್ಲಿಯೂ ಆಚರಣೆ ಸಮಾರಂಭಗಳು ನಡೆಯಲಿವೆ.

ಎಡರಂಗ ಸರ್ಕಾರದ ಸಾಧನೆಗಳನ್ನು ವಿವರಿಸುವ ಕಿರುಹೊತ್ತಿಗೆ, ವಸ್ತು ಪ್ರದರ್ಶನ, ಕರಪತ್ರ, ಇತ್ಯಾದಿಗಳ ಮೂಲಕ ಪ್ರಚಾರ ಕೈಗೊಳ್ಳಲಾಗುವುದು. ಸಿದ್ಧತೆ ಬಗ್ಗೆ ಚರ್ಚಿಸಿದ ಸಭೆಯಲ್ಲಿ ಸಿಪಿಐ(ಎಂ) ನಿಂದ ಜಿ.ಎನ್.ನಾಗರಾಜ್, ಪ್ರಸನ್ನಕುಮಾರ್, ಎಸ್.ವೈ.ಗುರುಶಾಂತ್, ಸಿಪಿಐ ನಿಂದ ಡಾ. ಸಿದ್ದನಗೌಡ ಪಾಟೀಲ್, ಹರಿಗೋವಿಂದು, ಫಾರ್ವರ್ಡ್ ಬ್ಲಾಕ್‌ನ ಶಿವಶಂಕರ್ ಮುಂತಾದವರು ಭಾಗವಹಿಸಿದ್ದರು.



ಕಾಡತಾವ ನೆನಪು....

'ಜನಶಕ್ತಿ' ಹುಟ್ಟಿದ್ದು ಹುಬ್ಬಳ್ಳಿಯ ತಬೀಬ್ ಲ್ಯಾಂಡ್‌ನ ಒಂದು ಕಿರುಮನೆಯಲ್ಲಿ ಕುಳಕುಂದ ಶಿವರಾಯರು (ನಿರಂಜನ) ಭೂಗತ ಸ್ಥಿತಿಯಲ್ಲಿ 1948-1950ರ ಅವಧಿಯಲ್ಲಿ ಪತ್ರಿಕೆಯನ್ನು ನಡೆಸಿದ್ದು ಅಂದಿನ ರೋಚಕ ಅನುಭವ. ಸು.ರಂ. ಎಕ್ಕುಂಡಿಯವರು ತಮ್ಮ ಆರಂಭದ ಕವಿತೆಗಳನ್ನು ಜನಶಕ್ತಿ ಮುದ್ರಣಾಲಯದಲ್ಲಿ ಕೂತು ಬರೆದರು. ನವಲೂರಿನ ಕವಿ ಶಿವೇಶ್ವರ ದೊಡ್ಡಮನಿ ಅವರು ಆಗಾಗ 10 ಮೈಲು ದೂರದಿಂದ ನಡೆದು ಬಂದು 'ಜನಶಕ್ತಿ' ಗೆ ಸುದ್ದಿ, ಕಾಲಂ, ಕವಿತೆ ಬರೆಯುತ್ತಿದ್ದರು. ಪೋಲೀಸರ ಕಣ್ಣು ತಪ್ಪಿಸಿ ಪತ್ರಿಕೆಯ ಪ್ರಸಾರ ನಡೆಸುತ್ತಿದ್ದರು. ಸ್ವಾತಂತ್ರ್ಯ ಬಂದದ್ದು, ಉಳ್ಳವರಿಗೆ; ಆಳುವವರಿಗೆ; ಹೊರತು ರೈತರಿಗೆ, ನೇಕಾರರಿಗೆ, ಕಾರ್ಮಿಕರಿಗೆ ಅಲ್ಲ ಎಂಬ ಸರಳ ವಾಸ್ತವವನ್ನು ಶಿವೇಶ್ವರ ತಮ್ಮ ಕವಿತೆಗಳಲ್ಲಿ ಬಿಚ್ಚಿಟ್ಟಿದ್ದಾರೆ. ಆತ, ಕನ್ನಡದ ಮೊತ್ತಮೊದಲ ಸಾಮ್ಯವಾದಿ ಕವಿ. ಇದೆಲ್ಲಾ ಮರೆಯುತ್ತಿದ್ದೇವೆ ಅನ್ನುವ ಹೊತ್ತಿಗೆ ನೆನಪಿಸುವ ಪ್ರಕಟಣೆಯಾಗಿ ಜನಶಕ್ತಿ ಹೊಸ ರೂಪ ಹೊಸ ಪರಿಭಾಷೆಯೊಂದಿಗೆ ಮರುಹುಟ್ಟು ತಾಳಿದ್ದು ಸ್ವಾಗತಾರ್ಹ. ಸಿನಿಮಾ,ಕಲೆ, ಕಾವ್ಯಗಳ ಕುರಿತು ಕಾಲಂಗಳಿರಲಿ. ಶಿವಾಜಿ ಅವಲೋಕನ ಸಕಾಲಿಕವಾಗಿದೆ.

ಪ್ರೊ. ಶ್ಯಾಮಸುಂದರ ಬಿದರಕುಂದಿ,
ಹುಬ್ಬಳ್ಳಿ

★

ಎಸ್‌ಇಝಡ್ ಎಂದರೆ ವಿಶೇಷ ಭೂಮಿ ಲೂಟಿ ವಲಯ ಮತ್ತು ರಿಯಲ್ ಎಸ್ಟೇಟ್ ದಂಧೆ ಎಂಬುದು ಅರ್ಥವಾಗುತ್ತದೆ. ಚೀನಾ ದೇಶದವರು ಜನಸಂಖ್ಯೆಯಲ್ಲಿ ಮುಂದಿದ್ದರೂ ಅಭಿವೃದ್ಧಿ ದೇಶ ಎಂಬುದು ಸಾಬೀತು ಮಾಡಿದ್ದಾರೆ. ಅಲ್ಲಿರುವ ತತ್ವಗಳನ್ನು ನೀತಿಗಳನ್ನು ತಂತ್ರಜ್ಞಾನವನ್ನು ಅಳವಡಿಸಿಕೊಂಡು ಮುನ್ನಡೆಸಿದಾಗ ಮಾತ್ರ ನಮ್ಮ ದೇಶ ಅಭಿವೃದ್ಧಿ ಸಾಧಿಸಲು ಸಾಧ್ಯ.

ಡಿ.ಎಲ್. ಸುರೇಶ್, ಹರಪನಹಳ್ಳಿ

ಸಂಪಾದಕೀಯ

ಸಾರ್ವಜನಿಕರ ಕಿಸೆಗೆ ಕನ್ನ ಹೊಸ ಹೊರೆ

ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕಲು ಏನಾದರೂ ನೆಪ ಸಿಕ್ಕರೂ ಸಾಕು- ಇಲ್ಲದಿದ್ದರೂ ಸಾಕು ಅಂತಹದೊಂದು ಹೇಗೋ ಹುಡುಕಿ ತೆಗೆವ ಅದ್ಭುತ ಪ್ರತಿಭೆ ಸರ್ಕಾರಕ್ಕೆ ಇದೆ. ಇದಕ್ಕೆ ಹಲವಾರು ಪ್ರಸಂಗಗಳನ್ನು ಉದಾಹರಿಸಬಹುದಾದರೂ ಕರ್ನಾಟಕ ಸಾರಿಗೆ ಸಂಸ್ಥೆಯೆಂಬ ಸದಾ ಸೋರಿಕೆಯ ಸಂಸ್ಥೆಯು ಮೂಲಭೂತ ಸೌಕರ್ಯಗಳಿಗೆಂಬ ಹೆಸರಿನಲ್ಲಿ ಸಾಮಾನ್ಯ ಪ್ರಯಾಣಿಕ ಮೇಲೆ ಸಾರಾ ಸಗಟು 10 ರೂಪಾಯಿಗಳಿಂದ 20 ವರೆಗೂ ಶುಲ್ಕ ಹೇರಲು ನಿರ್ಧರಿಸಿರುವುದು ಸುಲಿಗೆಯ ಕ್ರಮವಾಗಿದೆ.

ಈಗಾಗಲೇ ವಿಧಿಸಲಾಗುತ್ತಿರುವ ಪ್ರಯಾಣ ದರಗಳು ದುಬಾರಿ. ಹೇಳದೇ ಕೇಳದೇ, ಎಲ್ಲೂ ಚರ್ಚೆಯೂ ಆಗದೇ ಏಕಾಏಕಿ ದರಗಳನ್ನು ಹೆಚ್ಚಿಸಿ ಸಾರ್ವಜನಿಕರಿಂದ ಲೂಟಿ ಹೊಡೆವ ಪರಿಪಾಠ ಆರಂಭಗೊಂಡು ಮಧ್ಯರಾತ್ರಿಯಲ್ಲೇ ಆದೇಶವಾಗಿ ಬೆಳಗಾಗುವುದರ ಒಳಗೇ ಜಾರಿಗೆ ಬಂದು ಬಿಡುತ್ತದೆ! ಹಿಂದೆ ಕನಿಷ್ಟ ಸಾರಿಗೆ ಸಚಿವರು ದರ ಏರಿಕೆಯ ಮುನ್ಸೂಚನೆಯಾದರೂ ನೀಡಿ ತಾವು ಇರೋದರ ಬಗ್ಗೆ ಸಾರ್ವಜನಿಕವಾಗಿ ನೆನಪಾದರೂ ಮಾಡುತ್ತಿದ್ದರು. ಕೊನೆಗೆ ಸಾರ್ವಜನಿಕವಾಗಿ ಹಾಗೂ ವಿಧಾನ ಸಭೆಯಲ್ಲಿಯಾದರೂ ಚರ್ಚೆಗಳು ನಡೆಯುತ್ತಿದ್ದವು. ಬಂದ್ ಪ್ರತಿಭಟನೆಗೆ ಕೆಲವು ಸಲ ಸ್ಪಂದಿಸಬೇಕಿತ್ತು. ಈ ಬಗ್ಗೆ ಒಂದು ಉತ್ತರವಾದರೂ ಹೇಳಬೇಕಿತ್ತು. ಆದರೆ ಈಗ ಸ್ಥಿತಿ ಹಾಗಿಲ್ಲ. ಸರ್ಕಾರದ ಸಂಸ್ಥೆಯೊಂದು, ಜನರಿಗೆ ಉತ್ತರದಾಯಿತ್ವ ಅಲ್ಲವಾಗಿ ಬಿಟ್ಟಿದೆ. ಅಂದರೆ ಅಷ್ಟು ಇಷ್ಟು ಇದ್ದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅಪಹರಿಸಲಾಗಿದೆ. ಜನತೆಯನ್ನು ಪ್ರಜಾಪ್ರಭುತ್ವದಲ್ಲಿ ಪ್ರಭುಗಳು ಎಂಬುದಕ್ಕೆ ಎಳ್ಳು ನೀರು ಬಿಟ್ಟು ಅವರನ್ನು ಗಿರಾಕಿಗಳಂತೆ ಕಾಣಲಾಗುತ್ತಿದೆ. ಇದು ಉದಾರೀಕರಣದ ಪ್ರಕ್ರಿಯೆಯಲ್ಲಿ ಹುಟ್ಟಿರುವ ಜಾಡ್ಯವಾಗಿದೆ.

ಸಾರಿಗೆ ಸಚಿವರು ಈ ಶುಲ್ಕ ಹೇರಿಕೆಯನ್ನು ಸಮರ್ಥಿಸಿಕೊಂಡಿರುವುದನ್ನು ಒಪ್ಪಲಾಗದು. ಈಗಾಗಲೇ ಏರಿಸಲಾಗಿರುವ ದರಗಳು, ಅಲ್ಲದೆ ಭಾರತ ಸರ್ಕಾರ ಡೀಸೆಲ್ ಬೆಲೆಗಳನ್ನು ಕಡಿಮೆ ಮಾಡಿದ ಬಳಿಕವೂ ಕರ್ನಾಟಕ ಸರ್ಕಾರ ಬೆಲೆಗಳನ್ನು ಇಳಿಸದೇ ಬೆನ್ನ ಮೇಲಿನ ಹೊರೆ ಹಾಗೆ ಉಳಿಸಿಬಿಟ್ಟಿದೆ. ಹೀಗಾಗಿ ಅದರಿಂದಲೇ ನೂರಾರು ಕೋಟಿ ರೂಪಾಯಿಗಳ ಲಾಭ ಬೊಕ್ಕಸಕ್ಕೆ ಹರಿದಿದೆ.


ಮೇಲಾಗಿ ಸರ್ಕಾರವೇ ಪ್ರಕಟಿಸಿದಂತೆ 2006-07ರ ಸಾಲಿನಲ್ಲಿ 200 ಕೋಟಿ ವ್ಯವಹಾರ ಮಾಡಿ 33.9 ಲಾಭ ಪಡೆದಿದೆ. ಅದೂ ಹಲವಾರು ಸೋರಿಕೆಗಳ ನಡುವೆ, ಹೀಗಿರುವಾಗ ಸಾರ್ವಜನಿಕ ಸೇವೆಯ ಸಂಸ್ಥೆಯ ಲಕ್ಷ್ಯ ಜನರಿಗೆ ಉತ್ತಮ ಸೌಲಭ್ಯ, ಅವರ ಹಿತ ರಕ್ಷಣೆಯೇ ಪ್ರಥಮ ಆದ್ಯತೆ. ಆದರೆ ಈ ಮೂಲ ಉದ್ದೇಶಕ್ಕೆ ತಿಲಾಂಜಲಿ ಇಟ್ಟು ಕಾರ್ಪೋರೇಟ್ ಕಂಪನಿಗಳಂತೆ ಲಾಭ-ನಷ್ಟದ ಲೆಕ್ಕಾಚಾರಕ್ಕೆ ಇಳಿದಿರುವುದು ಸಮರ್ಥನೀಯವಲ್ಲ.

ಇಂತಹದ್ದೇ ಕಾರಣಗಳನ್ನೊಡ್ಡಿ ವಿದ್ಯಾರ್ಥಿಗಳ ಬಸ್ ಪಾಸ್ ದರಗಳನ್ನು ವಿಪರೀತವಾಗಿ ಹೆಚ್ಚಿಸಲಾಗಿದೆ. ಪ್ರತಿಭಟನೆಗಳ ಮಾತು ಕೇಳುತ್ತಿಲ್ಲ ಎಂಬುದನ್ನು ಸಹ ಗಮನಿಸಬೇಕಿದೆ.

ಇಂತಹ ಜನಪರ ಧೋರಣೆಗೆ ತಿಲಾಂಜಲಿ ನೀಡುತ್ತಿರುವುದರಿಂದಲೇ ಸಂಸ್ಥೆಯ ಕಾರ್ಮಿಕರ ಮೇಲೆ ಪ್ರಜಾಸತ್ತಾತ್ಮಕ ವಿರೋಧಿ ದಾಳಿಗಳು, ಖಾಸಗೀಕರಣದ ಪ್ರಕ್ರಿಯೆಯಂತಹ ಅವನತಿಗಳೂ ನಡೆದಿವೆ. ಈಗಲೂ ಸಾರಿಗೆ ಸಂಸ್ಥೆಯು ಗ್ರಾಮೀಣ ಪ್ರದೇಶದ ಸಾರಿಗೆಯತ್ತ ಗಂಭೀರ ಗಮನವನ್ನೇ ಹರಿಸಿಲ್ಲ. ಅತ್ಯಂತ ಕೆಟ್ಟದಾದ ರಸ್ತೆಗಳು, ನಗರದಲ್ಲಿ ಬಳಸಿ ಹಳತಾದ ವಾಹನಗಳು, ಸಮಯದ ಅನಿಶ್ಚಿತತೆ, ಬಸ್‌ಗಳ ಕೊರತೆ (ಟಾಪ್‌ಸಮೀಸ್) ದಶಕಗಳಿಂದಲೂ ಹಾಗೇ ಇದೆ. ಅಂದರೆ ಮೂಲ ಸೌಕರ್ಯವೆಂದರೆ ಬೆಂಗಳೂರಿನಂತಹ ಮಹಾನಗರಗಳ ಬಸ್ ನಿಲ್ದಾಣಗಳ ಸೌಂದರ್ಯೀಕರಣ ಎಂಬುದಷ್ಟೇಯೇ? ಎಂದು ಪ್ರಶ್ನಿಸಬೇಕಿದೆ.

ಹಲವಾರು ಸಂಕಷ್ಟಗಳ ಹೊರೆಗಳಿಂದ ತತ್ತರಿಸುತ್ತಿರುವ ಸಾರ್ವಜನಿಕರ ಮೇಲಿನ ಈ ದರ ಹೇರಿಕೆಯನ್ನು ಸರ್ಕಾರ ಈ ಕೂಡಲೇ ಹಿಂತೆಗೆದುಕೊಳ್ಳಬೇಕು.

'ಕೇಸರಿ' ತಾಲಿಬಾನ್‌ಗಳಿಗೆ ಮಣಿದ ಮುಖ್ಯಮಂತ್ರಿ



■ ಎಸ್.ವೈ.ಗುರುಶಾಂತ್

ಜುಲೈ 5 ರಂದು 'ಆನುದೇವಾ ಹೊರಗಣವನು' ಪುಸ್ತಕವನ್ನು ಮುಟ್ಟುಗೋಲು ಹಾಕುವಂತೆ ಮಾತೆ ಮಹಾದೇವಿ, ಖಂಡ್ರೆ ಮುಂತಾದವರು ಸರ್ಕಾರದ ಮೇಲೆ ಒತ್ತಡ ಹೇರಿ ಆರ್ಭಟಿಸಿರುವುದು ತಾಲಿಬಾನ್ ಗಳಿಗಿಂತಲೂ ಏನೂ ಕಡಿಮೆಯಿಲ್ಲ ವೆಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ. ಪ್ರತಿಭಟನೆಯೆಂಬ ಪ್ರಹಸನದಲ್ಲಿ ಪುಸ್ತಕದಲ್ಲಿನ ವಿಚಾರಗಳ ಬಗ್ಗೆ ಕನಿಷ್ಟ ನಿರ್ದಿಷ್ಟವಾದ ಪ್ರತಿಕ್ರಿಯೆಯಾಗಲಿ, ಅದನ್ನು ಆಕ್ಷೇಪಿಸುವುದ್ಯಾಕೆ ಎಂದಾಗಲೀ ಪ್ರಸ್ತಾಪಿಸದೇ ಜಾತ್ಯಾತೀತರು' - ಬುದ್ಧಿಜೀವಿಗಳ ಮೇಲೆ ತೀವ್ರ ಬೈಗುಳನ್ನು ಹರಿಸಿದ್ದು ಅನಾಗರೀಕವಾದದ್ದು. ಇಂತಹ ಸಭೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಕುಮಾರಸ್ವಾಮಿ ಮಾತನಾಡಿದ್ದು ಖಂಡನೀಯ. 'ಬಂಡಾಯ ಸಾಹಿತಿಗಳು ನೀಚ ಸಂಸ್ಕೃತಿಯವರೆಂದು, ಗೃಹ ಸಚಿವ ಎಂ.ಪಿ.ಪ್ರಕಾಶ್ ನೀಚರೆಂದು ಜರೆದಿದ್ದಾರೆ. ಧರ್ಮ ರಕ್ಷಣೆಗೆ ಮಿಲಿಟರಿ ತರಬೇತಿ ಆಗಬೇಕೆಂದೂ ಮಹಾದೇವಿ ಪೋಲೀಸರ ಎದುರೇ ಹೇಳಿದ್ದಾರೆ. ಶ್ರೀರಾಮಸೇನೆಯ ಪ್ರಮೋದ ಮುತಾಲಿಕನೆಂಬ ಫ್ಯಾಶಿಸ್ಟ್ ಕ್ರಿಮಿನಲ್ ಪುಸ್ತಕ ಮುಟ್ಟುಗೋಲು ಹಾಕದಿದ್ದರೆ ವಿಧಾನಸೌಧಕ್ಕೆ ಕಲ್ಲು ಹೊಡೆದು ಬೆಂಕಿ ಹಚ್ಚಲು ನುಗ್ಗಬೇಕು ಎಂದೂ ಫರ್ಮಾನು ಹೊರಡಿಸಿದ್ದಾನೆ. ಮತ್ತು ತನ್ನ ನಿಜ ಅಜೆಂಡಾವಾದ 'ಮುಸ್ಲಿಂರ ವಿರುದ್ಧ ಭಾರತ ಮಾತೆಯ ರಕ್ಷಣೆಗೆ ತಲವಾರು-ಖಡ್ಗ' ಹಿಡಿಯಬೇಕು ಎಂದು ಅರಚಿದ್ದಾನೆ. ಹಿಂದೆಂದೂ ಬಡ-ಸಾಮಾನ್ಯ ವೀರಶೈವರ ಕಷ್ಟ ಕೋಟಲೆಗಳ ಬಗ್ಗೆ ಒಂದು ಕೀರಲು ಧ್ವನಿಯನ್ನು ಉಸುರದ ಭೀಮಣ್ಣಖಂಡ್ರೆ ಎಂಬ ಮಾಜಿ ಸಚಿವ ಮಹಾಶಯ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಲು ಕರೆ ಕೊಟ್ಟಿದ್ದಾರೆ. ಹೀಗಾಗಿ ಈ ಸಭೆ ಯಾವುದರ ವಿರುದ್ಧ ಮತ್ತು ಯಾಕೆ ಎಂಬುದು ಸ್ಪಷ್ಟಗೊಂಡಿದೆ. ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ ಬಗ್ಗೆ ಎಂತಹ ದ್ವೇಷ ಎಂಬುದೂ ಅನಾವರಣಗೊಂಡಿದೆ.



ಇಂತಹ ಪರಮ ಅಧಃತನದ ವೈಚಾರಿಕತೆ ಮತ್ತು ಹಿತಾಸಕ್ತಿಗಳನ್ನು ಹೊಂದಿರುವ ಸಭೆಗೆ ಸ್ವತಃ ಮುಖ್ಯಮಂತ್ರಿಯೇ ಧಾವಿಸಿ ಮನವಿ ಪಡೆದು ಆಡಿದ ಮಾತುಗಳು- ಉಗ್ರ ಖಂಡನೀಯ. ಇತಿಹಾಸ, ಸಂಸ್ಕೃತಿ ಎಂದರೇನೆಂದು ಗಂಧ ಗಾಳಿಯೂ ಇಲ್ಲದ, ತಮ್ಮ ಪಾಳೆಗಾರಿ ಗತ್ತುಗಾರಿಕೆಯೇ ಸಂಸ್ಕೃತಿಯೆಂದು ನಂಬಿರುವ ಮುಖ್ಯಮಂತ್ರಿ 'ಆನುದೇವಾ...' ಕೃತಿಯ ಬಗ್ಗೆ ಮಾತನಾಡಿದ್ದು ಅತ್ಯಂತ ಬಾಲಿಶತನದ್ದು, ದುರುದ್ದೇಶದ್ದು. ಈ ಗ್ರಂಥದಲ್ಲಿ ಎಷ್ಟು ಸಾಲುಗಳನ್ನು ಓದಿ ಏನರ್ಥ ಮಾಡಿಕೊಂಡಿದ್ದಾರೆ ಎಂದು ಯಾರೂ ಕೇಳಬಹುದಾದರೂ 'ಮಹಾತ್ಮರ ಚಾರಿತ್ರ್ಯ' ಕ್ಕೆ ಕಳಂಕ ಹತ್ತಿದೆ, ತನಗೆ ನೋವಾಗಿದೆ. ಕೃತಿ ಮುಟ್ಟುಗೋಲು ಹಾಕಲು ಕ್ರಮ ಅನುಸರಿಸಲಾಗುವುದು' ಎಂದು ಹೇಳಿರುವುದು ಮತ ಗಳಿಕೆಯ, ಅಧಿಕಾರದಲ್ಲೇ ಹೇಗೂ ಅಂಟಿಕೊಳ್ಳುವ ಜಾತಿ ದ್ವೇಷ ಬಳಕೆಯ ಕ್ರಮವಾಗಿದೆ. ಅದೂ ಇಡೀ ವೀರಶೈವ ಸಮಾಜದ ಪ್ರತಿನಿಧಿಗಳು ತಾವೆಂದು ಹೇಳಿಕೊಳ್ಳುವ ಒಂದು ಗುಂಪಿನ ಎದುರು.

ಅದೂ ತಮ್ಮದೇ ಸರ್ಕಾರದ ಸಚಿವ ಸಂಪುಟದ ಹಿರಿಯ ಸಚಿವರೊಬ್ಬರ ವಿರುದ್ಧ ಅವಹೇಳನ ಮಾಡಿದವರ ಎದುರೇ ಇಂತಹ ಮಾತನಾಡಿದ್ದು ಅತ್ಯಂತ ಬೇಜವಾಬ್ದಾರಿಯ ನಡವಳಿಕೆಯಾಗಿದೆ. ಇವರಿಗೆ ಭಿನ್ನಾಭಿಪ್ರಾಯವಿದ್ದರೆ ಸಂಪುಟದಲ್ಲಿ ಚರ್ಚಿಸಬೇಕಿತ್ತು. ಒಂದು ಅಭಿಪ್ರಾಯಕ್ಕೆ ಬರಬೇಕಿತ್ತು. ಅದರ ಬದಲು ವ್ಯಕ್ತಿಗತ ಹಿತಾಸಕ್ತಿಗೆ ಅನುಗುಣವಾಗಿ ಮುಖ್ಯಮಂತ್ರಿ ವರ್ತಿಸುವುದರೆಂದರೆ ಈ ಪ್ರವೃತ್ತಿಯನ್ನು ಪ್ರಶ್ನಿಸಬೇಕಾಗುತ್ತದೆ.

ಕೃತಿಯೊಂದರ ಆಶಯ, ಸಂಶೋಧನೆಯ ಅಭಿವ್ಯಕ್ತಿಯನ್ನು ಹರಣ ಮಾಡುವ ಪ್ರತಿಗಾಮಿಗಳ ಹುನ್ನಾರವನ್ನು ಪ್ರಗತಿಪರರು, ಎದುರಿಸಬೇಕಿದೆ. ಸಂದರ್ಭಸಾಧಕ ಮೈತ್ರಿಕೂಟದಲ್ಲಿ ಬಿಜೆಪಿ ಾಲು ಪಡೆದಿರುವಾಗಲೇ ಹೀಗಿರುವಾಗ ಪೂರ್ಣ ಅಧಿಕಾರ ಸಿಕ್ಕರೆ ಹೇಗೆ ಎಂದೂ ಚಿಂತಿಸಬೇಕಿದೆ.

ನಕ್ಸಲಿಯರ ನಾಯಿ ಕತೆ ಯಾಕೆ?

ನಕ್ಸಲೀಯರು, ಅವರ ಬೆಂಬಲಿಗರು ಹಾಗೂ ಸಂಘಟನೆಗಳಿದ್ದ ಪ್ರಕಟಿತ ಪಟ್ಟಿಯನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಂಡಿದೆ. ವಿವರವಾಗಿ ಮರು ಪರಿಶೀಲಿಸಿ ಹೊಸ ಪಟ್ಟಿಯನ್ನು ಬಿಡುಗಡೆ ಮಾಡುವ ಇಂಗಿತವೂ ಪ್ರಕಟವಾಗಿದೆ. 'ಸುವರ್ಣ' ಕನ್ನಡ ಟಿ.ವಿ. ಚಾನೆಲ್‌ನಲ್ಲಿ 'ಜುಗಲ್ ಬಂದಿ'ಯಲ್ಲಿ ಭಾಗವಹಿಸಿದ್ದ ಪೋಲೀಸ್ ಅಧಿಕಾರಿ ಶಂಕರ ಬಿದರಿ ತಮ್ಮಲ್ಲಿ ಮಾಹಿತಿಗಳು ಇರುವವರಿಂದಲೇ ಪಟ್ಟಿ ಮಾಡಲಾಗಿದೆ ಎಂದೇ ಸಮರ್ಥಿಸಿಕೊಂಡಿದ್ದಾರೆ.

ಒಂದು ನಿರ್ದಿಷ್ಟ ಉದ್ದೇಶಗಳಿಗಾಗಿ, ಸಮಸ್ಯೆಗಳಿಗಾಗಿ ಪರಿಹಾರ ಬಯಸಿ ನಡೆದ ಚಳುವಳಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಒಂದೊಮ್ಮೆ ಮಾವೋವಾದಿ ನಕ್ಸಲೀಯರನ್ನು, ಅವರ ವಾದವನ್ನು ಬೆಂಬಲಿಸುತ್ತಿದ್ದಲ್ಲಿ ಅಂತಹವರು ತಮ್ಮ ನಿರ್ಧಾರವನ್ನು ಪುನರ್ ಅವಲೋಕಿಸಿ, ಹೊರ ಬರಬೇಕಾದ ಸಂದರ್ಭವಿದಾಗಿದೆ. ಕೋಮುವಾದದ ವಿರುದ್ಧ, ಜನತೆಯ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಬೇಕೆಂಬುದು ನಮ್ಮ ಆಶಯವಾಗಿದೆ.

ಈ ಪಟ್ಟಿಯ ಸುತ್ತ ಬುದ್ಧಿಜೀವಿ ವಲಯದಲ್ಲಿ ಸಾರ್ವಜನಿಕವಾಗಿಯೂ ಚರ್ಚೆ ನಡೆದಿದ್ದವು. ಹಿರಿಯ ಸಾಹಿತಿ ಡಾ. ಅನಂತಮೂರ್ತಿ, ಡಾ. ಮರುಳಸಿದ್ದಪ್ಪ, ಪ್ರೊ. ಜಿ.ಕೆ.ಗೋವಿಂದರಾವ್ ಮುಂತಾದವರು ತಾವು ಯಾಕೆ ಕೋಮು ಸೌಹಾರ್ದ ವೇದಿಕೆ ಸಂಘಟನೆಯನ್ನು ಬಿಟ್ಟು ಹೊರ ಬರಬೇಕಾಯಿತು ಮತ್ತು ಮಾವೋವಾದಕ್ಕೆ ಯಾಕೆ ಅವರ ವಿರೋಧ ಎಂದು ಸಾರ್ವಜನಿಕವಾಗಿಯೇ ಸ್ಪಷ್ಟಪಡಿಸಿದ್ದಕ್ಕೆ ಮಾವೋವಾದಿಗಳು ನಡೆಸಿದ ಟೀಕಾ ಪ್ರಹಾರಗಳು ಇನ್ನೊಬ್ಬರ ಅಭಿವ್ಯಕ್ತಿ ಆಶಯಗಳಿಗೆ ತೋರುವ ಅಸಹನೆಯ ಪ್ರಮಾಣವನ್ನು ಹೊರಹಾಕಿದೆ. ಕೋಮುಸೌಹಾರ್ದ ವೇದಿಕೆಯ ಜೊತೆ ಆರಂಭದಿಂದಲೂ ಇಲ್ಲ, ಅದರ ಒಬ್ಬ ಪ್ರಮುಖ ರೂವಾರಿಯಾಗಿದ್ದ ಡಾ. ರಾಜೇಂದ್ರ ಚೆನ್ನಿಯವರೂ ಸಹ ತೀವ್ರವಾದ ವಿಮರ್ಶೆಯನ್ನು ನಡೆಸಿದ್ದಾರೆ, ಕೋಮುವಾದ ವಿರುದ್ಧ ಈಗಾಲೂ ಇವರೆಲ್ಲರಲ್ಲಿ ಪ್ರಖರ ನಿಲುವು ಉಳ್ಳವರು, ಮತ್ತು ಹೋರಾಟದಲ್ಲಿಯೂ ಸಕ್ರಿಯರು. ಆದರೆ ಈ ಅಂಶವನ್ನು ಮಾವೋವಾದಿಗಳು ಪರಿಗಣಿಸಲು ಸಿದ್ಧರಿಲ್ಲ. ಮಾವೋವಾದಿಗಳು ಇಲ್ಲದೆಯೂ ಕೋಮುವಾದದ ವಿರುದ್ಧ ಪ್ರಬಲ ಚಳುವಳಿ ಸಾಧ್ಯ ಎಂಬುದನ್ನು ಪರಿಗಣಿಸಲೂ ಸಿದ್ಧರಿಲ್ಲ. ಇನ್ನೊಬ್ಬರ ಅಸ್ತಿತ್ವವನ್ನು ನಿರಾಕರಿಸುವುದರಲ್ಲಿಯೇ ತಮ್ಮ ಅಸ್ತಿತ್ವ ಅಡಗಿದೆಯೆಂದು ಅವರು ಭಾವಿಸಿದಂತಿದೆ. ಈ ಎಲ್ಲವುಗಳ ನಡುವೆ ಕೋಮುವಾದ ಮತ್ತು ಜನರ ಸಮಸ್ಯೆಗಳ ವಿರುದ್ಧ ಧ್ವನಿ ಇರುವ ಬಹುತೇಕ ಪ್ರಗತಿಪರರು ಮಾವೋವಾದಿ ಮೇಳಕ್ಕೆ ಹಿಮ್ಮೇಳ ಹಾಡಲಿಲ್ಲ. ಅದಕ್ಕೆಂದೇ ಕ್ರಿಯಾಶೀಲ ಸಣ್ಣ ಗುಂಪು ವ್ಯಗ್ರಗೊಂಡು ಭೋದಿಸತ್ವನ ನಾಯಿ ಕಥೆ ಹೇಳುತ್ತಾ ನಾಡಿನ ಪ್ರಗತಿಪರ ಬುದ್ಧಿಜೀವಿಗಳನ್ನು ದಬಾಯಿಸುತ್ತಿದೆ. ○

ಖಾಸಗಿ ಬ್ಯಾಂಕು ಮತ್ತು ಗೂಂಡಾ ದಾಳಿಗಳು

ಇತ್ತೀಚೆಗೆ ಬೆಂಗಳೂರು ನಗರದ ಪೀಣ್ಯದಲ್ಲಿ ರಿಕ್ಷಾ ಚಾಲಕರೊಬ್ಬರ ಮೇಲೆ ಹಾಡು ಹಗಲೇ ಗೂಂಡಾ ದಾಳಿ ನಡೆದಿತ್ತು. ಆದರೆ ಮನೆಯಿಂದ ಯಾವುದೇ ಸಾಮಾನು ಸರಂಜಾಮುಗಳನು ದೋಚಿಲ್ಲ. ಅದು ದಾಳಿ ನಡೆಸಿದ ಗೂಂಡಾಗಳ ಉದ್ದೇಶವೂ ಆಗಿರಲಿಲ್ಲ. ಯಾವುದೇ ವೈಷಮ್ಯವೂ ಇದಕ್ಕೆ ಕಾರಣವಲ್ಲ. ಖಾಸಗಿ ಐಸಿಐಸಿಐ ಬ್ಯಾಂಕಿನಿಂದ ರಿಕ್ಷಾ ಚಾಲಕ ಪಡೆದಿದ್ದ 60,000 ರೂ.ಗಳಲ್ಲಿ ಸಾಧಾರಣ 20,000 ರೂ. ಬಾಕಿ ಇದ್ದುದರ ಪರಿಣಾಮ ಆ ಬ್ಯಾಂಕು ಸಾಲ ವಸೂಲಿ ಮಾಡಲು ಅನುಸರಿಸಿದ ಕ್ರಮ ಗೂಂಡಾ ದಾಳಿ. ಇಂತಹ ದಾಳಿಯಿಂದಾಗಿ ಕರ್ನಾಟಕದಲ್ಲಿ ಮಾತ್ರವಲ್ಲದೆ ದೇಶದ ವಿವಿದೆಡೆ ಕೆಲವರು ಸತ್ತಿದ್ದರೆ, ಇನ್ನು ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಿಂದೆ ಖಾಸಗಿ ಲೇವಾದೇವಿಗಾರರು ತಾವು ನೀಡಿದ ಜಾಸ್ತಿ ಬಡ್ಡಿಯ ಸಾಲವನ್ನು ವಸೂಲಿ ಮಾಡಲು ಇಂತಹ ಕ್ರಮಗಳನ್ನು ಅನುಸರಿಸುತ್ತಿದ್ದರು. ಇಂದು ನಡೆಯುತ್ತಿರುವ ರೈತರ ಆತ್ಮಹತ್ಯೆಗೆ ಸರ್ಕಾರಗಳು ಅನುಸರಿಸುತ್ತಿರುವ ಕೃಷಿ ನೀತಿ ಪ್ರಮುಖ ಕಾರಣವಾದರೆ, ಈ ಲೇವಾದೇವಿಗಾರರ ಗೂಂಡಾ ಪ್ರವೃತ್ತಿಯೂ ಇನ್ನೊಂದು ಕಾರಣ.

ವಿದೇಶಿ ಬ್ಯಾಂಕುಗಳು ನುಸುಳಿದ ನಂತರ...

ಬ್ಯಾಂಕುಗಳ ಮಟ್ಟದಲ್ಲಿ ಇಂತಹ ಪ್ರವೃತ್ತಿಗಳು ಆರಂಭವಾದುದು ಜಾಗತೀಕರಣದ ಪ್ರಕ್ರಿಯೆಯ ನಂತರ. ವಿದೇಶಿ ಬ್ಯಾಂಕುಗಳು ದೊಡ್ಡ ಮಟ್ಟದಲ್ಲಿ ಭಾರತಕ್ಕೆ ನುಸುಳಿದ ನಂತರ ಅಮೇರಿಕಾ ಮೂಲದ ದೈತ್ಯ ಬ್ಯಾಂಕಿಂಗ್ ಕಂಪನಿ ಸಿಟಿ ಬ್ಯಾಂಕ್ ಚೆನ್ನೈನಲ್ಲಿ ತನ್ನ ಶಾಖೆಯನ್ನು ತೆರೆದು ಬೆಂಗಳೂರಿನಲ್ಲಿ ತಾನು ನೇಮಿಸಿದ ಖಾಸಗಿ ವ್ಯಕ್ತಿ/ಸಂಸ್ಥೆಗಳು ಮೂಲಕ ಸಾಲ ನೀಡುತ್ತಿತ್ತು. ಹಾಗೆಯೇ ಖಾಸಗಿ ವ್ಯಕ್ತಿ ಮತ್ತು ಸಂಸ್ಥೆಗಳ ಮೂಲಕವೇ ಸಾಲ ವಸೂಲಿಯನ್ನು ಕೂಡಾ ಮಾಡುತ್ತಿತ್ತು. ಇಂದು ಬೆಂಗಳೂರಿನಲ್ಲಿ ಶಾಖೆ ತೆರೆದಿದ್ದರೂ ಸಾಲ ವಸೂಲಿಗೆ ಅದೇ ಕ್ರಮವನ್ನು ಮುಂದುವರಿಸುತ್ತಿದೆ.

<u>ಜನರಿಗೆ ನೀಡಿದ ಸಾಲ ವಸೂಲಿ ಮಾಡಲು ಬ್ಯಾಂಕುಗಳು ಗೂಂಡಾಗಳನ್ನು ಬಳಸುವ ಬಗ್ಗೆ ಗೊತ್ತೆ ನಿಮಗೆ? ಬ್ಯಾಂಕಿಂಗ್ ಕ್ಷೇತ್ರದಲ್ಲಿ ಖಾಸಗಿ ಬ್ಯಾಂಕ್, ಬಹುರಾಷ್ಟ್ರೀಯ ಬ್ಯಾಂಕ್‌ಗಳು ಕಾಲಿಟ್ಟ ಮೇಲೆ ಇಂಥದ್ದು ಆರಂಭವಾಗಿದೆ.</u>



ಹೊರ ಗುತ್ತಿಗೆ

ಉದಾರೀಕರಣ ನೀತಿಯ ನಂತರ, ಬ್ಯಾಂಕುಗಳು ನಾ ಮುಂದು ತಾ ಮುಂದು ಎಂದು ಸಾಲ ನೀಡಲು ಮುಂದೆ ಬರುತ್ತಿವೆ. ನಿಮಗೊಂದು ಮೊಬೈಲ್ ಅಥವಾ ಲ್ಯಾಂಡ್ ಲೈನ್ ಇದೆಯೆಂದರೆ, ನಿಮ್ಮ ನಂಬರ್ ಏನಾದರೂ ಬ್ಯಾಂಕುಗಳು ನೇಮಿಸಿದ ಕಾಲ್‌ಸೆಂಟರ್‌ಗೆ ತಿಳಿಯಿತೆಂದರೆ, ನಿಮಗೆ ಸಾಲ ಬೇಕೆ ಎಂದು ಪುಸಲಾಯಿಸುತ್ತಾರೆ, ಗೋಗರೆಯುತ್ತಾರೆ. ಸಾಲ ಬೇಡದಿದ್ದವರಿಗೂ ತೆಗೆದುಕೊಳ್ಳುವಂತೆ ಪ್ರೇರೇಪಿಸುತ್ತಾರೆ. ವೈಯಕ್ತಿಕ ಆರ್ಥಿಕ ಅಡಚಣೆಯಿಂದಾಗಿ ಅಥವಾ ಸರ್ಕಾರದ ನೀತಿಗಳ ಪರಿಣಾಮವಾಗಿ ಸಾಲವನ್ನು ತೀರಿಸದೆ ಹೋದಲ್ಲಿ ಹೊರಗುತ್ತಿಗೆಯನ್ನು ಪಡೆದುಕೊಂಡ ಖಾಸಗಿ ಸಂಸ್ಥೆ (ಗೂಂಡಾ ಪಡೆ) ಸಾಲ ವಸೂಲಿ ಮಾಡಲು ಬೆದರಿಕೆ, ಧಾಳಿಗಳನ್ನು ನಡೆಸುತ್ತವೆ.

ಇಲ್ಲಿ ಸಾಲ ನೀಡುವುದು ಬ್ಯಾಂಕುಗಳಾದರೂ ಸಾಲ ಬೇಕೆ ಎಂದು ಪ್ರೇರೇಪಿಸುವವರಾಗಲೀ ಸಾಲ ವಸೂಲಿ ಮಾಡುವ ಗೂಂಡಾ ಪಡೆಗಳಾಗಲೀ ಬ್ಯಾಂಕ್ ನೌಕರರಲ್ಲ. ಆ ಎರಡೂ ಕೆಲಸವನ್ನು ಹೊರಗುತ್ತಿಗೆಗೆ ನೀಡಲಾಗಿರುತ್ತದೆ. ದಾಳಿಗೊಳಗಾದ ವ್ಯಕ್ತಿ ಅಥವಾ ಅವರ ಕುಟುಂಬದವರು ಪೋಲೀಸ್‌ಗೆ ದೂರು ನೀಡಿದರೆ ಬ್ಯಾಂಕುಗಳಿಂದ ನುಣುಚಿಕೊಳ್ಳುವ ಉತ್ತರ 'ನಮಗೂ ಧಾಳಿಗೂ ಸಂಬಂಧವಿಲ್ಲ' ನಾವು ಸಾಲ ವಸೂಲಿ ಮಾಡಲು ಹೇಳಿದ್ದೇವೆ. ಧಾಳಿ ನಡೆಸಲು ಹೇಳಿಲ್ಲ" ಎಂಬ ಹಾರಿಕೆಯ ಮಾತು.

ಶ್ರೀಮಂತರಿಗೆ ವಿನಾಯ್ತಿ

ಬ್ಯಾಂಕುಗಳಲ್ಲಿ ವಸೂಲಾಗದೆ ಇರುವ ಕೆಟ್ಟ ಸಾಲ 1 ಲಕ್ಷ ಕೋಟಿ ರೂ. ಗಿಂತಲೂ ಜಾಸ್ತಿ (1,00,00 ಕೋಟಿ ರೂ. ಅಥವಾ 1,00,000,00,00,000 ರೂ) ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಬಡ ಮಧ್ಯಮ ವರ್ಗದವರಿಗೆ ನೀಡಿದ ಸಾಲ ಕೇವಲ ಶೇಕಡಾ 5 ರಿಂದ 10 ರಷ್ಟು. ಅಂದರೆ 5000 ದಿಂದ 10000 ಕೋಟಿ ರೂ. ಆದರೆ ಬ್ಯಾಂಕ್‌ಗಳು ನೇಮಿಸಿದ ಖಾಸಗಿ ವ್ಯಕ್ತಿ/ಸಂಸ್ಥೆಗಳು ದಾಳಿ ನಡೆಸುತ್ತಿರುವುದು ಸಣ್ಣ ಸಾಲಗಾರರ ಮೇಲೆ ಮಾತ್ರ.

ಕರ್ನಾಟಕದ ರಾಜ್ಯ ಸಭಾ ಸದಸ್ಯರುಗಳಾದ ಯು.ಬಿ. ಸಮೂಹದ ವಿಜಯಮಲ್ಯ, ಬಿಪಿಎಲ್ ಸಮೂಹದ ಚಂದ್ರಶೇಖರ್, ಮಾಜಿ ಲೋಕಸಭಾ ಸದಸ್ಯ ಶ್ರೀಕಂಠದತ್ತ ಒಡೆಯರ್, ಅಬಕಾರಿ ಉದ್ದಿಮೆದಾರರು, ಆರ್.ಎನ್.ಶೆಟ್ಟಿ ಉದ್ದಿಮೆ ಸಮೂಹ ಇವರೆಲ್ಲ ನೂರಾರು ಕೋಟಿ ರೂ.ಗಳನ್ನು ಬ್ಯಾಂಕುಗಳಿಗೆ ನೀಡಬೇಕಾಗಿದೆ. ಆದರೆ ಇವರ ಮೇಲೆ ದಾಳಿ ನಡೆಸುವುದಿರಲಿ, ಇವರ ಆಸ್ತಿಯನ್ನು ಮುಟ್ಟುಗೋಲು ಹಾಕಲು ಸಹ ಯಾವುದೇ ಬ್ಯಾಂಕುಗಳು ಪ್ರಯತ್ನಿಸುತ್ತಿಲ್ಲ.

ಆಸ್ತಿ ವಸೂಲಿ ಕಂಪನಿ

ಬ್ಯಾಂಕುಗಳಲ್ಲಿನ ಎನ್‌ಪಿಎ ಯನ್ನು ವಸೂಲಿ ಮಾಡಲು 2002 ರಲ್ಲಿ ಕೇಂದ್ರ ಸರ್ಕಾರವು ಕಾನೂನನ್ನು ಜಾರಿಗೆ ತಂದಿತು. ಎನ್‌ಪಿಎ ವಸೂಲಿ ಮಾಡಲು ಕಾಯಿದೆ ತಂದಿರುವುದು ಒಳ್ಳೆಯದೆ. ಆದರೆ ಈ ಕಾಯಿದೆ ಪ್ರಕಾರ ಆಸ್ತಿ ವಸೂಲಿ ಕಂಪನಿಯನ್ನು (Asset recovery company) ಯಾರು ಬೇಕಾದರೂ ರಚಿಸಿಕೊಳ್ಳಬಹುದು. ಆ ಮೂಲಕ ಖಾಸಗಿ ಬ್ಯಾಂಕುಗಳ ಮತ್ತು ಸರ್ಕಾರಿ ಬ್ಯಾಂಕುಗಳ ಸಾಲವನ್ನು ವಸೂಲಿ ಮಾಡಲು ಈ ಕಂಪನಿಗಳು ಕೆಲಸ ಮಾಡುತ್ತವೆ. ಇವುಗಳು ಹೆಚ್ಚಾಗಿ ಖಾಸಗಿಯವರ ಕೈಯಲ್ಲೇ ಇದೆ. ಸಾಲವನ್ನು ವಸೂಲಿ ಮಾಡಿಕೊಡಲು ಈ ಕಂಪನಿಗಳು ಸಾಧಾರಣ ಶೇ 20 ರಿಂದ 25 ರಷ್ಟು ಕಮಿಷನ್ ಪಡೆದುಕೊಳ್ಳುತ್ತವೆ. ಅಂದರೆ 1 ಲಕ್ಷ ರೂ. ಸಾಲ ವಸೂಲಿ ಮಾಡಿಕೊಟ್ಟರೆ, 25,000 ರೂ. ಈ ಕಂಪನಿಗೆ. 75,000 ರೂ. ಮಾತ್ರ ಬ್ಯಾಂಕಿಗೆ!

ಒಟ್ಟಾರೆಯಾಗಿ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿಸುವ, ಬಡವರನ್ನು, ಮಧ್ಯಮವರ್ಗದವರನ್ನು ದಂಡಿಸುವ ಈ ವ್ಯವಸ್ಥೆ ವಿರುದ್ಧ ದನಿ ಎತ್ತಬೇಕಾಗಿದೆ. ಸಾಲ ವಸೂಲಿ ಮಾಡುವ ನೆಪದಲ್ಲಿ ಗೂಂಡಾಗಳನ್ನು ಬಳಸುವ ಬ್ಯಾಂಕುಗಳ ವಿರುದ್ಧ ಐಕ್ಯ ಹೋರಾಟವನ್ನು ನಡೆಸಬೇಕಾಗಿದೆ.

■ ಬಾಲಕೃಷ್ಣ ಶೆಟ್ಟಿ

ಕರಡಿ ಕುಣಿತ

ರಾಜ, ಅದೇನ್ಲ ದಿಸಾ ಸೇರು ಪೇಟೆ ಕುಸ್ತ ಅಂತ ಬತ್ತೈತೆ ಪೇಪರ್‌ನಾಗೆ? ತಿಮ್ಮ ಹೇಳಿದ. 'ಅದೇನೋ ಬಿಲ್ಡಿಂಗ್ ಇರ್‍ಬೇಕ್ ಕನ್ಲ. ಬಿದ್ದೋಗಿರ್‍ಬೇಕು, ದಿನಾ ಟೀವಿ ನ್ಯೂಸಲ್ಲಿ ತೋರುಸ್ತಾರೆ' ಬೋರ ಹೇಳಿದ.

'ರಕ್ತಪಾತ ಅಂತೆಲ್ಲ ಬರ್‍ತೈತಪ್ಪ ಬಾಳ ಜನ ಸತ್ತೋಗಿರ್‍ಬೇಕು ಬಿಲ್ಡಿಂಗ್ ಕೆಳ್ಗೆ ಸಿಕ್ಕಿ' ಸಿದ್ದ ಹೇಳಿದ.

'ಅಂಗಲ್ಲ ಕನ್ರಲಾ, ಯಾವ ಬಿಲ್ಡಿಂಗೂ ಬಿದ್ದಿಲ್ಲ' ಎಂದ ರಾಜ, 'ಮತ್ತೇನ್ಲಾ ಅದು ಷೇರು ಅಂದ್ರೆ? ತಿಮ್ಮ ಕೇಳಿದ. 'ಸೇರು ಪಾವು ಅಲ್ರಪಾ ಅದು, ಷೇರು, ಷೇರು' ರಾಜ ಹೇಳಿದ.

'ನಾನೂ ಅದೇ ಏಳಿದ್ದು, ಏನೇಳ್ಲಾ ಅದು?' ತಿಮ್ಮ ಕೇಳಿದ. 'ಷೇರು ಪೇಟೆ ಅಂದ್ರೆ ಕಂಪನಿಗಳಲ್ಲಿ ಹಣ ಹೂಡೋ ಮಾರುಕಟ್ಟೆ ಕಣ್ರಲಾ' ರಾಜ ಹೇಳಿದ.

'ಏನು ಹೆಣ ಊಳೋಕೆ ಮಾರ್ಕಟ್ಟೇನಾ?' ಬೋರ ಕೇಳಿದ. ಹೆಣ ಹೂಳೋದಲ್ಲೋ ಹಣ ಹೂಡೋದು. ಅಂದ್ರೆ ಬಂಡ್ವಾಳ ಹಾಕೋದು ಎಂದ ರಾಜ.

'ಅದುಕ್ಕೇನ್ಲಾ ಆಯ್ತು? ಗೂಳಿ ಬಂತು ಅನ್ತರೆ, ಕಲ್ಡಿ ಕುಣಿತೈತೆ ಅಂತರೇ, ಉಲಿ ಸಿಮ್ಮನೂ ಇರ್‍ತವ ಅಲ್ಲಿ?' ಸಿದ್ದ ಕೇಳಿದ.

'ಷೇರು ಬೆಲೆ ಜಾಸ್ತಿ ಆಗ್ತಿದ್ದರೆ ಸೆನ್ಸೆಕ್ಸು ಏರುತ್ತೆ, ಅದಕ್ಕೆ ಗೂಳಿ ಅಂತಾರೆ. ಷೇರು ಬೆಲೆ ಕಡ್ಮೆ ಆದ್ರೆ ಸೆನ್ಸೆಕ್ಸು ಇಳಿಯುತ್ತೆ. ಅದಕ್ಕೆ ಕರಡಿ ಅಂತಾರೆ' ವಿವರಿಸಿದ ರಾಜು ಸರಳವಾಗಿ.

'ಥೂ ಅದೇನ್ಲಾ ನಾವು ಸೇರು ಇಚಾರ ಕೇಳಿದ್ರೆ ನೀನು ಏರ್‍ತತೆ, ಇಳಿತಿತೆ, ಸೆಕ್ಸು ಪಕ್ಸು ಅಂತ ಪೋಲಿ ಇಚಾರ ಏಳ್ತಿದೀಯಾ?' ಬೋರ ಕೇಳಿದ.

'ಸೆಕ್ಸ್ ಅಲ್ರಲಾ, ಸೆನ್ಸೆಕ್ಸು. ಹೋಗ್ಲಿ ತೆಪ್ಗಿರ್‍ರಲಾ. ನಿಮ್ಗೆ ಅರ್ಥವಾಗದ ವಿಷಯದ ಬಗ್ಗೆ ಯಾಕೆ ತಲೆ ಕೆಡಿಸ್ಕೋತಿರಾ' ಎಂದ ರಾಜ.

'ಇಲ್ಲಿ ಬೇಜಾರ್ ಮಾಡ್ಕೋಬೇಡ, ನಿನ್ಗೇನ್ ಗೊತ್ತೈತೆ ಏಳ್ಲಾ ನಮ್ಗೂ ಬೇರೆ ಕೆಲ್ಸ ಏನೈತೆ?' ಬೋರ ಕೇಳಿದ.

'ಟೊಮ್ಯಾಟೋ ಬೆಲೆ ಇಳ್ದಾಗ ರಸ್ತೆಲೆಲ್ಲ ಚೆಲ್ಲಾಡಿ ಒಯ್ತಾರಲ್ಲ ರೈತ್ರು, ಅಂಗೇ ಸೇರು ಬೆಲೆ ಇಳ್ದಾಗ ರಸ್ತೆಗೆಲ್ಲ ಚೆಲ್ಲಾಡ್ತಾರ?' ಸಿದ್ದ ಕೇಳಿದ.

'ಚೆಲ್ಲಾಡಕ್ಕೆ ಅಲ್ಲಿ ಸಾಮಾನೇನಿರಲ್ಲ, ಬರಿ ವ್ಯಾಪಾರ ಕನ್ರಲಾ' ಎಂದ ರಾಜ.

'ಅದೇನೋ ಲಕ್ಷಾಂತ್ರ ಕೋಟ್ರುಪಾಯಿ ಕೊಚ್ಕೊಂಡೊಯ್ತು ಅಂತಾರಲ್ಲ ಎತ್ಲಾಗೋಯ್ತುವೆ?' ತಿಮ್ಮ ಕೇಳಿದ.

'ಎಲ್ಲಾ ಪರದೇಶಕ್ಕೆ ಹೋಗ್ತವೆ, ಅಪ್ರದ್ದೆ ಆಟ ಇದೆಲ್ಲ' ಎಂದ ರಾಜ. 'ಅದೇನ್ಲ ಆಟ ಅಂತೀಯಾ? ಅದೇನ್ ಆಟವೇ?' ಬೋರ ಕೇಳಿದ.

'ಹ್ಞೂಂ, ಮತ, ನಿಮ್ಮ ಓಸಿ, ಜುಗಾರಿ, ಇಸ್ಪೀಟು, ರೇಸು, ಸಿಂಗಲ್ ನಂಬರ್ ಲಾಟ್ರಿ ಇಲ್ವೇ ಇದುನ್ನೇಲ್ಲಾ ಮೀರಿಸೋ ದೊಡ್ಡ ಜೂಜಾಟ ಅದು' ಎಂದ ರಾಜ.

'ಅದೇನೂ ರಕ್ತಪಾತ ಅಂತಿದ್ರಲ್ಲ ಎಷ್ಟು ಜನ ಸತ್ರು' ಸಿದ್ದ ಕೇಳಿದ. ಸಾಯಕೆ ಅವ್ರೇನು ರೈತ್ರೇನಲ್ಲಾ? ಎಲ್ಲಾ ದೊಡ್ ಜನಗಳು ಫೈನಾನ್ಸ್ ಮಿನಿಸ್ಟನ್ನೆ ಅಲ್ಲಾಡುಸ್ ಬುಡ್ತಾರೆ. ಫೈನಾನ್ಸ್ ಮಿನಿಸ್ಟ್ರು ಅಟ್ರಗೆ ಅಡ್‌ಬಿದ್ದು ಬೇಡ್ಕೊತಾರೆ ಬನ್ನಿ ಬನ್ನಿ ನಿಮ್ಗೆ ಟ್ಯಾಂಕ್ಸೂ ಇಲ್ಲ ಏನೂ ಇಲ್ಲ ಬನ್ನಿ ಬನ್ನಿ ಅಂತ' ಎಂದ ರಾಜ.

'ದೊಡ್ಡೋರು ಅಂದ್ರೆ ಯಾರಲ' ಕೇಳಿದ ತಿಮ್ಮ.

'ಏಯ್ ಗಾದೇನೇ ಇಲ್ವೇನ್ಲಾ' ದುಡ್ಡಿದ್ದೋನೆ ದೊಡ್ಡಪ್ಪ ಅಂತ?' ಬೋರ ಹೇಳಿದ.

■ ಶ್ರೀನಿವಾಸ.ವಿ

ಜನಶಕ್ತಿ ಕನ್ನಡ ವಾರಪತ್ರಿಕೆ

ಹೆಚ್ಚು ಹೆಚ್ಚು ಜನರು ಭಾಗವಹಿಸುವಂತೆ ಮಾಡುವ ಮೂಲಕ, ಹೆಚ್ಚು ಮುಸ್ಲಿಂ ಅಲ್ಪಸಂಖ್ಯಾತರು ಭಾಗವಹಿಸುವಂತೆ ಮಾಡುವ ಮೂಲಕ ಮಾತ್ರವೇ ಅವರ ನಿಜವಾದ ಉದ್ದೇಶವನ್ನು ಸಾಧಿಸಬಲ್ಲರು. ಇಲ್ಲದಿದ್ದರೆ ಯಾರ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಅದೇ ಅಮೇರಿಕಾ ಇಂಗ್ಲೆಂಡ್‌ಗಳ ಕೈಯಾಳುಗಳಾಗಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ದುರ್ಬಲಗೊಳಿಸಿರುತ್ತಾರೆ.



ಬೆಂಗಳೂರು ಮೂಲದ ಭಯೋತ್ಪಾದಕರು?



ಜಿ.ಎನ್.ನಾಗರಾಜ್

ಬೆಂಗಳೂರಿನಲ್ಲಿ ಬೆಳೆದು ಅತ್ಯಾಧುನಿಕ ಉನ್ನತ ತಂತ್ರಜ್ಞಾನದ ಶಿಕ್ಷಣ ಪಡೆದ ಮೂರು ಜನ ಯುವಕರು ಲಂಡನ್ ಮತ್ತು ಗ್ಲಾಸ್ಗೋ ನಗರಗಳಲ್ಲಿ ಭಯೋತ್ಪಾದಕ ಕೃತ್ಯಗಳನ್ನೆಸಗಿದ್ದಾರೆಂಬ ಸಂಶಯದ ಮೇಲೆ ಬಂಧನಕ್ಕೊಳಗಾಗಿದ್ದಾರೆ. ಇದು ಬೆಂಗಳೂರಿನ ಯುವಕರು, ಏಕೆ ಭಾರತದ ಯುವಕರು ಅಂತರರಾಷ್ಟ್ರೀಯ ಭಯೋತ್ಪಾದಕ ಕೃತ್ಯವೊಂದರಲ್ಲಿ ಭಾಗಿಯಾಗಿ ಸಿಕ್ಕಿಬಿದ್ದಿರುವ ಮೊದಲ ಪ್ರಕರಣ ಇದು. ಆದ್ದರಿಂದ ಬೆಂಗಳೂರಿನಲ್ಲಿ, ಭಾರತದಲ್ಲಿ, ಅದಕ್ಕಿಂತಲೂ ಹೆಚ್ಚಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹಳ ಚರ್ಚೆಯನ್ನು ಹುಟ್ಟುಹಾಕಿದೆ, ಗಾಬರಿಯನ್ನು ಮೂಡಿಸಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು, ಭಾರತ ಭಯೋತ್ಪಾದಕರ ಹೊಸ ತವರು, ಅಲ್‌ಖೈದಾ ಸಂಘಟನೆಯ ವಿಸ್ತರಣೆಯ ಹೊಸ ನೆಲೆ ಎಂದು ಹೆಸರು ಪಡೆಯುತ್ತಿರುವದನ್ನು ತೊಡೆದು ಹಾಕಲು ಪ್ರಧಾನ ಮಂತ್ರಿಯವರೇ ವಿವರಣೆ ನೀಡುವ ಅಗತ್ಯ ಬಂದಿದೆ ಮತ್ತುಬ್ರಿಟನ್ ಪ್ರಧಾನ ಮಂತ್ರಿಯ ಜೊತೆಯಲ್ಲಿ ಮಾತನಾಡಿದ್ದಾರೆ.

ಬೆಂಗಳೂರಿನಲ್ಲಿ ಈ ವಸ್ತು ಪತ್ರಿಕೆಗಳ ಮಾಧ್ಯಮಗಳ ಪ್ರಸಾರವನ್ನು ಹೆಚ್ಚಿಸಲು ರಾಜಕೀಯ ವಸ್ತುವಾಗಿದೆ. ಆ ಕುಟುಂಬಗಳನ್ನು ಕಾಡುವ ತಲೆ ನೋವಾಗಿದೆ. ಆ ನಡುವೆ ಈ ಯುವಕರು ಬೆಂಗಳೂರಿನಲ್ಲಿ ತಬ್ಲೀಕ್ ಎನ್ನುವ ಸಂಘಟನೆಯ ಪ್ರಭಾವಕ್ಕೆ ಒಳಗಾಗಿದ್ದರು. ಆ ಸಂಘಟನೆಯ ಮೂಲಭೂತವಾದಿ ನಿಲುವನ್ನು ಪ್ರತಿಪಾದಿಸುತ್ತಿದ್ದರು ಎಂಬುದು ಬೆಳಕಿಗೆ ಬಂದಿದೆ. ಆದರೆ ಪತ್ರಿಕೆ, ಮಾಧ್ಯಮಗಳಲ್ಲಿ ಭಯೋತ್ಪಾದಕ ಸಿದ್ಧಾಂತದ ಸೆಳವಿಗೆ ಒಳಗಾಗಲು ಕಾರಣವೇನು ಮತ್ತು ಆ ಪ್ರಭಾವವನ್ನು ತೊಡೆಯುವುದು ಹೇಗೆ ಎಂಬ ಬಗ್ಗೆ, ತಕ್ಷಣಕ್ಕೆ ತಬ್ಲೀಕ್ ಮೊದಲಾದ ಮೂಲಭೂತವಾದಿ ಸಂಘಟನೆಗಳ ಪ್ರಭಾವ ಎಷ್ಟಿದೆ, ಯಾವ ಪ್ರದೇಶದಲ್ಲಿ ಅವರ ಚಟುವಟಿಕೆಗಳು ಏನೇನು ಎಂಬುದರ ಬಗ್ಗೆ ವಿವರವಾದ ವರದಿಗಳ ಸಂಗ್ರಹ ಆಗಬೇಕಾಗಿದೆ. ಅವುಗಳ ಬಗ್ಗೆ ಭದ್ರತೆ ಎಚ್ಚರವನ್ನು ಸರ್ಕಾರ ಮತ್ತು ಸಮಾಜ ವಹಿಸಬೇಕಾಗಿದೆ.

ಮುಸ್ಲಿಂ ಮೂಲಭೂತವಾದದ ಬೆಳವಣಿಗೆಗೆ ಅಮೇರಿಕಾದ ಒಳ ಸಂಚು

ಲಂಡನ್ ಮತ್ತು ಗ್ಲಾಸ್ಗೋಗಳಲ್ಲಿ ಭಯೋತ್ಪಾದಕ ಕೃತ್ಯಗಳ ಪ್ರಯತ್ನ ನ್ಯೂಯಾರ್ಕ್‌ನ ಮೇಲೆ ನಡೆದ ಭಯೋತ್ಪಾದಕ ಕೃತ್ಯಗಳ ಮುಂದುವರಿಕೆ. ಇರಾಕ್‌ನ ಮೇಲಿನ ಯುದ್ಧ ಮತ್ತು ಆಕ್ರಮಣ ಇಂಗ್ಲೆಂಡ್‌ನ ಪಾತ್ರ ಜಗತ್ತಿನಾದ್ಯಂತ ಇಂಗ್ಲೆಂಡ್ ಮೇಲೆ ಆಕ್ರೋಶ ಹೆಚ್ಚಾಗಲು ಸ್ಫೋಟವಾಗಲು ಕಾರಣವಾಗಿದೆ.

ಅಮೇರಿಕಾ ಮತ್ತು ಇಂಗ್ಲೆಂಡ್‌ಗಳ ಬಗ್ಗೆ ಇಂದು ಜಗತ್ತಿನಲ್ಲಿ ಭಯಂಕರ ಸಿಟ್ಟಿದೆ. ಅರಬ್ ಪ್ರದೇಶದಲ್ಲಿನ ತೈಲ ಸಂಪತ್ತಿನ ದೋಚುವಿಕೆಗಾಗಿ ಆ ಪ್ರದೇಶದಲ್ಲಿ ಯುದ್ಧ ಆಕ್ರಮಣಗಳ ಸರಮಾಲೆ ಒಂದು ಕಡೆ, ಇಸ್ರೇಲ್‌ಗೆ ಕುಮ್ಮಕ್ಕು ದಾಳಿ, ಮತ್ತೊಂದು ತಡೆ ಅದಕ್ಕೆ ಕಾರಣ. ಅರಬ್ ಪ್ರದೇಶದಲ್ಲಿ ಜನರ ಈ ಸಂಕಟ ಪ್ರಜಾಪ್ರಭುತ್ವವಾದಿ ಮಾರ್ಗದಲ್ಲಿ ಅಭಿವ್ಯಕ್ತವಾಗಲು, ಸಾಮ್ರಾಜ್ಯ ಶಾಹಿ ಶಕ್ತಿಗಳ ವಿರುದ್ಧ ಒಂದು ಮಹಾ ಹೋರಾಟವಾಗಿ ರೂಪುಗೊಳ್ಳಲು ಅವಕಾಶವಿಲ್ಲ ದಂತಾಗಿದೆ. ಆ ಪ್ರದೇಶದಲ್ಲಿ ಪಾಳೆಯಗಾರಿ ಪ್ರಭುತ್ವಗಳಿಗೆ ಸರ್ವಾಧಿಕಾರಿ ಪ್ರಭುತ್ವಗಳಿಗೆ ಅಮೇರಿಕಾ ಬೆಂಬಲ ನೀಡುತ್ತಾ ಪ್ರಜಾಪ್ರಭುತ್ವದ ಹೆಸರು ಹೇಳುತ್ತಲೇ ಪ್ರಜಾಪ್ರಭುತ್ವ ತುಳಿದಿಟ್ಟಿದೆ. ಅದೇ ಸಮಯದಲ್ಲಿ ಜನರ ಸಿಟ್ಟನ್ನು ಸಾಮ್ರಾಜ್ಯಶಾಹಿಗಳ ವಿರುದ್ಧವಾಗಿ ತಿರುಗುವುದನ್ನು ತಪ್ಪಿಸಲು ಧಾರ್ಮಿಕ ಸ್ವರೂಪ ನೀಡಲು ಆ ಪ್ರದೇಶದ ಪ್ರತಿಗಾಮಿ ಶಕ್ತಿಗಳೂ, ಅದಕ್ಕೆ ಬೆಂಬಲವಾಗಿ ಅಮೇರಿಕವು ಅನೇಕ ಒಳಸಂಚುಗಳನ್ನು ನಡೆಸುತ್ತಿವೆ. ಭಯೋತ್ಪಾದನೆಯ ವಿರುದ್ಧ ಯುದ್ಧದ ಹೆಸರಿನಲ್ಲಿ ಜಗತ್ತಿನಾದ್ಯಂತ ನಡೆಸುತ್ತಿರುವ ಅಕ್ರಮಗಳು ಹಾಗೂ ಇರಾಕ್ ಮೇಲಿನ ಆಕ್ರಮಣದಿಂದಾಗಿ ಬುಶ್ ವಿರುದ್ಧದ ಸಿಟ್ಟು ಮುಗಿಲುಮುಟ್ಟಿ ರುವಾಗಲೇ, ಬುಶ್, ಭಾರತ, ಪಾಕಿಸ್ಥಾನ ಮೊದಲಾದ ಏಷ್ಯಾದ ಕೆಲವು ಪ್ರದೇಶಗಳಿಗೆ ಭೇಟಿ ನೀಡುವ ಕಾರ್ಯಕ್ರಮವಿದ್ದಾಗಲೇ ಮೂರು ತಿಂಗಳ ಹಿಂದೆ ಯಾವಾಗಲೋ ಪ್ರಕಟವಾಗಿದ್ದ ಮಹಮದ್ ಪೈಗಂಬರರ ಬಗೆಗಿನ ಕಾರ್ಟೂನ್‌ಗಳನ್ನು ಹಿಡಿದು ಹಲವು ಲಕ್ಷ ಜನರ ಪ್ರತಿಭಟನೆಯನ್ನು ಏರ್ಪಡಿಸಿದ್ದು ಇಂತಹುದೇ ಒಳಸಂಚಿನ ಭಾಗ. ಮುಸ್ಲಿಂ ಮೂಲಭೂತವಾದಿ ಸಂಘಟನೆಗಳಿಗೆ ಅರಬ್ ಪ್ರಭುತ್ವಗಳಿಂದ ಹಣದ ಹರಿವು ಮತ್ತು ಆ ಮೂಲಕ ಅಮೇರಿಕಾದ ಅನೇಕ ಬಂಡವಾಳಶಾಹಿಗಳು ಸ್ಥಾಪಿಸಿದ ಫೌಂಡೇಷನ್ ಹಾಗೂ ಟ್ರಸ್ಟ್‌ಗಳ ಹಣದ ನೆರವು ಕೂಡ ಇಂತಹುದೇ ಒಳ ಸಂಚಿನ ಭಾಗ.

ಇಂತಹ ಒಳಸಂಚುಗಳ ಫಲವಾಗಿಯೇ ಮುಸ್ಲಿಂ ಮೂಲಭೂತವಾದದ ಯಥೇಚ್ಛ ಬೆಳವಣಿಗೆ ಮತ್ತು ಅದರ ಮುಂದುವರಿದ ಭಾಗವಾಗಿ ಭಯೋತ್ಪಾದಕತೆಯ ಬೆಳವಣಿಗೆಯನ್ನು ಕಾಣುತ್ತಿರುವುದು. ಭಯೋತ್ಪಾದಕರೂ ಒಳ ಸಂಚಿನ ಭಾಗಿಗಳೇ? ಇದೇ ಅಮೇರಿಕಾ ಹಾಗೂ ಇತರೆ ಸಾಮ್ರಾಜ್ಯಶಾಹಿಗಳು ಬಯಸುತ್ತಿರುವುದು. ಆಗ ಭಯೋತ್ಪಾದನೆಯ ವಿರುದ್ಧದ ಹೋರಾಟದ ಹೆಸರಿನಲ್ಲಿ ಇಡೀ ಜಗತ್ತಿನ, ಮುಸ್ಲಿಮೇತರರರ ಸಾಮ್ರಾಜ್ಯಶಾಹಿ ವಿರೋಧಿ ಸಿಟ್ಟನ್ನು ಭಯೋತ್ಪಾದಕರ ವಿರುದ್ಧ, ಅದರ ಹೆಸರಿನಲ್ಲಿ ಮುಸ್ಲಿಮರ ವಿರುದ್ಧ ತಿರುಗಿಸಿ ಕ್ರಿಶ್ಚಿಯನ್ ಮುಸ್ಲಿಂ, ಹಿಂದೂ, ಮುಸ್ಲಿಂ ಎಂಬ ಒಡಕನ್ನು ತರುವುದು. ಈ ನೆಪಗಳನ್ನು ಬಳಸಿಕೊಂಡು ಈಗ ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವವನ್ನು, ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನು ನಾಶ ಮಾಡುವುದು. ಸಾಮ್ರಾಜ್ಯಶಾಹಿಗಳ ವಿರುದ್ಧದ ಚಳುವಳಿಯನ್ನು ಪ್ರಜಾಪ್ರಭುತ್ವಕ್ಕಾಗಿ ಹೋರಾಟವನ್ನು ಅಡಗಿಸಿಬಿಡುವುದು. ಈ ಒಳಸಂಚು ಇಂದು ಯಶಸ್ವಿಯಾಗಿದೆ. ದುರಂತವೆಂದರೆ ಅಮೇರಿಕಾ ಮತ್ತು ಇಂಗ್ಲೆಂಡ್‌ಗಳ ವಿರುದ್ಧ ಸಿಟ್ಟಿನಿಂದ ಕುದಿಯುತ್ತಿರುವ ಮುಸ್ಲಿಂ ಯುವಕರೂ ಕೂಡ ತಮ್ಮ ನಿಜವಾದ ಉದ್ದೇಶಗಳಿಗೆ ವಿರುದ್ಧವಾಗಿ ಈ ಒಳಸಂಚಿನಲ್ಲಿ ಭಾಗಿಗಳೂ, ಬಲಿಗಳೂ ಆಗಿದ್ದಾರೆ.

ಸಾಮ್ರಾಜ್ಯಶಾಹಿ ವಿರೋಧಿ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಪರಿಹಾರ

ಭಯೋತ್ಪಾದಕರಿಗೆ, ಅವರ ಗುಂಪುಗಳಿಗೆ ಅಮೇರಿಕಾ, ಇಂಗ್ಲೆಂಡ್ ಮೇಲೆ ಸಿಟ್ಟಿರುವಂತೆಯೇ ಜಗತ್ತಿನ ನೂರಾರು ಕೋಟಿ ಜನರಿಗೆ ಮುಸ್ಲಿಂ ಮತ್ತು ಮುಸ್ಲಿಮೇತರ ಜನರಿಗೆ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿಗಳ ವಿರುದ್ಧ ಸಿಟ್ಟಿದೆ. ಇರಾಕ್ ಯುದ್ಧದ ವಿರುದ್ಧ ಬೆಳೆದು ಬಂದ ಅಗಾಧ ಚಳುವಳಿಯಲ್ಲಿ, ಜಾಗತೀಕರಣದ ವಿರುದ್ಧದ ಚಳುವಳಿಗಳಲ್ಲಿ ಇದು ವ್ಯಕ್ತವಾಗಿದೆ. ಆದ್ದರಿಂದ ಈ ಪ್ರಜಾಸತ್ತಾತ್ಮಕ ದಾರಿಯಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ಬಲಪಡಿಸುವುದು ತೀವ್ರಗೊಳಿಸುವುದು (ಹಿಂದೆ ಜಗತ್ತಿನಾದ್ಯಂತ ಸ್ವಾತಂತ್ರ್ಯ ಚಳುವಳಿಗಳು ಪಡೆದ ತೀವ್ರತೆ ಮತ್ತು ವ್ಯಾಪಕತೆಯನ್ನು ಪಡೆಯುವ ಮೂಲಕ) ಮಾತ್ರವೇ ಇದಕ್ಕೆ ಪರಿಹಾರ ಅಮೇರಿಕಾ ಇಂಗ್ಲೆಂಡ್‌ಗಳ ವಿರುದ್ಧದ ಕ್ರೋಧವನ್ನು ಈ ಯುವಕರು ಇಂತಹ ಸಾಮ್ರಾಜ್ಯಶಾಹಿ ವಿರೋಧೀ ಚಳುವಳಿಗಳಲ್ಲಿ ಹೆಚ್ಚು ಹೆಚ್ಚು ಜನರು ಭಾಗವಹಿಸುವಂತೆ ಮಾಡುವ ಮೂಲಕ ಹೆಚ್ಚು ಮುಸ್ಲಿಂ ಅಲ್ಪಸಂಖ್ಯಾತರು ಭಾಗವಹಿಸುವಂತೆ ಮಾಡುವ ಮೂಲಕ ಮಾತ್ರವೇ ಅವರ ನಿಜವಾದ ಉದ್ದೇಶವನ್ನು ಸಾಧಿಸಬಲ್ಲರು. ಇಲ್ಲದಿದ್ದರೆ ಯಾರ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಅದೇ ಅಮೇರಿಕಾ ಇಂಗ್ಲೆಂಡ್‌ಗಳ ಕೈಯಾಳುಗಳಾಗಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ದುರ್ಬಲಗೊಳಿಸಿರುತ್ತಾರೆ.

ಬೆಂಗಳೂರು: ಭಯೊತ್ಪಾದಕರ ಸಂಪರ್ಕ ಕೇಂದ್ರಿತ ಸ್ಥಾನವಾಗುತ್ತಿದೆಯೇ?


ಬೆಂಗಳೂರು ಈಗ ಭಯೋತ್ಪಾದಕ ಸಂಪರ್ಕ ಕೇಂದ್ರಿತ ನಗರವಾಗುತ್ತಿದೆಯೇ? ಎಂಬ ಪ್ರಶ್ನೆ ಜನರಲ್ಲಿ ಮತ್ತೆ ಮತ್ತೆ ಕಾಡತೊಡಗಿದೆ. ಈ ಪ್ರಶ್ನೆ, ಹೀಗೆ ಬೆನ್ನಟ್ಟಿ ಕಾಡಲು ಅನೇಕ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಕೆಲ ವರ್ಷಗಳ ಹಿಂದೆ ಇಲ್ಲಿನ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಯ ಮೇಲೆ ಭಯೋತ್ಪಾದಕರು ದಾಳಿ ನಡೆಸಿ ಪುರಿ ಮತ್ತು ಮುಂತಾದವರನ್ನು ಬಲಿ ತೆಗೆದುಕೊಂಡರು. ಹಾಗೆ ಇತ್ತೀಚಿಗೆ ಹೊಸಪೇಟೆಯಲ್ಲಿ ಕಾಶ್ಮೀರ್ ಮೂಲದ ಯುವಕನೊಬ್ಬ ಪೋಲಿಸ್‌ರ ಕೈಗೆ ಸೆರೆಸಿಕ್ಕಿದಾಗ ಅನೇಕ ಮಾಹಿತಿಗಳು ಹೊರಬಂದವು. ಆದರೂ ಪೂರ್ಣ ಮಾಹಿತಿಗಳು ಹೊರಬರದೆ ಕೇವಲ ಕೆಲವೇ ಮಾಹಿತಿಗಳು ಹೊರಬಂದಿದ್ದು ಸಂಶಯ ಹೆಚ್ಚುವಂತೆ ಮಾಡಿತ

ಈಗ ಅದರ ಸಂಪೂರ್ಣ ವಿಚಾರಣೆ ತನಿಕೆ ಯಾವ ಹಂತ ತಲುಪಿದೆ ಎಂಬುದು ತಿಳಿಯಬೇಕು ಅಷ್ಟೆ. ಇದಿನ್ನು ಜನರ ಮನಸಿನಿಂದ ಮರೆಯಾಗುವ ಮುನ್ನವೆ ದೂರದ ಲ

ಲಂಡನ್ ಹಾಗೂ ಸ್ಕಾಟ್‌ಲೆಂಡಿನ್ ಗ್ಲಾಸ್ಗೋ ವಿಮಾನ ನಿಲ್ದಾಣದಲ್ಲಿ ಸ್ಫೋಟಕಕಾರು ನುಗ್ಗಿಸುವ ವಿಫಲ ಸಂಚು ನಡೆದಿದೆ.

ಬೆಂಗಳೂರು ಮೂಲದ ವೈಧ್ಯ ಕುಟುಂಬದ ಹಿನ್ನಲೇಯಿಂದ ಬಂದ ಕಫೀಲ್ ಅಹಮದ್ ಮೂಲತಃ ಮೆಕಾನಿಕಲ್ ಪದವೀದರ. ಈತ ಈ ಬಯೋತ್ಪಾಧನೆಯ ಕೃತ್ಯಕ್ಕೆ ಇಳಿದಿರುವ ಅನುಮಾನವಿದೆ. ಹಾಗಾದರೆ ಇವರಿಗೆ ಪ್ರೇರಣೆ ನೀಡಿದ ಸಂಘಟನೆ ಯಾವುದು?

ದೂರದ ಆಸ್ಟ್ರೇಲಿಯಾದಲ್ಲಿ ಆತನ ಅಣ್ಣ ಡಾ. ಹನೀಫ್ ಬಂಧಿತನಾಗಿದ್ದಾನೆ. ಇವರಿಬ್ಬರು ನಗರದ ಬನಶಂಕರಿ ಬಡಾವಣೆಯಲ್ಲಿ ವಾಸಿಸುತ್ತಿರುವ ಡಾ. ಸಬೀಲ್ ಅಹಮದ್‌ನ ಕಾಸಾ ಅಣ್ಣತಮ್ಮಂದಿರರಾಗಿದ್ದಾರೆ.



ಗ್ಲಾಸ್ಗೋ ವಿಮಾನ ನಿಲ್ದಾಣ ಸ್ಫೋಟಿಸಲು ಯತ್ನ

ಕಫೀಲ್ ಗ್ಲಾಸ್ಗೋ ವಿಮಾನ ನಿಲ್ಧಾಣಕ್ಕೆ ಹೊತ್ತಿ ಉರಿಯುತ್ತಿದ್ದ ಜೀಪ್ ನುಗ್ಗಿಸಿದಾಗ ಆತನ ಪಕ್ಕ ಸಂಚಿನ ರೂವಾರಿ ಬಿಲಾಲ್ ಅಬ್ದುಲ್ ಕುಳಿತಿದ್ದನೆಂದು ಪತ್ರಿಕೆಗಳು ವರದಿ ಮಾಡಿವೆ. ಈತ ಇರಾಕ್ ಮೂಲದವನಾಗಿದ್ದು ಬ್ರಿಟನ್‌ನಲ್ಲಿ ವೈಧ್ಯನಾಗಿದ್ದಾನೆ. ಈತನ ಮೂಲದ ಬಗ್ಗೆ ಸಂಪೂರ್ಣ ತನಿಕೆಯಾಗುವ ಅವಶ್ಯಕತೆಯಿದೆ.

ಬೆಂಗಳೂರಿನಲ್ಲಿ ನಡೆದಿರುವ ಹಿಂದಿನ ಘಟನೆಗಳಿಗೂ ಈಗಿನ ಘಟನೆಗಳ ರೂವಾರಿಗಳಿಗೂ ಸಂಬಂಧವಿದೆಯಾ ಎಂಬ ಸಂಶಯ ಕಾಡದಿರದು. ಹಾಗೆ ಬೃಹತ್ ಬೆಂಗಳೂರು ಭಯೋತ್ಪಾಧಕರ ಸಂಪರ್ಕ ಕೇಂದ್ರಿತ ಸ್ಥಾನವಾಗುತ್ತಿದೆಯಾ ಇದಕ್ಕಾಗಿ ನಮ್ಮ ಸರ್ಕಾರ ಮತ್ತು ಗೃಹ ಇಲಾಖೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತಿದೆ ಎನ್ನುವುದು ಬೆಂಗಳೂರಿಗರ ಹಾಗೆ ಕರ್ನಾಟಕದ ಜನತೆಯ ಪ್ರಶ್ನೆಯಾಗಿದೆ.

ಭಯದ ವಾತಾವರಣವನ್ನು ಬೆಂಗಳೂರಿಗರಲ್ಲಿ ಸೃಷ್ಟಿಸುತ್ತಿರುವ ಇಂತಹ ಘಟನೆಯ ಮೇಲೆ ತೀವ್ರ ನಿಗಾ ಇಡುವುದು ಅವಶ್ಯವಿದೆ.

ಆದಷ್ಟೂ ಈ ಅನುಮಾನ ಕೂಡಲೇ ಬಗೆಹರಿಸುವಂತಾಗಬೇಕು ಅಪರಾಧಿಗಳು ಪತ್ತೆಯಾಗಬೇಕು ನಿರಪರಾಧಿಗಳು ಸಹ.

ಪರಶುರಾಮ ಬೋನೇರ



ಅಡಿಕೆ ಬೆಲೆ ಕುಸಿತ

ಉದಾರೀಕರಣದ ಫಲ

ಉತ್ತರಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಮುಂತಾದ ಜಿಲ್ಲೆಗಳ ಅಡಿಕೆ ಬೆಳೆಗಾರರು ಅಡಿಕೆ ಬೆಲೆ ತೀವ್ರ ಕುಸಿತದಿಂದ ಕಂಗಾಲಾಗಿದ್ದಾರೆ. ಬೆಳೆಸಾಲ ಮಾಡಿದ ಸಣ್ಣ ರೈತರು, ಮಾಧ್ಯಮ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಮಾಡಿದ ಸಾಲ ತೀರಿಸಲಾಗದೆ, ಕುಟುಂಬ ನಿರ್ವಹಣೆಯಲ್ಲಿ ವ್ಯತ್ಯಾಸಗಳಾಗಿ ತೊಂದರೆಪಡುತ್ತಿದ್ದಾರೆ.

ಬೆಲೆ ಕುಸಿತಕ್ಕೆ ಕಾರಣವೇನು?

ಈಗ ಎರಡು ಪ್ರಶ್ನೆಗಳನ್ನು ಎತ್ತಲಾಗುತ್ತಿದೆ ಒಂದು ವಿದೇಶದಿಂದ ಅಡಿಕೆ ಮುಕ್ತವಾಗಿ ದೇಶದೊಳಕ್ಕೆ ಬರುತ್ತಿರುವುದು, ಎರಡನೆಯದು ಅಡಿಕೆ ಬೆಳೆಯುವ ಪ್ರದೇಶ ಹೆಚ್ಚಾಗಿ ಉತ್ಪಾದನೆ ಹೆಚ್ಚಿದೆ ಎನ್ನುವುದು ಇಲ್ಲಿ ಎರಡನೆಯದಕ್ಕಿಂತ ಒಂದನೆಯದೇ ಹೆಚ್ಚು ಮಹತ್ವದ್ದು ಎನಿಸುತ್ತದೆ.

ಉದಾರೀಕರಣ ನೀತಿ ದೇಶದಲ್ಲಿ ಜಾರಿಯಾಗಿ 15 ವರ್ಷ ಗತಿಸಿದೆ. 1998ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಉದಾರೀಕರಣ ನೀತಿಗಳ ಅನುಷ್ಠಾನದ ವೇಗ ಹೆಚ್ಚಿತು. ಆಮದುಗಳ ಮೇಲೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕಲಾಯಿತು. ಆಮದು ಸುಂಕವನ್ನು ಇಳಿಸಲಾಯಿತು. ಈ ಅವಧಿಯಲ್ಲಿ 2ರಿಂದ 3 ಸಲ ಅಡಿಕೆ ಬೆಲೆ ತೀವ್ರ ಕುಸಿತ ಕಂಡಿದೆ. ಸ್ವಲ್ಪ ಸುಧಾರಿಸುತ್ತಿದೆ ಎನ್ನುವಾಗ ಮತ್ತೆ ಕುಸಿಯುತ್ತಿದೆ. ಬೆಳೆಗಾರ ಪ್ರತಿಸಲ ಉದಾರೀಕರಣದ ಉರುಳಿಗೆ ಬಲಿಯಾಗುತ್ತಿದ್ದಾನೆ. ಉದಾರೀಕರಣದ ಭಾಗವಾಗಿ ರಾಜ್ಯದಲ್ಲಿ, ರಾಷ್ಟ್ರದಲ್ಲಿ ರೈತರ ಆತ್ಮಹತ್ಯೆಗಳು ಮುಂದುವರೆದಿವೆ. ಕಳೆದ ಒಂದೂವರೆ ವರ್ಷದಲ್ಲೇ ರಾಜ್ಯದಲ್ಲಿ 300ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಡಿಕೆ ಬೆಳೆಗಾರರು ಅಡಿಕೆದರ ಕುಸಿದಾಗ ಆತ್ಮಹತ್ಯೆ ಮಾಡಿಕೊಂಡಿದ್ದನ್ನು ನಾವು ಕಂಡಿದ್ದೇವೆ.

ಕಳೆದ ತಿಂಗಳೂ ಮಾಜಿ ಮಂತ್ರಿ ಆರ್.ವಿ.ದೇಶಪಾಂಡೆಯವರ ನೇತೃತ್ವದಲ್ಲಿ



ಕೇಂದ್ರ ಕೃಷಿ ಸಚಿವರನ್ನು ಭೇಟಿಯಾಗಿ ವಿದೇಶಿ ಆಮದು ತಡೆಯಲು ಒತ್ತಾಯಿಸಿತು. ಆಮದು ಅಡಿಕೆಗೆ ಟ್ಯಾಕ್ಸ್ ಹೆಚ್ಚಿಸಲು ವಿನಂತಿಸಿ ಬಂದಿದೆ. ಆದರೆ ದರ ಕುಸಿತ ತಡೆಯುವಲ್ಲಿ ಯಾವುದೇ ಪರಿಣಾಮ ಬರಿಲ್ಲ. ಹತ್ತಾರು ಗುಟಕಾ ಕಂಪನಿಗಳು ಪ್ರಾರಂಭವಾಗಿ ಗುಟಕಾ ಉತ್ಪಾದನೆ ಹೆಚ್ಚಿಸಿದಾಗ ಅಡಿಕೆ ದರ ಮಿತಿ ಮೀರಿ ಏರಿತ್ತು. ಈ ಗುಟಕಾ ಕಂಪನಿಗಳಿಗೆ ನಮ್ಮ ಅಡಿಕೆಯ ದರಕ್ಕಿಂತ ಶೇ.40ಕ್ಕಿಂತ ಕಡಿಮೆ ದರದಲ್ಲಿ ವಿದೇಶಿ ಅಡಿಕೆ ಸಿಕ್ಕಾಗ ನಮ್ಮಲ್ಲಿಯ ಮಾರುಕಟ್ಟೆಯಲ್ಲಿ ಕಂಪನ ಪ್ರಾರಂಭವಾಯಿತು. ದರ ಕುಸಿತ ನಿರಂತರವಾಯಿತು. ಇದು ಉದಾರೀಕರಣ ನೀತಿಯ ನೇರ ಪರಿಣಾಮವಾಗಿದೆ.

ಎರಡನೇ ಅಂಶ ಉತ್ಪಾದನೆ ಹೆಚ್ಚಾಗಿದೆ ಎನ್ನುವುದು. ಇದು ಬೆಲೆ ಕುಸಿತಕ್ಕೆ ಸಣ್ಣ ಕಾರಣವಾಗಿದೆ. ಅಡಿಕೆ ಬೆಳೆಯುವ ಸಾಂಪ್ರದಾಯಿಕ ಪ್ರದೇಶಗಳಾದ ಕರಾವಳಿ ಮತ್ತು ಮಲೆನಾಡು ಪ್ರದೇಶ ಬಿಟ್ಟು ಹಾಸನ, ಮೈಸೂರು, ಬೆಂಗಳೂರು ಗ್ರಾಮೀಣ, ತುಮಕೂರು ಜಿಲ್ಲೆಗಳಲ್ಲಿ ಅಸಂಪ್ರದಾಯಿಕ ಪ್ರದೇಶಗಳಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ದೇಶದಲ್ಲಿ ಬೆಳೆಯುವ ಅಡಿಕೆಯಲ್ಲಿ ಶೇ.45ರಷ್ಟು ಕರ್ನಾಟಕದಲ್ಲಿ ಬೆಳೆಯಲಾಗುತ್ತದೆ.

ಕೇಂದ್ರ ಸರಕಾರ ಕೂಡಲೇ ಮುಕ್ತ ಆಮದು ನೀತಿಗೆ ಕಡಿವಾಣ ಹಾಕಬೇಕು. ಆಮದು ಸುಂಕವನ್ನು ಭಾರತದ ಅಡಿಕೆ ಬೆಲೆಗೆ ಸರಿಹೊಂದುವಂತೆ ಹೆಚ್ಚಿಸಬೇಕು. ಹಾಗಾದರೆ ಮಾತ್ರ ಅಡಿಕೆ ಬೆಳೆಗಾರರ ಹಿತರಕ್ಷಣೆ ಸಾಧ್ಯವಿದೆ. ಇದು ಆಗಬೇಕಾದರೆ ಬೆಳೆಗಾರರಲ್ಲಿ ಪ್ರಜಾಸತ್ತಾತ್ಮಕ ಐಕ್ಯಹೋರಾಟ ಬೆಳೆಯಬೇಕು. ಆಗ ಮಾತ್ರ ಸರಕಾರದ ನೀತಿಯಲ್ಲಿ ಬದಲಾವಣೆ ತರಲು ಸಾಧ್ಯವಾಗಬಹುದು.

○ **ಶಾಂತಾರಾಮ ಎಸ್. ನಾಯಕ್**

ಬಿಎಸ್‌ಎನ್‌ಎಲ್ ಮೂರನೇ ಸ್ಥಾನಕ್ಕೆ

ನೌಕರರು ಹೋರಾಟದ ಕಣಕ್ಕೆ

ನಮ್ಮ ಸರ್ಕಾರಗಳೇ ಹೇಗೆ ಸಾರ್ವಜನಿಕ ಸಂಸ್ಥೆಗಳನ್ನು ತುಳಿದು ಹಾಕುತ್ತವೆ ಎಂಬುದಕ್ಕೆ ಇಲ್ಲಿ ಮತ್ತೊಂದು ತಾಜಾ ಉದಾಹರಣೆ ಇದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಭಾರತ ಸಂಚಾರ ನಿಗಮ (ಬಿಎಸ್‌ಎನ್‌ಎಲ್) ಸಂಸ್ಥೆಯು 2 ವರ್ಷಗಳ ಹಿಂದೆಯೇ ಮಾಡಿರುವ 45.5 ಮಿಲಿಯನ್ ಜಿ.ಎಸ್.ಎಂ. (ಗ್ಲೋಬಲ್ ಸಿಸ್ಟಂ ಆಫ್ ಮೊಬೈಲ್) ಲೈನುಗಳಿಗೆ ಅಗತ್ಯವಾದ ವಸ್ತುಗಳ ಖರೀದಿಯನ್ನು ವಿಳಂಬ ಮಾಡುತ್ತಿದೆ. ಅಂದರೆ ಇದರಿಂದ 45.5 ಮಿಲಿಯನ್ ಜನರು ಮೊಬೈಲ್ ಸಂಪರ್ಕ ಪಡೆದುಕೊಳ್ಳಲು ಇದರಿಂದ ತೊಂದರೆಯಾಗಿದೆ ಇದರಿಂದ ಈ ವಿಚಾರದಲ್ಲಿ ಏರ್‌ಟೆಲ್‌ನ ಂತರ ಎರಡನೇ ಸ್ಥಾನದಲ್ಲಿದ್ದ ಬಿಎಸ್‌ಎನ್‌ಎಲ್ ಈಗ ಹಚ್ ಸಂಸ್ಥೆಗೆ ಆ ಜಾಗ ಬಿಟ್ಟುಕೊಟ್ಟು ಮೂರನೇ ಸ್ಥಾನಕ್ಕೆ ಕುಸಿದಿದೆ.

ಕೇಂದ್ರ ಸರ್ಕಾರದ ಈ ಧೋರಣೆ ಖಂಡಿಸಿ **ಜುಲೈ 11, 2007 ರಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಮುಂದಾಗಿದ್ದಾರೆ.** ನೇಸಪಿಡಿ ಸಂಬಳ, ಸಾರಿಗೆ, ಸೌಲಭ್ಯದ ಬೇಡಿಕೆಯೇನು ಮುಷ್ಕರಕ್ಕಿಲ್ಲ. ಸಂಸ್ಥೆಯನ್ನು ಉಳಿಸುವ ಹೋರಾಟ ಇದು. ಸಿಐಟಿಯು ಸಂಘಟನೆ ಹೋರಾಟಕ್ಕೆ ಬೆಂಬಲ ನೀಡಿದೆ.

ಉತ್ತರ ಕನ್ನಡ

ಸ್ವರ್ಗ ಧರೆಗಿಳಿಸುವ ಭರವಸೆ

ಸತ್ಯ ಮುಚ್ಚಿಡುವ ಮಂತ್ರಿಗಳ ವರಸೆ

ಉತ್ತರ ಕನ್ನಡ ಜಿಲ್ಲೆಗೆ ಕಳೆದ ತಿಂಗಳು ಮುಖ್ಯಮಂತ್ರಿ ಬಂದಿದ್ದು. ಸ್ವರ್ಗ ಧರೆಗಿಳಿಸುವ ಆಶ್ವಾಸನೆ ನೀಡಿದರು. ಜನರ ನೋವಿನ, ಸಂಕಷ್ಟಗಳ ಅಹವಾಲು ಸ್ವೀಕರಿಸಲು ಸಮಯವಿರಲಿಲ್ಲ. ಬೆಂಗಳೂರಿನಲ್ಲಿ ಸಭೆ ಕರೆದಿದ್ದೇನೆ ಬನ್ನಿ ಎಂದರು. ಅಧಿಕಾರಿಗಳು ರಾಜಕಾರಣಿಗಳು ದೌಡಾಯಿಸಿದರು. ಅಲ್ಲಿ ಹೋಗುವ ಪೂರ್ವ ಅರಣ್ಯ ವಾಸಿಗಳ ಹಕ್ಕುಗಳಿಗೆ ಸಂಬಂಧಿಸಿ ಅಧಿಕಾರಿಗಳಿಗೆ 3 ತಿಂಗಳೊಳಗಾಗಿ ಮಾಹಿತಿ ಸಂಗ್ರಹಿಸಿ, ಪ್ರಕರಣ ಇತ್ಯರ್ಥಗೊಳಿಸಿ ಎಂದಿದ್ದರು. ಆ ಪ್ರಕಾರ ರಾಜ್ಯದ, ಜಿಲ್ಲೆಯ ಅರಣ್ಯ ಭೂಮಿ ಮೇಲೆ ಬುಡಕಟ್ಟು ಜನಾಂಗದವರು ಮತ್ತು ಇತರೇ ಅರಣ್ಯ ವಾಸಿಗಳು ಹೊಂದಿರುವ ಹಕ್ಕು ಬಾಧ್ಯತೆಯ ಪ್ರಮಾಣೀಕರಣದ ಕುರಿತು ಹಲವು ತಿಂಗಳ ಹಿಂದೆ ರಚಿಸಲಾದ ಸಮಿತಿಗಳ ಮುಖಾಂತರ ಅರ್ಜಿ ಸ್ವೀಕಾರ ಪ್ರಾರಂಭವಾಯಿತು. ಎರಡು ವರ್ಷದ ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಇರುವಾಗಲೂ ಅರ್ಜಿ ಸ್ವೀಕರಿಸಿ ಸರ್ವೆ ನಡೆಸಿದ್ದರು. ಇದೀಗ ಬಿಜೆಪಿ-ಜೆಡಿ(ಎಸ್) ಸಮ್ಮಿಶ್ರ ಸರ್ಕಾರದವರು ತಾವೇ ಎಲ್ಲ ಮಾಡಿಕೊಡುತ್ತೇವೆಂದು ಜಂಬ ಕೊಚ್ಚಿಕೊಳ್ಳಲು ಕೆಲವೆಡೆ ದಲ್ಲಾಳರ ಮುಖಾಂತರ ವಸೂಲಿಗೆ ತೊಡಗಿದ್ದಾರೆ.

08.06.2007ರಂದು ಹೊನ್ನಾವರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಮಿತಿ ತಿಳುವಳಿಕೆಗೆ 2ನೇ ಕಮ್ಮಟ ಏರ್ಪಡಿಸಿದ್ದರು. ಅದು ಬಹುಶಃ ಉಸ್ತುವಾರಿ ಸಚಿವರ ಸಲುವಾಗಿಯೇ ನಡೆಸಿದ್ದು. ಹಿಂದಿನ ಕಮ್ಮಟಕ್ಕೆ ಸಚಿವರು ಬಂದಿರಲಿಲ್ಲ. ಹಾಗಾಗಿ ಈ ಕಮ್ಮಟ ಉದ್ಘಾಟನೆ ಅದ್ದೂರಿಯಾಗಿ ಕೆಲ ಹೊತ್ತಿನ ಸಲುವಾಗಿ ನಡೆಸಿದ್ದರು. ಜಿಲ್ಲಾ ಪಂಚಾಯ್ತಿ ಸದಸ್ಯರಾದ ಶಂಭುಗೌಡ ಅತಿಥಿಯಾಗಿ, ಉಸ್ತುವಾರಿ ಸಚಿವರು


ಅಂಗೈಯಲ್ಲಿ ಅರಮನೆ ತೋರಿಸುವ ಶಿವಾನಂದ ನಾಯ್ಕ

ಉದ್ಘಾಟಿತರಾಗಿ ತಾ.ಪಂ. ಅಧ್ಯಕ್ಷ ಗಣಪಯ್ಯ ಗೌಡರು ಅಧ್ಯಕ್ಷರಾಗಿದ್ದರು. ಬಿಜೆಪಿ-ಜೆಡಿ(ಎಸ್) ಸಮ್ಮಿಶ್ರ ಸರ್ಕಾರ ಅತಿಕ್ರಮಣದಾರರ ಭೂಮಿ ಸಕ್ರಮಕ್ಕೆ ಕ್ರಮ ಕೈಗೊಂಡಿದೆ ಎಂದೂ, ಈಗ ಮಾಹಿತಿ ಸಂಗ್ರಹಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಿದ್ದೇವೆಂದೂ ಉಸ್ತುವಾರಿ ಸಚಿವರಾದ ಶಿವಾನಂದ ನಾಯ್ಕರು ಬೊಗಳೆ ಬಿಟ್ಟರು. ಜನರಿಂದ ಚಪ್ಪಾಳೆ ಗಿಟ್ಟಿಸಿಕೊಂಡು ಹೊಸ ಕಾಯ್ದೆಯ ಬಗೆಗೆ ಸತ್ಯ ಸಂಗತಿಯನ್ನು ಜನರಿಗೆ ತಿಳಿಸದೇ ಬೇರೆ ಕಾರ್ಯಕ್ರಮಕ್ಕೆ ಹೊರಟು ನಿಂತರು.

ಸಭೆಯು ಕೇವಲ ಅರ್ಧಗಂಟೆಯಲ್ಲಿ ಮುಗಿಯುತ್ತಿದ್ದಂತೆ, ಸಾಲ್ಕೋಡ್ ಗ್ರಾಮ ಮಟ್ಟದ ಸಮಿತಿಯ ಸದಸ್ಯರೂ, ಕಾರ್ಮಿಕ ಮುಖಂಡರೂ ಆದ ಯಮುನಾ ಗಾಂವ್ಕಾರ್ ಎದ್ದು ನಿಂತು, ಸಭೆಯಿಂದ ಎದ್ದು ಹೋಗುತ್ತಿರುವ ಉಸ್ತುವಾರ ಸಚಿವರನ್ನು, ತಡೆದು ಪ್ರಶ್ನಿಸಿದರು. ಡಿಸೆಂಬರ್ 2006ರಲ್ಲಿ ಸಂಸತ್ತಿನಲ್ಲಿ ಅರಣ್ಯ ವಾಸಿಗಳ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅತಿಕ್ರಮಣ ಭೂಮಿ ಸಕ್ರಮಕ್ಕೆ ಸಂಬಂಧಿಸಿದ ಕಾನೂನು ಪಾಸಾಗಿದೆ. ಆ ಕಾಯ್ದೆಯ ನಿಯಮಾವಳಿಗಳು ಇನ್ನೇನು ಬರಲಿದೆ. ಅದಾಗ್ಯೂ ನೀವು 2006ರ ಮಾರ್ಚ್ ಸುತ್ತೋಲೆಯನ್ನಿಟ್ಟು ಸಮಿತಿ ರಚನೆ, ರೈತರಿಂದ ಅರ್ಜಿ ಆಹ್ವಾನದಂಥ ಕೆಲಸ ಮಾಡುತ್ತಿರುವುದು ಮತ್ತು ಈ ರೀತಿ ಕಮ್ಮಟದ ಹೆಸರಿನಲ್ಲಿ ರೈತರನ್ನು, ಅರಣ್ಯ ವಾಸಿಗಳನ್ನು ತಪ್ಪು ದಾರಿಗೆಳೆಯುತ್ತಿದ್ದೀರಿ. ಹೊಸ ಕಾನೂನು ಬಂದ ಮೇಲೂ ಹಳೆ ಕಾನೂನಿನ ಪ್ರಕಾರವೇ ಸಮಿತಿ ರಚಿಸಿದ್ದರ ಸಿಂಧುತ್ವವನ್ನೇ ಪ್ರಶ್ನಿಸುತ್ತೇನೆ. ದೇಶಾದ್ಯಂತ ಎಡಪಕ್ಷಗಳ ನೇತೃತ್ವದಲ್ಲಿ ಮತ್ತು ಸ್ಥಳೀಯ ಮಟ್ಟದಲ್ಲಿ ಒತ್ತುವರಿ ಭೂಮಿ ಸಕ್ರಮಕ್ಕೆ ಹೋರಾಟ ನಡೆದು ಕಾನೂನು ಪಾಸಾಗಿದ್ದರೂ ಫಲಾನುಭವಿಗಳನ್ನು ಕತ್ತಲೆಯಲ್ಲಿಡುವುದು ನಿಲ್ಲಿಸಿ, ಎಂದಾಗ ಸಭಾರಂಭಕ್ಕೆ ಬಂದ ವಿವಿಧ ಗ್ರಾಮ ಪಂಚಾಯ್ತಿಗಳ ಹಾಗೂ ಅರಣ್ಯ ಭೂಮಿ ಸಕ್ರಮ ಪರಿಶೀಲನಾ ಸಮಿತಿಯ ಸದಸ್ಯರು ಎಚ್ಚೆತ್ತು ಕೊಳ್ಳುವಂತಾಯಿತು. ಪ್ರಶ್ನೆಗೆ ಉತ್ತರಿಸಲು ತೊಡಗಿದ ಸಚಿವ ಶಿವಾನಂದ ನಾಯ್ಕ ಕಾಯ್ದೆಯ ಹಿನ್ನೆಲೆ ಗೊತ್ತಿಲ್ಲದೇ ತಡವರಿಸಿದರು. ರಾಜ್ಯ ಸರ್ಕಾರಕ್ಕೆ ಹಕ್ಕಿದೆ ಎಂದು ಸಮರ್ಥಿಸಲು ತೊಡಗಿದರು. ತಮ್ಮ ಅಧಿಕಾರಾವಧಿಯಲ್ಲಿ 'ರೈತರ ಅರಣ್ಯ ಭೂಮಿ ಅತಿಕ್ರಮಣ ಸಕ್ರಮಗೊಳಿಸುತ್ತೇವೆ. ಅನಧಿಕೃತ ಅತಿಕ್ರಮಣದಾರರನ್ನು ಜೈಲಿಗೆ ಹಾಕಲು ಕಾನೂನು ರೂಪಿಸುತ್ತೇವೆ' ಎಂದೆಲ್ಲ ಹೇಳಿ ಅಲ್ಲಿಂದ ಕಾಲ್ಕಿತ್ತರು!

ಒಟ್ಟಿನಲ್ಲಿ ಈ ರೀತಿ ಪದೇ ಪದೇ ಅರ್ಜಿ ಸ್ವೀಕರಿಸುವುದು ಆಡಳಿತಾರೂಢ ಸರ್ಕಾರಗಳ ನಿರಂತರ ಪ್ರಹಸನವಾಗಿದೆ. ರಾಜ್ಯದ ಎಲ್ಲೆಡೆ ಈ ಘಟನೆಗಳನ್ನು ಅಭ್ಯಸಿಸಿ ಬಡರೈತರಿಗೆ ಸಾಗುವಳಿದಾರರಿಗೆ ಭೂಮಿ ದೊರಕಿಸಲು, ಕೇಂದ್ರದ ಕಾನೂನು ಶೀಘ್ರ ತಳಮಟ್ಟದಲ್ಲಿ ಜಾರಿಯಾಗಲು ಜನರನ್ನು ಹೋರಾಟಕ್ಕೆ ಅಣಿನೆರೆಸಬೇಕಿದೆ.

ರಾಷ್ಟ್ರಪತಿ ಚುನಾವಣೆ

ದೇಶದ ಪ್ರಮುಖ ವಿರೋಧ ಪಕ್ಷ ಬಿಜೆಪಿ ಮತ್ತು ಅದರ ನೇತೃತ್ವದ ಎನ್‌ಡಿಎಗೆ ಸಮಯಸಾಧಕತನ ಹೊಸದೇನಲ್ಲ. ಆದರೆ ಈ ಬಾರಿಯ ರಾಷ್ಟ್ರಪತಿ ಚುನಾವಣೆ ಅವರ ಸಮಯಸಾಧಕತನ ಎಷ್ಟು ಆಳವಾಗಿದೆ ಎಂಬುದನ್ನು ತೋರಿಸಿಕೊಡುವಂತಿದೆ. ಅದರಲ್ಲೂ ಬಿಜೆಪಿ ರಾಜಕೀಯವಾಗಿ ಇಷ್ಟೊಂದು ದಿವಾಳಿಯೆದ್ದಿದೆಯೇ ಎಂದು ಅದರ ಟೀಕಾಕಾರರೂ ಆಶ್ಚರ್ಯಪಡುವಂತಾಗಿದೆ.

ಬಿಜೆಪಿಯ ಹೀನ ರಾಜಕೀಯ ಮತ್ತೊಮ್ಮೆ ಬಯಲಿಗೆ

ರಾಷ್ಟ್ರಪತಿ ಚುನಾವಣೆಗಳಲ್ಲಿ ಯುಪಿಎ ಅಭ್ಯರ್ಥಿ ಶ್ರೀಮತಿ ಪ್ರತಿಭಾ ಪಾಟೀಲ್ ಒಂದೆಡೆ ಎಡಪಕ್ಷಗಳ ಬೆಂಬಲ ಮತ್ತು ಇನ್ನೊಂದೆಡೆ ಬಹುಜನ ಸಮಾಜ ಪಕ್ಷದ ಬೆಂಬಲದೊಂದಿಗೆ ದೇಶದ ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗುವುದು ಈಗ ಖಚಿತವಾಗಿದೆ. ಆದರೂ ಬಿಜೆಪಿ/ಎನ್‌ಡಿಎ ಸರತ್ತು ಮುಂದುವರೆದಿದೆ. ವಾಸ್ತವವಾಗಿ ಅದು ಹೀನ ಮಟ್ಟಕ್ಕಿಳಿಯುತ್ತಿದೆ.

ಮಾಜಿ ಪ್ರಧಾನ ಮಂತ್ರಿ ವಾಜಪೇಯಿಯವರಿಗೆ ಮಿತ್ರಪಕ್ಷದ ಅಭ್ಯರ್ಥಿಯನ್ನು ಹೆಸರಿಸುವ ಕೆಲಸವನ್ನು ಎನ್‌ಡಿಎ ವಹಿಸಿತ್ತು. ಅವರು ಮೇ22ಕ್ಕಾಗಲೇ ರಾಷ್ಟ್ರಪತಿ ಅಬ್ದುಲ್ ಕಲಾಂರನ್ನು ಭೇಟಿ ಮಾಡಿ 'ತಾವು ಎರಡನೇ ಅವಧಿಗೆ ಮುಂದುವರೆಯಲು ಒಮ್ಮತವನ್ನು ರೂಪಿಸಲಾಗಲಿಲ್ಲ' ಎಂದು ತಿಳಿಸಿದರು. ನಂತರ ಬಿಜೆಪಿ ತನ್ನ ಅಭ್ಯರ್ಥಿ ಉಪರಾಷ್ಟ್ರಪತಿಗಳಾಗಿರುವ ಭೈರೋಂ ಸಿಂಗ್ ಶೆಖಾವತ್‌ಎಂದು ಪ್ರಕಟಿಸಿತು.

ಈ ನಡುವೆ ಯುಪಿಎ ತನ್ನ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಿದಾಗ ತಮ್ಮನ್ನು ಈ ಬಗ್ಗೆ ಮೊದಲೇ ಕೇಳಲಿಲ್ಲ ಎಂದು ಬೊಬ್ಬೆ ಹಾಕುತ್ತಾ, ಇದರಿಂದಾಗಿ ಪ್ರತಿಭಾ ಪಾಟೀಲ್ ಹೆಸರಿನ ಮೇಲೆ ಒಮ್ಮತ ಸಾಧ್ಯವಿಲ್ಲ ಎಂದಿತು. ಆದರೆ ಕಳೆದ ಬಾರಿ ಎನ್‌ಡಿಎ ಕೂಡಾ ಮೊದಲು ಡಾ.ಕಲಾಂ ಹೆಸರು ಪ್ರಕಟಿಸಿ ನಂತರ ಒಮ್ಮತದ ಪ್ರಯತ್ನಕ್ಕೆ ಮುಂದಾಗಿತ್ತು ಎಂಬುದು ಈ ವಿಷಯದಲ್ಲಿ ಅದರ ಎಡಬಿಡಂಗಿತನದ, ಗೋಸುಂಬೆತನದ ಮೊದಲ ನಿದರ್ಶನ ಸಾಕ್ಷಿಯಷ್ಟೆ. ಕಾಂಗ್ರೆಸ್ ಆಗ ಎನ್ ಡಿಎ ಅಭ್ಯರ್ಥಿಗೆ ಬೆಂಬಲ ನೀಡಲು ಒಪ್ಪಿತ್ತು. ಎಡಪಕ್ಷಗಳು ಮಾತ್ರ ಡಾ.ಕಲಾಂ ಬಿಜೆಪಿ/ಎನ್‌ಡಿಎ ಅಭ್ಯರ್ಥಿಯಾದ್ದರಿಂದ ಅವರನ್ನು ಬೆಂಬಲಿಸಲು ಸಾಧ್ಯವಿಲ್ಲ. ಅಲ್ಲದೆ ರಾಜಕೀಯವಾಗಿ, ಆಡಳಿತಾತ್ಮಕವಾಗಿಯೂ ಅನನುಭವಿ ಅವರು ಎಂದು ಆಜಾದ್ ಹಿಂದ್ ಸೇನೆಯ ಖ್ಯಾತಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಕ್ಯಾ.ಲಕ್ಷ್ಮಿ ಸೆಹಗಲ್‌ರನ್ನು ತನ್ನ ಅಭ್ಯರ್ಥಿಯಾಗಿ ನಿಲ್ಲಿಸಿತು.

ಕಳೆದ ಚುನಾವಣೆಗಳಲ್ಲಿ ಬಿಜೆಪಿ/ಎನ್‌ಡಿಎ ಆಗಿನ ರಾಷ್ಟ್ರಪತಿ ಕೆ.ಆರ್.ನಾರಾಯಣನ್‌ರನ್ನು ಎರಡನೇ ಅವಧಿಗೆ ಮುಂದುವರೆಸಬಹುದು ಎಂಬ ಅಭಿಪ್ರಾಯವನ್ನು ಬೆಂಬಲಿಸಲು ನಿರಾಕರಿಸಿತ್ತು. ಅದಕ್ಕೆ ನೀಡಿದ ಸಮರ್ಥನೆಯೆಂದರೆ ಮೊದಲ ರಾಷ್ಟ್ರಪತಿಗಳಾದ ಡಾ.ರಾಜೇಂದ್ರ ಪ್ರಸಾದರನ್ನು ಬಿಟ್ಟು ಬೇರೆ ಯಾವ ರಾಷ್ಟ್ರಪತಿಗಳನ್ನೂ ಎರಡನೆ ಅವಧಿಗೆ ಮುಂದುವರೆಸಿಲ್ಲ, ಈ ಪರಂಪರೆ ಮುಂದುವರೆಯಲಿ ಎಂದು. ಆದರೆ ಅದೇ ಪರಂಪರೆಯ ಮಾತು ಬಿಜೆಪಿಗೆ ಈ ಬಾರಿ ಮರೆತೇ ಹೋದಂತಿದೆ. ಇರಲಿ, ಬಿಜೆಪಿ/ಎನ್‌ಡಿಎ ಸಮಯಸಾಧಕತನ ಇಷ್ಟಕ್ಕೇ ನಿಂತಿಲ್ಲ.

ತಂತಮ್ಮ ರಾಜ್ಯಗಳಲ್ಲಿ ಚುನಾವಣೆಗಳಲ್ಲಿ ಸೋತ ಪ್ರಾದೇಶಿಕ ಪಕ್ಷಗಳ ಮುಖಂಡರು ಕಟ್ಟಿಕೊಂಡ ಯುಎನ್‌ಪಿಎ ಕೂಟ ಕಾಂಗ್ರೆಸ್ ಅಥವ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸಲು ಸಾಧ್ಯವಿಲ್ಲ ಎನ್ನುತ್ತಾ ಡಾ.ಕಲಾಂರನ್ನು ಸಂಪರ್ಕಿಸಿ ಅವರು ಸ್ಪರ್ಧಿಸಲು ಸಿದ್ಧರೇ ಎಂದು ಕೇಳಿತು. ಗೆಲ್ಲುವುದು ಖಂಡಿತವಾದರೆ ತಾನು ಸಿದ್ಧ ಎಂದು ಅವರು ಹೇಳಿದರಂತೆ. ಪ್ರಜಾಪ್ರಭುತ್ವ ಚುನಾವಣೆಗಳಲ್ಲಿ ಇದೆಂತಾ ಶರತ್ತೋ!

ಯುಎನ್‌ಪಿಎ ಮುಖಂಡರು ಬಿಜೆಪಿ/ಎನ್‌ಡಿಎ ಬಳಿ ಬೆಂಬಲ ಕೇಳಿದಾಗ ಅವರು ತಮ್ಮ ಅಭ್ಯರ್ಥಿಗೆ ಕೈಕೊಟ್ಟು ಡಾ.ಕಲಾಂರನ್ನು ಬೆಂಬಲಿಸಲು ಸಿದ್ಧರಾದರು! ಆದರೆ ಈ ವೇಳೆಗಾಗಲೇ ಯುಪಿಎ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆಯ ಸಿದ್ಧತೆ ಆರಂಭವಾಗಿತ್ತು. ಕಳೆದ ಚುನಾವಣೆಗಳಲ್ಲಿ ಡಾ.ಕಲಾಂ ವಿರುದ್ಧ ಸ್ಪರ್ಧಿಸಿದ್ದ ಎಡಪಕ್ಷಗಳಂತೂ ಒಪ್ಪುವ ಪ್ರಶ್ನೆಯೇ ಇರಲಿಲ್ಲ. ಯುಪಿಎ ಕೂಡಾ ಮರುಪರಿಶೀಲನೆ ಸಾಧ್ಯವಿಲ್ಲ ಎಂದು ದೃಢವಾಗಿ ಹೇಳಿತ್ತು. ತಮ್ಮ ಆಟ ಸಾಗದೆಂದು ಕಂಡ ಬಿಜೆಪಿ ಯಾವುದೇ ರೀತಿಯಲ್ಲಿ ಗೆಲುವು ಖಂಡಿತ ಎನ್ನುವ ಭರವಸೆ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿತು. ಮತ್ತೆ ಶೆಖಾವತ್‌ರನ್ನು ಬೆಂಬಲಿಸಲು ನಿರ್ಧರಿಸಿತು. ಅವರೀಗ 'ಸ್ವತಂತ್ರ' ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು!

ಡಾ.ಕಲಾಂರೇಕೆ ಎರಡನೆ ಅವಧಿ ಬಯಸಿದರು? ಮಾಧ್ಯಮಗಳ ಪ್ರಕಾರ ಯುಎನ್‌ಪಿಎ ಅವರು ಹೆಸರು ಸೂಚಿಸಿದ ನಂತರ ಅವರ ಕಂಪ್ಯೂಟರ್ ಬೆಂಬಲದ ಇ-ಮೇಲ್‌ಗಳಿಂದ ತುಂಬಿ ಹೋಯಿತಂತೆ, ಈ ಸ್ಪಂದನ ಅವರನ್ನು ಪುಳಕಿತಗೊಳಿಸಿತಂತೆ! ಆದರೆ ಭಾರತದ ರಾಷ್ಟ್ರಪತಿ ಸಮಸ್ತ ನಾಗರಿಕರ ರಾಷ್ಟ್ರಪತಿ, ಕೇವಲ ಬೆರಳೆಣಿಕೆಯಷ್ಟಿರುವ ಇಂಟರ್ನೆಟ್ ನಾಗರಿಕರ ರಾಷ್ಟ್ರಪತಿಯಷ್ಟೇ ಅಲ್ಲ ಎಂಬುದನ್ನು ಅವರು ಅರಿಯಬೇಕಾಗಿತ್ತು. ಅವರ ಕಂಪ್ಯೂಟರಿನ ಇ-ಮೇಲ್‌ನ್ನು ತುಂಬುವ ಮತಗಳು ಒಂದು ಮುನಿಸಿಪಲ್ ವಾರ್ಡ್ ಚುನಾವಣೆ ಕೂಡ ಗೆಲ್ಲಲು ಸಾಲದು ಎಂದೊಬ್ಬರು ಟಿಪ್ಪಣಿ ಮಾಡಿದ್ದಾರೆ. ಕೊನೆಗೆ ಡಾ.ಕಲಾಂರವರಿಗೂ ಈ ವಾಸ್ತವತೆಯ ಅರಿವಾಗಿರಬೇಕು, ತಾನು ಸ್ಪರ್ಧಿಸುತ್ತಿಲ್ಲ ಎಂದರು. ಡಾ. ಅಬ್ದುಲ್ ಕಲಾಂ ತನ್ನ ಹಿಂದಿನ ಎಲ್ಲಾ ಪ್ರಖ್ಯಾತರಂತೆ ಘನತೆ-ಗಾಂಭೀರ್ಯದಿಂದ ಅಧಿಕಾರ ಬಿಟ್ಟುಕೊಡಬಹುದಾಗಿತ್ತು.

ಇರಲಿ, ಆದರೆ ಬಿಜೆಪಿಯ ಹೀನ ರಾಜಕೀಯ ಇಲ್ಲಿಗೇ ನಿಲ್ಲಲಿಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ಯುಪಿಎ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆಯನ್ನು ಪ್ರಶ್ನಿಸಲಾಯಿತು, ಚುನಾವಣಾ ಆಯೋಗದ ಬಳಿಯೂ ಹೋದರು. ಆಪಾದನೆಗಳನ್ನು ಸಾಬೀತು ಮಾಡಲಾಗಲಿಲ್ಲ. ಸುಪ್ರೀಂ ಕೋರ್ಟ್ ಇವರ ಅರ್ಜಿಯನ್ನು ವಜಾ ಮಾಡಿತು.

ಬಯಲಾದ ನಿಜ ಮುಖ

ತನ್ನ 'ಸ್ವತಂತ್ರ' ಅಭ್ಯರ್ಥಿಯ ಮೇಲೂ ಆಪಾದನೆಗಳು ಬಂದಾಗ ಅದು ಸಮರ್ಥಿಸಿಕೊಂಡ ರೀತಿಯಂತೂ ಇನ್ನಷ್ಟು ಹೊಲಸು. ಬಿಜೆಪಿಯ ವಕ್ತಾರೆಯ ಪ್ರಕಾರ ಶೆಖಾವತ್ 1942ರಲ್ಲಿ ಪ್ರೊಬೇಶನರಿ ಸಬ್ ಇನ್ಸ್‌ಪೆಕ್ಟರ್ ಆಗಿ ಪೋಲೀಸ್ ಪಡೆ ಸೇರಿದರು-ನೆನಪಿರಲಿ ಬ್ರಿಟಿಶ್ ಸರಕಾರದ ಪೋಲೀಸ್ ಪಡೆಯನ್ನು. ಅವರು ಅದನ್ನು ಬಿಟ್ಟದ್ದು 1948ರಲ್ಲಂತೆ. ಆಗ ಅವರು 'ಸೇವೆ'ಯನ್ನು ಕೊಂಡಾಡಲಾಯಿತಂತೆ. ಅದಕ್ಕೆ ಪುರಾವೆಯನ್ನೂ ಆಕೆ ನೀಡಿದರು. ಆದರೆ ಹೀಗೆ ಮಾಡಿ ತಾನು ಶೆಖಾವತ್ ಉಮೇದುವಾರಿಕೆಗೆ ವಾಸ್ತವವಾಗಿ ತೊಂದರೆಯುಂಟು ಮಾಡುತ್ತಿದ್ದೇನೆ ಎಂಬ ಅರಿವೂ ಆಕೆಗೆ ಬಂದಂತಿಲ್ಲ. 1942ರಲ್ಲಿ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಬ್ರಿಟಿಶರ ಪೋಲೀಸರು ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಅಮಾನುಷ ದಬ್ಬಾಳಿಕೆ ನಡೆಸಿದರು ಎಂಬುದು ಇಡೀ ದೇಶಕ್ಕೆ ತಿಳಿದ ವಿಷಯ. ಹಾಗಿರುವಾಗ ಇಂತಹ ಅವಧಿಯಲ್ಲಿ ಪೋಲೀಸ್ ಪಡೆಯಲ್ಲಿ ಇದ್ದವರು ಪ್ರಶಂಸಾ ಪತ್ರ ಪಡೆದಿದ್ದಾರೆಂದರೆ ಅದರ ನಿಜವಾದ ಅರ್ಥ ಏನಾಗುತ್ತದೆ? ಬಹುಶಃ ಒಂದು ರೀತಿಯಲ್ಲಿ ಬಿಜೆಪಿ ವಕ್ತಾರರ ಈ 'ಸಮರ್ಥನೆ' ಸಾತಂತ್ರ್ಯ ಹೋರಾಟದಲ್ಲಿ ಆರ್‌ಎಸ್‌ಎಸ್‌ನ ನಿಜವಾದ ಪಾತ್ರವೇನು ಎಂಬುದನ್ನೂ ಬಯಲು ಮಾಡಿದೆ.

ಬಿಜೆಪಿಯ 'ಸ್ವತಂತ್ರ' ಅಭ್ಯರ್ಥಿಯ ಇತ್ತೀಚಿನ ಸಾಧನೆಗಳೇನು? 1987ರಲ್ಲಿ 'ಸತಿ'ಯ ಹೆಸರಿನಲ್ಲಿ ರೂಪ್‌ಕನ್ವರ್‌ಳನ್ನು ಜೀವಂತ ಸುಟ್ಟಾಗ ಇಡೀ ದೇಶ ತಲ್ಲಣಗೊಂಡಿತು. ಆದರೆ ರಾಜಸ್ತಾನದ ಕೆಲವು ಮುಖಂಡರು, ಸರಕಾರೀ ಅಧಿಕಾರಿಗಳು ಆಕೆಯನ್ನು ಬಲಿಹಾಕಿದ ಸ್ಥಳಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸಿದರೆಂದು ವರದಿಯಾಗಿತ್ತು. ಅವರಲ್ಲಿ ಶೆಖಾವತ್‌ರ ಹೆಸರು ಪ್ರಮುಖವಾಗಿತ್ತು. ಡಿಸೆಂಬರ್ 6, 1992ರಂದು ಸಂಘ ಪರಿವಾರದವರು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಕರಾಳ ಕೃತ್ಯ ನಡೆಸಿದಾಗ ಶೆಖಾವತ್ ರಾಜ'ಸ್ತಾನದ ಮುಖ್ಯ ಮಂತ್ರಿಗಳಾಗಿದ್ದರು. ಅವರ ಸರಕಾರ ಅದರಲ್ಲಿ ಭಾಗವಹಿಸಲು ಕರಸೇವಕರನ್ನು ಕಳಿಸಿ ನಮ್ಮ ಸಂವಿಧಾನದ ಮೂಲ ರಚನೆಯ ವಿರುದ್ಧ ಕೆಲಸ ಮಾಡಿದೆ ಎಂದು ಅದನ್ನು ವಜಾ ಮಾಡಲಾಗಿತ್ತು. ಇದನ್ನು ನಂತರ ದೇಶದ ರಾಜ್ಯ ಸರ್ವೋಚ್ಚ ನ್ಯಾಯಾಲಯವೂ ಎತ್ತಿ ಹಿಡಿಯಿತು. ಮುಂದೆ ಮಾರ್ಚ್ 2002ರಲ್ಲಿ, 'ರಾಜಸ್ತಾನದಲ್ಲಿ ಮುಸ್ಲಿಮರ ತುಷ್ಟೀಕರಣ ಮತ್ತು ಹಿಂದೂ-ವಿರೋಧಿ ನೀತಿಗಳನ್ನು ನಿಲ್ಲಿಸದಿದ್ದರೆ ಇಲ್ಲಿಯೂ ಗುಜರಾತದಂತಹ ಸ್ಥಿತಿ ಉಂಟಾಗಬಹುದು' ಎಂದು ಅಣಿಮುತ್ತುಗಳನ್ನು ಉದುರಿಸಿದವರೀಗ ರಾಷ್ಟ್ರಪತಿ ಸ್ಥಾನಕ್ಕೆ ಬಿಜೆಪಿಯ 'ಸ್ವತಂತ್ರ' ಅಭ್ಯರ್ಥಿ!

ಆದರೂ ಬಿಜೆಪಿ ನಿಸ್ಸಂಕೋಚವಾಗಿ ಯುಪಿಎ ಅಭ್ಯರ್ಥಿಯ ಮೇಲೆ ಕೆಸರೆರಚುವ ಕಸರತ್ತುಗಳಲ್ಲಿ ಮಗ್ನವಾಗಿರುವುದು ಅದು ಭಾರತದಲ್ಲಿ ರಾಜಕೀಯ ನೈತಿಕತೆಯನ್ನು ಎಂಥಾ ಮಟ್ಟಕ್ಕೆ ಇಳಿಸುತ್ತಿದೆ ಎಂಬುದಕ್ಕೆ ಸಾಕ್ಷಿ. ಹೀಗಿದೆ ಬಿಜೆಪಿಯ ರಾಜಕೀಯ ದಿವಾಳಿಕೋರತನ. ○

ಕೇರಳ : 'ದೇಶಾಭಿಮಾನಿ'ಗೆ ನಿಧಿ ಸಂಗ್ರಹ

ತಪ್ಪುಗಳಿಗಿಲ್ಲ ಅವಕಾಶ

ಕಳೆದ ವಾರ ಮಾಧ್ಯಮಗಳಲ್ಲಿ ಕೇರಳದಲ್ಲಿ ದಿನಪತ್ರಿಕೆ 'ದೇಶಾಭಿಮಾನಿ' ಒಬ್ಬ ಸಂಶಯಾಸ್ಪದ ಚಾರಿತ್ರ್ಯದ ವ್ಯಕ್ತಿಯಿಂದ 2 ಕೋಟಿ ರೂ. ಪಡೆದಿದೆ ಎಂದು ಬಹಳ ಟೀಕೆಗಳು ಬಂದಿದ್ದವು. ಕೇರಳದ ವಿಧಾನಸಭೆಯಲ್ಲೂ ಇದನ್ನು ಕಾಂಗ್ರೆಸ್‌ನವರು ಎತ್ತಿ ಭಾರೀ ಗದ್ದಲ ಎಬ್ಬಿಸಲು ಪ್ರಯತ್ನಿಸಿದರು.

ಆದರೆ ನಿಜ ಸಂಗತಿಯೇನು? 'ದೇಶಾಭಿಮಾನಿ' ಕೇರಳದಲ್ಲಿ ಮೂರನೇ ಅತಿ ಹೆಚ್ಚು ಪ್ರಸಾರದ ದೈನಿಕ. ಕೇರಳದ ಮಾಧ್ಯಮ ವಲಯ, ಅದರಲ್ಲೂ ದೈನಿಕಗಳ ವಲಯ ಅತ್ಯಂತ ಸ್ಪರ್ಧಾತ್ಮಕವಾಗಿದ್ದು ಅಲ್ಲಿ ತನ್ನ ಸ್ಥಾನವುಳಿಸಿ ಕೊಳ್ಳಲು ಸದಾ ಸಂಪನ್ಮೂಲಗಳ ಅಗತ್ಯವಿರುತ್ತದೆ. ಆದರೂ ಇದು ಇತರ ದೈನಿಕಗಳಂತೆ ಕಾರ್ಪೊರೇಟ್ ಮಾದರಿಯದ್ದಲ್ಲ. ಅದು ಒಂದು ಕಮ್ಯುನಿಸ್ಟ್ ಪಕ್ಷದ ಪತ್ರಿಕೆ. ಅದನ್ನು ಹೇಗೆ ಕಟ್ಟಿ ಬೆಳೆಸಲಾಗಿದೆ ಎಂದು ಕೇರಳದಲ್ಲಂತೂ ಎಲ್ಲರಿಗೂ ಗೊತ್ತಿದೆ. ಅದರ ಮೊದಲ ಮುದ್ರಣ ಯಂತ್ರವನ್ನು ಖರೀದಿಸಿದ್ದು ಇಎಂಎಸ್ ತನ್ನ ಆಸ್ತಿ ಮಾರಿ ಕೊಟ್ಟ ಹಣದಿಂದ. ನಂತರವೂ ಬ್ರಿಟಿಷ್ ಸರಕಾರ ಆಗಾಗ ಅದರ ಮೇಲೆ ದಂಡ ಹಾಕಿ ಅದರ ಪ್ರಕಟಣೆಯನ್ನು ನಿಲ್ಲಿಸಲು ಪ್ರಯತ್ನಿಸಿ ದಾಗಲೆಲ್ಲ ಜನಗಳಿಂದ ಹಣ ಸಂಗ್ರಹಿಸಿ ದಂಡ ತೆತ್ತು ಅದರ ಪ್ರಕಟಣೆಯನ್ನು ಮುಂದುವರೆಸಲಾಗುತ್ತಿತ್ತು.

ಈ ಬಾರಿ ಸಂಪನ್ಮೂಲ ಸಂಗ್ರಹಿಸಲು 'ಬಾಂಡ್'ಗಳನ್ನು ಅಂದರೆ ಸಾಲಪತ್ರಗಳನ್ನು ನೀಡಬಹುದು ಎಂದು 'ದೇಶಾಭಿಮಾನಿ'ಗೆ ಪಕ್ಷದ ರಾಜ್ಯ ಕಾರ್ಯದರ್ಶಿಮಂಡಳಿ ಅನುಮತಿ ನೀಡಿತು. 'ದೇಶಾಭಿಮಾನಿ' ಶೇ.5 ಬಡ್ಡಿಯ ವಿಶೇಷ ಠೇವಣಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿ ಅದಕ್ಕೆ ರಸೀದಿ ಕೊಡುತ್ತಿದೆ. ಇಂತಹ ಸಂಗ್ರಹಣೆ ಸಮಯದಲ್ಲಿ ಇಬ್ಬರು ವ್ಯಕ್ತಿಗಳಿಂದ ಒಬ್ಬ ಲಾಟರಿ ವ್ಯಾಪಾರಿಯ ಪರವಾಗಿ 2ಕೋಟಿ ರೂಪಾಯಿಗಳ ಠೇವಣಿ ಬಂತು. ಹೀಗೆ ಇದು ಬಡ್ಡಿ ಸಹಿತವಾದ ಠೇವಣಿಯೇ ಹೊರತು ಯಾವುದೇ ರೀತಿಯ 'ಡೊನೇಶನ್' ಅಲ್ಲ ಎಂದು ಸಿಪಿಐ(ಎಂ) ಸ್ಪಷ್ಟಪಡಿಸಿದೆ.

ಅದರೂ, ಮಾರುಕಟ್ಟೆ ಒತ್ತಡ ಏನೇ ಇದ್ದರೂ 'ದೇಶಾಭಿಮಾನಿ' ಇತರ ಬೂರ್ಜ್ವಾ ಪತ್ರಿಕೆಗಳಂತಲ್ಲ, ಅದು ದುಡಿಯುವ ಜನಗಳನ್ನು ಪ್ರತಿನಿಧಿಸುವ ಕಮ್ಯುನಿಸ್ಟ್ ಪಕ್ಷದ ಸಿದ್ಧಾಂತ ಮತ್ತು ನೀತಿಗಳ ಚೌಕಟ್ಟಿನಲ್ಲಿ ಕೆಲಸ ಮಾಡುವ ಪತ್ರಿಕೆ. ಆದ್ದರಿಂದ ಇದು ಡೊನೇಶನ್ ಅಲ್ಲದಿದ್ದರೂ ಇಂತಹ ಸಂಶಯಾಸ್ಪದ ಚಾರಿತ್ರ್ಯದ ವ್ಯಕ್ತಿಗಳಿಂದ ಠೇವಣಿಯನ್ನು ಕೂಡ ತೆಗೆದುಕೊಳ್ಳಬಾರದಿತ್ತು ಎಂಬ ಅಭಿಪ್ರಾಯ ಸದಸ್ಯರು ಮತ್ತು ಬೆಂಬಲಿಗರಿಂದಲೂ ಬಂದುದನ್ನು ಕಂಡ ಪಕ್ಷದ ರಾಜ್ಯಸಮಿತಿ ಆ ಠೇವಣಿಯನ್ನು ಹಿಂದಿರುಗಿಸಲು ನಿರ್ಧರಿಸಿತು.

ಈ ನಡುವೆ ಇನ್ನೊಂದು ಘಟನೆಯೂ ನಡೆದಿದೆ. ಈ ದೈನಿಕದ ನಿರ್ವಹಣೆಯ ಒಂದು ಜವಾಬ್ದಾರಿ ಹೊತ್ತ ಒಬ್ಬ ವ್ಯಕ್ತಿ ಸರಕಾರದಿಂದ ಒಂದು ಅನುಕೂಲಕರ ನಿರ್ಣಯ ಪಡೆಯಲು 1ಕೋಟಿ ರೂ. ಲಂಚ ಕೇಳಿದ್ದ ಎಂದು ತಿಳಿದು ಬಂದು ಆತನನ್ನು ಈಗ ಪಕ್ಷದಿಂದ ಉಚ್ಚಾಟಿಸಲಾಗಿದೆ.

ಇತ್ತೀಚೆಗೆ ನಡೆದ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿಯ ಸಭೆ ಈ ಎರಡು ಘಟನೆಗಳ ಬಗ್ಗೆ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ ಒಂದು ವರದಿ ನೀಡಬೇಕು ಎಂದು ಕಾರ್ಯದರ್ಶಿಮಂಡಳಿಗೆ ಹೇಳಿದೆ. ಪಕ್ಷ ಸರಕಾರ ನಡೆಸುವಾಗ ಎಲ್ಲಾ ತರದ ಜನಗಳು ಹೇಗಾದರೂ ನುಸುಳಿಕೊಂಡು ಅನುಕೂಲ, ಲಾಭ ಪಡೆಯಲು ಪ್ರಯತ್ನ ನಡೆಸುತ್ತಾರೆ. ಈ ಬಗ್ಗೆ ಪಕ್ಷ ಎಚ್ಚರದಿಂದಿರಬೇಕು, ಪಕ್ಷ ಯಾವುದೇ ತಪ್ಪು ಕೆಲಸವನ್ನು ಸಹಿಸಿಕೊಳ್ಳುವುದಿಲ್ಲ, ಆದ ತಪ್ಪುಗಳನ್ನು, ಚ್ಯುತಿಗಳನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯ ಪಕ್ಷಕ್ಕಿದೆ. ಇದನ್ನು ಕೇರಳದಲ್ಲಿ ಸಿಪಿಐ(ಎಂ) ತೋರಿಸಿಕೊಡುತ್ತದೆ" ಎಂದು ರಾಜ್ಯ ಸಮಿತಿಯ ಈ ಸಭೆಯಲ್ಲಿ ಹಾಜರಿದ್ದ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಹೇಳಿದ್ದಾರೆ. ಪಕ್ಷದ ಮೇಲೆ ಸುಳ್ಳು ಆಪಾದನೆ ಹೊರಿಸುವವರ ಪ್ರಯತ್ನ ಎಂದೂ ಸಫಲವಾಗದು ಎಂದೂ ಅವರು ಹೇಳಿದ್ದಾರೆ.

ಸಾರ್ವಜನಿಕ ಉದ್ದಿಮೆಗಳು

'ಬಕಗಳ ಬಾಯಿಗೆ ಭಾರತದ ಕಾಮಧೇನು!

ಬಳ್ಳಾರಿ ಜಿಲ್ಲೆಯ ರಾಜಕಾರಣಿಗಳು ಉದ್ಯಮಿಗಳು ಇಂದು ರಾಜ್ಯ ವ್ಯಾಪಿ ಚರ್ಚೆಯ ವಸ್ತುವಾಗಿದ್ದಾರೆ. ರಾಷ್ಟ್ರದ ಗಮನವನ್ನು ಸೆಳೆದಿದ್ದಾರೆ.

ಈ ಉದ್ಯಮಿಗಳು, ರಾಜಕಾರಣಿಗಳು ಹಲವರು ಕೊಂಡಿರುವ ಹೆಲಿಕಾಪ್ಟರ್‌ಗಳು, ಇನ್ನಷ್ಟು ಜನ ಹೆಲಿಕಾಪ್ಟರ್‌ಗಳನ್ನು ಕೊಳ್ಳಲು ಬುಕ್ ಮಾಡಿರುವುದು ಇವೆಲ್ಲಾ ಇವತ್ತು ರಾಷ್ಟ್ರೀಯ ಚರ್ಚೆಗಳಾಗಿವೆ.

ಇದನ್ನು ಈ ಸಂದರ್ಭದಲ್ಲಿ ಯಾಕೆ ನೆನೆಸಿಕೊಳ್ಳಬೇಕಾಗಿದೆ ಅಂದ್ರೆ ಈ ಗಣಿಗಾರಿಕೆ ಅನ್ನುವ ಹಣ ತೋಡುವ ವ್ಯವಹಾರ ಈ ರೀತಿ ಖಾಸಗಿ ಉದ್ಯಮ ಪತಿಗಳ ಕೈಗೆ ಹೋಗದೇ ಯಾವುದಾದರೂ ಸಾರ್ವಜನಿಕ ಸಂಸ್ಥೆಯೇ ಇದನ್ನು ಮಾಡಿದ್ದರೆ ಏನಾಗುತ್ತಿತ್ತು?

ಒಂದೋ ನಮ್ಮ ದೇಶದ ಅಮೂಲ್ಯ ಖನಿಜ ಸಂಪತ್ತು ಹೀಗೆಲ್ಲಾ ಲಂಗು ಲಗಾಮಿಲ್ಲದೆ ಪರದೇಶಗಳಿಗೆ ಸಾಗ ಹಾಕೋದಕ್ಕೆ ಅವಕಾಶ ಆಗ್ತಾ ಇರಲಿಲ್ಲ. ಎಷ್ಟು, ಹೇಗೇ ಯಾವುದನ್ನು ಹೊರಗೆ ಕಳಿಸ ಅಂಬೋದಕ್ಕೆ ಏನಾದರೂ ಒಂದು ಎಂಥಾದಾದರೂ ಲೆಕ್ಕಾಚಾರ ನೀತಿ ಅಂತಾ ಇರ್ತಾ ಇತ್ತು. ಮತ್ತೆ ಈ ಖಾಸಗಿ ಉದ್ಯಮಿಗಳು ಗೋರಿ ಗೋರಿ ಗುಡ್ಡೆ ಹಾಕಿಕೊಳ್ಳುತ್ತಿರುವ ಅಪಾರ ಪ್ರಮಾಣದ ಲಾಭ ಸಾರ್ವಜನಿಕ ಸಂಸ್ಥೆಗೆ ಸೇರುತ್ತಿತ್ತು. ಹಾಗೆ ಸೇರಿದ್ದರೆ ಅದನ್ನು ಕರ್ನಾಟಕದ ಎಷ್ಟೋ ಅಪೂರ್ಣ ನೀರಾವರಿ ಯೋಜನೆಗಳನ್ನು ಮುಗಿಸೋದಕ್ಕೋ, ಕೃಷಿ ಬಿಕ್ಕಟ್ಟಿನ ಸುಳಿಗೆ ಸಿಲುಕಿ ಆತ್ಮಹತ್ಯೆಯ ಹಾದಿಗೆ ಬಂದು ಬೀಳ್ತಾ ಇರೋ ರೈತರ ಸಮಸ್ಯೆ ಬಗೆಹರಿಸೋ ಒಂದು ಅಮೂಲ್ಯ ನಿಧಿಯಾಗಿ ಬಳಕೆ ಆಗಬಹುದಿತ್ತು. ಹಳ್ಳಿಗಳಿಗೆ ಶಾಲೆಯೋ, ಕಾಲೇಜೋ, ಕುಡಿಯೋ ನೀರೋ ಎಂಥದ್ದಾದರೂ ಸಾಮಾಜಿಕವಾಗಿ ಏನಾದರೂ ನಾಲ್ಕು ಜನಕ್ಕೆ ಉಪಯೋಗಕಾರಿಯಾದಂತಹ ರೀತಿಯಲ್ಲಿ ಬಳಕೆಯಾಗ್ತಾ ಇತ್ತು. ಎಲ್‌ಐಸಿ ಅನ್ನೋ ಸಾರ್ವಜನಿಕ ವಿಮಾ ಸಂಸ್ಥೆ ತಾನು ಗಳಿಸಿರ ಲಕ್ಷಾಂತರ ಕೋಟಿ ರೂಪಾಯಿಗಳ ಹಣವನ್ನು ಇಂತಹ ಉದ್ದೇಶಕ್ಕೆ ಸರ್ಕಾರಕ್ಕೆ ಕಡಿಮೆ ಬಡ್ಡಿಯ ಸಾಲ ನೀಡಿದೆ.

ಈಗ ಇಂಥ ಹಣ ಖಾಸಗಿ ಕುಳಗಳು ಹೆಲಿಕಾಪ್ಟರು, ಗುಂಡು ನಿರೋಧಕ ಬಸ್ಸುಗಳನ್ನು ಕೊಳ್ಳೊದಕ್ಕೋ, ಇಲ್ಲಾ ಎಲ್ಲೋ ಯಾರೋ, ಬಾರಿ ಬಾರಿ ಐಷರಾಮಿ ಬಂಗಲೆಗಳನ್ನೋ ಶಾಪಿಂಗ್ ಮಾಲ್‌ಗಳನ್ನು ಕಟ್ಟಿಕೊಳ್ಳೊಕೋ, ಇಲ್ಲವೇ ಶ್ರೀಮಂತರ ಮೋಜು, ಮಜಾಗಳಿಗೆ ಅಡ್ಡೆಗಳಾಗಿರುವ ರೆಸಾರ್ಟ್‌ಗಳನ್ನು ಕೊಳ್ಳೋದಕ್ಕೆ



ಬಳಕೆಯಾಗ್ತಾ ಇದೆ.

ಇನ್ನು ನಮ್ಮ ರಾಜ್ಯದ ರಾಜಕಾರಣಕ್ಕೆ ಅಂಟಿಕೊಂಡಿರೋ 'ರೆಸಾರ್ಟ್ ರಾಜಕಾರಣ' ದ ರೋಗದ ಹಿಂದೆ ಇಂತಹ ಖಾಸಗಿ ಉದ್ದಿಮೆದಾರರ ಹಣದ ತೈಲಿಯ ಸೆಳೆತ ಎಷ್ಟಿದೆ-ಹೇಗಿದೆ ಅನ್ನೋದು ಈಗಾಗಲೇ ರಾಜ್ಯದ ಜನಕ್ಕೆ ಸಾಕಷ್ಟು ತಿಳಿದಿರೋ ವಿಷಯವೇ.

ಹೆಗಲಮೇಲೆ ಜಾಗತೀಕರಣದ ಆಕ್ಟೋಪಸ್

80-90 ದಶಕಗಳಲ್ಲಿ ಈ ಜಾಗತೀಕರಣ ಅನ್ನೋ ಅಕ್ಟೋಪಸ್‌ನ್ನು ತಂದು ಭಾರತದ ಹೆಗಲಿಗೆ ಹೊರಿಸೋದಕ್ಕೆ ಮೊದಲು ಮಾಡಿದ ವಾದಗಳೇನು ಬಿಸಿನೆಸ್ ಇಸ್ ನಾಟ್ ದಿ ಬಿಸಿನೆಸ್ ಆಫ್ ಗೌರ್ನಮೆಂಟ್ - 'ಬಿಸಿನೆಸ್ ನಡೆಸೋದು ಸರ್ಕಾರದ ಬಿಸಿನೆಸ್ ಅಲ್ಲ', ಬಿಸ್ಕತ್, ಚಾಕಲೇಟ್ ತಯಾರಿಸೋದಕ್ಕೂ ಸರ್ಕಾರಿ ಸಂಸ್ಥೆಗಳು ಬೇಕಾ ಅಂದ್ರು. ಸರ್ಕಾರ ಉದ್ದಿಮೆಗಳನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕು ಅಂದ್ರು. ಆಮೇಲೆ ಬ್ಯಾಂಕ್, ವಿಮಾ ಸಂಸ್ಥೆ, ಒಳ್ಳೊಳ್ಳೆ ಕಾರ್ಖಾನೆಗಳು ಬೇಕೂ ಅಂದ್ರು. ಅವರ ಪಟ್ಟಿಗೆ ಗಣಿಗಳು, ವಿದ್ಯುತ್ ಕ್ಷೇತ್ರ, ದೂರ ಸಂಪರ್ಕ ಕ್ಷೇತ್ರದ ಉದ್ದಿಮೆಗಳನ್ನು ಬಂದವು. ಹೀಗೆ ಕೇಳ್ತಾ ಕೇಳ್ತಾ ಈ ಜನ ಈಗ ಎಲ್ಲಿಗೆ ಬಂದಿದ್ದಾರೆ ಅಂದ್ರೆ ದೇಶದ ರಕ್ಷಣೆಗೆ ಅಗತ್ಯವಾದ ಸಾಧನ ಸಲಕರಣೆ, ಶಸ್ತ್ರಾಸ್ತ್ರಗಳನ್ನು ತಯಾರಿಸಿ ಕೊಡೋ ರಕ್ಷಣಾ ಕ್ಷೇತ್ರದ ಉದ್ದಿಮೆಗಳನ್ನು ಖಾಸಗಿಯವರ ಕೈಗೆ ಅದೂ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಕೈಗೆ ಕೊಟ್ಟು ಬಿಡಿ ಅಂತ ಅಬ್ಬರಿಸುತ್ತಾ ಇದ್ದಾರೆ. ನಿರ್ಲಜ್ಜ ಸರ್ಕಾರ ಇಂತಹ ವಾದಗಳಿಗೆ ಮೆಲ್ಲ ಮೆಲ್ಲಗೆ ಮಣೆ ಹಾಕುತ್ತಾ ಹಂತ ಹಂತವಾಗಿ ಇದನ್ನು ಸದ್ದೇ ಇಲ್ಲದೇ ಜಾರಿ ಮಾಡ್ತಾ ಇದೆ.

> **ಸಾರ್ವಜನಿಕ ವಲಯದ ಉದ್ದಿಮೆಗಳು ದೇಶದ ಆರ್ಥಿಕತೆ ಅಡಿಪಾಯ, ಸ್ವಾವಲಂಬನೆಯ ಆಧಾರ. ಇಂತಹ ಉದ್ದಿಮೆಗಳನ್ನು ಉಸಿರುಗಟ್ಟಿಸಿ ಕೊಲ್ಲುವ ಯತ್ನವನ್ನು ನಮ್ಮ ಸರ್ಕಾರವೇ ನಡೆಸುತ್ತಿದೆ. ಈ ದೇಶದ ಬಹುದೊಡ್ಡ ಭಾಗದ ಸಂಪತ್ತನ್ನು ಸೃಷ್ಟಿಸುವ ಈ ಉದ್ದಿಮೆಗಳ ಕಾರ್ಮಿಕ ವರ್ಗದ ನ್ಯಾಯಬದ್ಧ ಬೇಡಿಕೆಗಳಿಗೆ ಸರ್ಕಾರ ಕುರುಡುತನ - ಕಿವುಡುತನ ತೋರುತ್ತಿದೆ. ಕಾರ್ಮಿಕರು ಹೋರಾಟಕ್ಕೆ ಸಜ್ಜಾಗಿದ್ದಾರೆ.**

ದೇಶಕ್ಕೊಂದು ಭದ್ರತೆ ಅಂತ ಬೇಡವಾ

ಲಾಭದ ಆಸೆ, ಖಾಸಗಿ ಆಸ್ತಿಯನ್ನು ಗೋರಿಕೊಳ್ಳುವ ಜಾಗತೀಕರಣವಾದಿಗಳ ದಾಹದಿಂದಾಗಿ ಈ ದೇಶದ ಭದ್ರತೆಗೆ ಈಗಾಗಲೇ ಬಾರಿ ಅಪಾಯ ಬಂದೊದಗಿದೆ. ಅವರು ಅಂದರೆ ವಿದೇಶಿ ಶಕ್ತಿಗಳು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅವಕಾಶ ಕೇಳಿದರು ಕೊಟ್ಟರು. ವಿಮಾ ರಂಗದಲ್ಲಿ ಅವಕಾಶ ಕೇಳಿದರು ಕೊಟ್ಟರು, ಉತ್ಪಾದನಾ ಕ್ಷೇತ್ರದ ಉದ್ದಿಮೆಗಳನ್ನು ಕೇಳಿದರು ಕೊಡುತ್ತಿದ್ದಾರೆ.

ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಸರ್ಕಾರ ತುದಿಗಾಲ ಮೇಲೆ ನಿಂತಿದೆ. ಟೆಲಿಕಾಂ ಕ್ಷೇತ್ರ ಅಂದರೆ ಏನು ಅದು ವಿದೇಶಿ ಕಂಪನಿಯೊಂದರ ಕೈಗೆ ಹೋಗುವುದು ಅಂದರೆ ಏನು?

ಈ ಉದ್ದಿಮೆಯ ಮಾಲೀಕತ್ವ ಅಂದರೆ ದೇಶದ ಯಾವುದೇ ದೂರವಾಣಿ ಕರೆಗಳನ್ನು ರದ್ದು ಕೇಳುವ ಅವಕಾಶ ಇರುತ್ತೆ ಅನ್ನೋದು ಒಂದು ಆತಂಕದ ವಿಷಯವೇ ಅಲ್ಲವೆ. ನಮ್ಮ ಸರ್ಕಾರಗಳ ಎಷ್ಟೋ ರಹಸ್ಯಗಳು, ನಮ್ಮ ಮಿಲಿಟರಿಯ ಎಷ್ಟೋ ಹೊರ ಬರಬಾರದಂತಹ ವಿಚಾರಗಳು ಸೋರಿ ಹೋದರೆ ಯಾರು ಹೊಣೆ.

ಬ.ಕ. ಗಳೆಂದರೇನು ಸುಮ್ಮನೆಯೇ?

ಜಗತ್ತನ್ನು ಕಾಯುವ ಪೋಲೀಸ್ ತಾನು ಎನ್ನುವ ಅಮೇರಿಕಾ ಅಂಬೋ ಮಹತ್ವಾಕಾಂಕ್ಷಿ ಶಕ್ತಿ ಜಗತ್ತಿನ ಯಾವ ಯಾವ ದೇಶಗಳಲ್ಲಿ ತನ್ನ ದೇಶದ ಬಹುರಾಷ್ಟ್ರೀಯ ಕಂಪನಿಗಳನ್ನು ಬಳಿಸಿ ಎಷ್ಟೆಲ್ಲಾ ರಕ್ತಪಾತಗಳನ್ನು ನಡೆಸಿದೆ. ಪ್ರಜಾಪ್ರಭುತ್ವ ಚಳುವಳಿಗಳನ್ನು ಹತ್ತಿಕ್ಕಿದೆ ಎಂಬುದು ನಮ್ಮ ಆಳುವ ಜನರಿಗೆ ಗೊತ್ತಿಲ್ಲವೆ. 1972 ರಲ್ಲಿ ಚಿಲಿ ದೇಶದಲ್ಲಿ ಚುನಾವಣೆಯಲ್ಲಿ ಬಹುಮತ ಪಡೆದು ಅಧಿಕಾರಕ್ಕೆ ಬಂದ ಸಮಾಜವಾದಿ ಅಲಂಡೆಯನ್ನು ಕೊಂದು ಸರ್ವಾಧಿಕಾರಿ ಯನ್ನು ಸ್ಥಾಪಿಸಿದ್ದರಲ್ಲಿ ಚಿಲಿಯಲ್ಲಿದ್ದ ಬಹುರಾಷ್ಟ್ರೀಯ ಕಂಪನಿಗಳ ಪಾತ್ರವೇನು ಸಣ್ಣದೇ. ಅಷ್ಟೇಕೆ ಮೊನ್ನೆ ಮೊನ್ನೆ ವೆನುಜುವೆಲಾದಲ್ಲಿ ಜನಪ್ರಿಯ



ಆರ್.ರಾಮಕೃಷ್ಣ

ಅಧ್ಯಕ್ಷ ಹ್ಯೂಗೋ ಚವೇಜನನ್ನು ಅಪಹರಿಸಿ ಅಲ್ಲಿ ಅಮೇರಿಕಾದ ಪುಂಗಿಗೆ ತಲೆದೂಗುವ ಕೈಗೊಂಬೆ ಸರ್ಕಾರ ತರಲು ನಡೆಸಿದ ಪ್ರಯತ್ನದಲ್ಲಿ ಅಲ್ಲಿನ ಅಮೇರಿಕನ್ ಕಂಪನಿಗಳು ವಹಿಸಿದ ಪಾತ್ರ ಜಗತ್ತಿಗೆ ಗೊತ್ತಿಲ್ಲವೇ?

ವೆನಿಜುವೆಲಾದಲ್ಲಿ ಅಮೇರಿಕಾದ ಸಂಚು ಫಲಿಸಲಿಲ್ಲ ಎಂಬುದು ಬೇರೆ ಮಾತು. ಆದರೆ ಹಲವು ದಶಕಗಳ ಕಾಲ ಸರ್ವಾಧಿಕಾರಿ ಪ್ರಭುತ್ವದೊಂದಿಗೆ ಸೆಣಸಬೇಕಾಗಿ ಬಂದ ಚಿಲಿಯ ಅನುಭವದಿಂದ ನಾವು ಕಲಿಯುದೇನು ಇಲ್ಲವೇ? ಇದೆಲ್ಲಾ ಹೋಗಲಿ ನಮ್ಮ ದೇಶ ಇವತ್ತು ಅಭಿವೃದ್ಧಿ ಅಂತಾ ಏನೂ ಒಂದಷ್ಟು ಸಾಧಿಸಿದೆಯೇ. ಕೆಲವಾದರೂ ವಿಚಾರಗಳಲ್ಲಿ, ಸ್ವಾವಲಂಬನೆ ಅಂತಾ ಏನು ಸಾಧಿಸಿದೆಯೋ ಅದರಲ್ಲಿ ಸಾರ್ವಜನಿಕ ಉದ್ದಿಮೆಗಳು ವಹಿಸಿರುವ ದೊಡ್ಡ ಪಾತ್ರ ಇವರಿಗೇಕೆ ನೆನಪಿಗೆ ಬರುತ್ತಿಲ್ಲ.

ಆಗ ಸರ್ಕಾರವೇ ಬೇಕಿತ್ತು

ಇವತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮತ್ತು ಬೆಳವಣಿಗೆಯ ಬಗ್ಗೆ ಬಾರಿ ಬಾರಿ ವೈಭವೀಕರಣ ನಡೆಯುತ್ತಿದೆ. ಈ ವೈಭವೀಕರಣದ ಭರಾಟೆಯಲ್ಲಿ ನಮ್ಮ ದೇಶದ ಪ್ರಮುಖ ಆರ್ಥಿಕತೆಯ ಆಧಾರವಾಗಿರೋ ಸಾರ್ವಜನಿಕ ಉದ್ದಿಮೆಗಳ ಪಾತ್ರವನ್ನು ಮರೆ ಮಾಚಲಾಗುತ್ತಾ ಇದೆ.

ವಿದ್ಯುತ್, ಉಕ್ಕು, ಕಲ್ಲಿದ್ದಲು, ಇಂತಹ ಕ್ಷೇತ್ರಗಳು ಬೆಳೆಯದೇ ಯಾವ ಆರ್ಥಿಕತೆಯೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಈ ರಂಗಗಳನ್ನು ಬೆಳೆಸೋದಕ್ಕೆ ಭಾರತದ ಯಾವ ಬಂಡವಾಳಗಾರರ ಬಳಿಯೂ ಬಂಡವಾಳವೂ ಇರಲಿಲ್ಲ. ಹೆಚ್ಚಿನ ತಂತ್ರಜ್ಞಾನವೂ ಇರಲಿಲ್ಲ.

ಇಂತಹ ಕ್ಷೇತ್ರದಲ್ಲಿ ಅಪಾರ ಮೊತ್ತದ ಬಂಡವಾಳ ಹೂಡಬೇಕು. ಲಾಭ ಎಷ್ಟೋ ವರ್ಷಗಳ ನಂತರ, ಅದೂ ಬಂದರೆ ಬರಬಹುದು ಇಲ್ಲವಾದರೆ ಇಲ್ಲ ಇಲ್ಲ... ಹಾಗಿದ್ದರೆ ಇ[illegible] ಖಾಸಗಿಯವರಿಗೇನು ಕೆಲಸ.

ಐವತ್ತರ ದಶಕದಲ್ಲಿ ಅದರಲ್ಲಿಯೂ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತು ಆನಂತರವೂ ಕೇಂದ್ರ ಸರ್ಕಾರ ಬೃಹತ್ ಸಾರ್ವಜನಿಕ ಕೈಗಾರಿಕೆಗಳನ್ನು ಸ್ಥಾಪಿಸಿತು. ನಮ್ಮ ಬೆಂಗಳೂರು ನೆರೆಯ ಆಂಧ್ರ ಪ್ರದೇಶದ ಹೈದರಬಾದ್‌ಗಳು ಈ ಸಾರ್ವಜನಿಕ ಉದ್ದಿಮೆಗಳ ಪ್ರಮುಖ ಕೇಂದ್ರಗಳಾಗಿ ಬೆಳೆದು ಬಂದವು.

ವಿದ್ಯುತ್ ಉತ್ಪಾದಿಸಲು ಅಗತ್ಯವಾದ ವಿವಿಧ ಬಗೆಯ ವಿದ್ಯುತ್ ಜನಕರ ಯಂತ್ರಗಳನ್ನು ತಯಾರಿಸುವ ದೊಡ್ಡ ಕಾರ್ಖಾನೆ ಬಿ.ಹೆಚ್.ಇ.ಎಲ್., ವಿದ್ಯುನ್ಮಾನ ಕ್ಷೇತ್ರದ ಬೃಹತ್ ಸಂಸ್ಥೆಯಾಗಿ ಬಿ.ಇ.ಎಲ್. ರೈಲ್ವೆ ಬೋಗಿಗಳಿಂದ ಆರಂಭಿಸಿ, ರಕ್ಷಣಾ ಇಲಾಖೆಗೆ ಮತ್ತು ನಿರ್ಮಾಣ ಕಾಮಗಾರಿಗಳಿಗೆ ಅನಿವಾರ್ಯವಾದ ರೀತಿಯ ಬೃಹತ್ ಯಂತ್ರೋಪಕರಣಗಳನ್ನು ಉತ್ಪಾದಿಸುವ ಬಿ.ಇ.ಎಂ.ಎಲ್., ಭಾರತದ ದೂರ ಸಂಪರ್ಕ ಕ್ಷೇತ್ರದ ಬೆನ್ನೆಲುಬಾಗಿ ಐ.ಟಿ.ಐ., ವಿಮಾನ ನಿರ್ಮಾಣ ಸಂಸ್ಥೆಯಾಗಿ ಹೆಚ್.ಎ.ಎಲ್. ಮುಂತಾದ ಉದ್ದಿಮೆಗಳು ರೂಪುಗೊಂಡವು.

ದೇಶದ ಸೇನೆಗೆ ಅಗತ್ಯವಾದ ಮುದ್ದು, ಗುಂಡು, ಶಸ್ತ್ರಾಸ್ತ್ರಗಳನ್ನು ತಯಾರಿಸಲು ಮತ್ತು ಈ ನಿಟ್ಟಿನಲ್ಲಿ ಸಂಶೋಧನೆಗಳನ್ನು ನಡೆಸಲು ದೇಶಾದ್ಯಂತ 50 ಡಿ.ಆರ್.ಡಿ.ಓ ಪ್ರಯೋಗಾಲಯಗಳು ಸ್ಥಾಪನೆಗೊಂಡವು. ಅದರಲ್ಲಿ 3 ಬೆಂಗಳೂರಿಗೆ ಬಂದವು.



ಇವತ್ತು ಬೆಂಗಳೂರು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಕೇಂದ್ರವಾಗಿ ಹೆಸರು ಮಾಡಿದರೆ ಅದು ಕೇವಲ ನಾರಾಯಣಮೂರ್ತಿ

ಪ್ರೇಮ್‌ಜಿ ಅವರ ಕೊಡುಗೆ ಮಾತ್ರ ಅಲ್ಲ, ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ಬಿ.ಇ.ಎಲ್. ಮುಂತಾದ ಈ ಬೃಹತ್ ಸಾರ್ವಜನಿಕ ಉದ್ದಿಮೆಗಳು, ಸಂಶೋಧನಾ ಕೇಂದ್ರಗಳು ಅವುಗಳ ಪರಿಣಾಮವಾಗಿ ರೂಪಗೊಂಡ ಶಿಕ್ಷಿತ ಸಮುದಾಯವೇ ಈ ಸಾಧನೆಯ ಹಿಂದಿನ ಆಧಾರ.

ಲಕ್ಷಾಂತರ ಉದ್ಯೋಗ ಸೃಷ್ಟಿ

ಈ ಸಾರ್ವಜನಿಕ ಉದ್ದಿಮೆಗಳೇ ದೇಶದಲ್ಲಿ ನೇರವಾಗಿ ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದವು. ಇದರಲ್ಲಿ ಈ ಮುಖ್ಯ ಕೈಗಾರಿಕೆಗಳಿಗೆ ಅಗತ್ಯವಾದ ಬಿಡಿ ಭಾಗಗಳು ಇತ್ಯಾದಿಗಳನ್ನು ಪೂರೈಸುವ ಪೂರಕ ಕೈಗಾರಿಕೆಗಳ ದೊಡ್ಡ ಹಿಂಡೇ ರೂಪುಗೊಂಡು ದೊಡ್ಡ ಪ್ರಮಾಣದ ಉದ್ಯೋಗಾವಕಾಶಗಳು ಸೃಷ್ಟಿಯಾದವು.

ಇಂದು ದೇಶದಲ್ಲಿ ಸಾರ್ವಜನಿಕ ಉದ್ದಿಮೆಗಳು ನೇರವಾಗಿ ಸುಮಾರು 12-13 ಲಕ್ಷ ಖಾಯಂ ಕಾರ್ಮಿಕರಿಗೆ ಉದ್ಯೋಗಾವಕಾಶಗಳನ್ನು ನೀಡಿವೆ. ಇದಲ್ಲದೆ ಈ ಸಾರ್ವಜನಿಕ ಉದ್ದಿಮೆಗಳನ್ನವಲಂಬಿಸಿದ ಪೂರಕ ಉದ್ದಿಮೆಗಳಲ್ಲಿ ಲಕ್ಷಾಂತರ ಕಾರ್ಮಿಕರು ಉದ್ಯೋಗಾವಕಾಶ ಪಡೆದಿದ್ದಾರೆ.

ಹೀಗೆ ದೇಶದ ಸಾರ್ವಜನಿಕ ಉದ್ದಿಮೆಗಳು ಉದ್ಯೋಗಾವಕಾಶ, ಆರ್ಥಿಕ ಬೆಳವಣಿಗೆ, ದೇಶದ ರಕ್ಷಣೆ, ಖಾಸಗಿ ಉದ್ದಿಮೆಗಳ ಅಗತ್ಯವಾದ ಮೂಲಭೂತ ಸೌಕರ್ಯಗಳ ಬೆಳವಣಿಗೆ ತನ್ನ ಐತಿಹಾಸಿಕ ಪಾತ್ರವನ್ನು ನಿರ್ವಹಿಸುತ್ತಾ ಬಂದವು.

ಜಾಗತೀಕರಣದ ಬಲಿಪೀಠ

ಜಾಗತೀಕರಣದ ಬಲಿ ಪೀಠದಲ್ಲಿ ಸಾರ್ವಜನಿಕ ಉದ್ದಿಮೆಗಳನ್ನು ಹೀಗೆ ನಿರ್ದಯವಾಗಿ ಬಲಿಕೊಡಲು ನಿಂತಿರುವಾಗ ಇನ್ನು ಅಲ್ಲಿ ದುಡಿಯುವ ಕೆಲಸಗಾರರು ಇನ್ನು ಯಾವ ಲೆಕ್ಕ. ಬಣ್ಣ ಬಣ್ಣದ ವಿವಿಧ ಸ್ವಯಂ ನಿವೃತ್ತಿ ಯೋಜನೆ ನೀಡಿ ಅವರನ್ನೆಲ್ಲಾ ಮನೆಗಟ್ಟಲು ಸರ್ಕಾರ ಕಾತರಿಸುತ್ತಿದೆ. ಕಾರ್ಮಿಕ ವರ್ಗದ ಪ್ರತಿರೋಧ, ಎಡಪಕ್ಷಗಳ ಹೋರಾಟ, ಸಾರ್ವಜನಿಕ ಒತ್ತಡದ ಫಲವಾಗಿ ಅಷ್ಟಿಷ್ಟು ಇನ್ನೂ ಸಾರ್ವಜನಿಕ ಕ್ಷೇತ್ರದಲ್ಲಿ ಉಳಿದಿದೆ. ಆದರೆ ಕಾರ್ಮಿಕರ ಬೇಡಿಕೆಗಳು ಕುರಿತು ನಿರ್ಲಕ್ಷ್ಯ, ತಾತ್ಸರವೇ ಸರ್ಕಾರ ಧೋರಣೆಯಾಗಿದೆ.

ದುಡಿಯುವವರ ಅಹವಾಲು ಏನು?

ದೇಶವೇ ಹೆಮ್ಮೆ ಪಡುವಂತಹ ಹಲವು ಸಾಧನೆಗಳ ಆಧಾರ ಈ ಕಾರ್ಮಿಕ ವರ್ಗದ ಶ್ರಮ ಮತ್ತು ನೈಪುಣ್ಯ. ಆದರೆ ದೇಶಕ್ಕೆ ಅಪಾರ ಸಂಪತ್ತನ್ನು ಸೃಷ್ಟಿಸಿ ಕೊಡುವ ಅವರ ನ್ಯಾಯಬದ್ಧ ಬೇಡಿಕೆಗಳ ಕಡೆಗೆ ಸರ್ಕಾರ ಕಡೆಗಣ್ಣಿನಿಂದ ನೋಡುತ್ತಿದೆ.

ವೇತನದ ಪ್ರಶ್ನೆ

ಈ ಹಿಂದೆ ಆಗಿರುವ ವೇತನದ ಒಪ್ಪಂದವು ಡಿ.31, 2006ಕ್ಕೆ ಮುಗಿದಿದೆ. 2007ರಿಂದ ಹೊಸ ವೇತನ ಒಪ್ಪಂದ ಏರ್ಪಡಿಸಬೇಕು. ಸಾರ್ವಜನಿಕ ವಲಯದ ಕಾರ್ಮಿಕರ ಸಂಘ (ಪಿಎಸ್‌ಇಯು) ಕಾರ್ಮಿಕರ ಬೇಡಿಕೆ ಪಟ್ಟಿ ಸಿದ್ಧಪಡಿಸಿದೆ. ಈಗ ಸಂತೋಷ ಮೋಹನ್ ದೇವ್ ಅವರು ಮಂತ್ರಿಯಾಗಿರುವ ಕೈಗಾರಿಕಾ ಸಚಿವಾಲಯದ ಭಾಗವಾಗಿ ಡಿಪಾರ್ಟ್‌ಮೆಂಟ್ ಆಫ್ ಎಂಟರ್ ಪ್ರೈಸಸ್(ಡಿಪಿಇ) ಈ ವಿಚಾರದಲ್ಲಿ ಕೆಲವು ಮಾರ್ಗ ಸೂಚಿಗಳನ್ನು ರೂಪಿಸಿದೆ.

ಅವರು ಹೇಳುವಂತೆ ಈಗ ಆಗಬೇಕಿರುವ ಹೊಸ ವೇತನ ಒಪ್ಪಂದವು 10 ವರ್ಷಕ್ಕೆ. ಅಂದರೆ ಮುಂದೆ 10 ವರ್ಷ ಕಾರ್ಮಿಕರು ವೇತನದ ಬಗೆಗೆ ಮಾತನಾಡಬಾರದು. ಮತ್ತು ಈ ವೇತನ ನಿಗದಿಯಿಂದ ಕಾರ್ಖಾನೆಗಳಲ್ಲಿ ಉತ್ಪಾದನಾ ವೆಚ್ಚ ಹೆಚ್ಚಾಗಬಾರದು(!) ಮತ್ತು ರೋಗಗ್ರಸ್ತ ಉದ್ದಿಮೆಗಳ ಕಾರ್ಖಾನೆಗಳಲ್ಲಿ ವೇತನ ಹೆಚ್ಚಳ ಕೇಳಬಾರದು ಇತ್ಯಾದಿ ಇತ್ಯಾದಿ....

ಇದನ್ನೇನೂ ಕಾರ್ಮಿಕ ವರ್ಗ ಒಪ್ಪಿಲ್ಲ. ಈ ಹತ್ತು ವರ್ಷದ ವೇತನ ಒಪ್ಪಂದದ ವಿರುದ್ಧ ಈಗಾಗಲೇ ಕಲ್ಲಿದ್ದಲು ಉದ್ದಿಮೆಯ ಕಾರ್ಮಿಕರ 8 ದಿನ ಯಶಸ್ವಿ ನಡೆಸಿ 5 ವರ್ಷದ ವೇತನ ಒಪ್ಪಂದಕ್ಕೆ ಸರ್ಕಾರವನ್ನು ಬಗ್ಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೇಗಿದೆ. ನೋಡಿ, ಸರ್ಕಾರದ ನೀತಿಯಿಂದಾಗಿ ಕಾರ್ಖಾನೆ ರೋಗಗ್ರಸ್ತವಾದರೆ ಅಲ್ಲಿ ದುಡಿಯುವ ಕಾರ್ಮಿಕರಿಗೆ ಬರೆ. ಕಾರ್ಖಾನೆ ಸ್ವಲ್ಪ ನಷ್ಟ ಮಾಡಿದರೂ ಸರಿ ದೇಶದ ಹಿತಾಸಕ್ತಿಯ ದೃಷ್ಟಿಯಿಂದ ನಡೆಯಲೇ ಬೇಕಾದ ಕಾರ್ಖಾನೆಗಳಿರುತ್ತವೆ.

ಕಾಮಧೇನುಗಳ ಕತ್ತು ಕೊಯ್ಯುವ ನೀತಿ

ಇಷ್ಟೆಲ್ಲಾ ಮಹತ್ವ ಹೊಂದಿರುವ ಸಾರ್ವಜನಿಕ ಉದ್ದಿಮೆಗಳನ್ನು ಉಳಿಸಿ ಬೆಳೆಸುವ ಇಚ್ಛೆ ನಮ್ಮ ಆಳುವ ಜನರಿಗಿಲ್ಲ. ಇದೇ ಸಾರ್ವಜನಿಕ ಸಂಸ್ಥೆಗಳು ನೀಡಿದ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಆಳುವ ಸರ್ಕಾರಗಳಿಂದ ಬೇಕು ಬೇಕಾದ ರಿಯಾಯಿತಿ ವಿನಾಯಿತಿ ಪಡೆದುಕೊಂಡ ಖಾಸಗಿ ಬಂಡವಾಳಗಾರರು ಈಗ ಕಾರ್ಮಿಕವರ್ಗವನ್ನು ದೇಶದ ಜನರನ್ನು ಹಿಂಡಿ ದೈತ್ಯವಾಗಿ ಕೊಬ್ಬಿ ಬೆಳೆದಿದ್ದಾರೆ. ವಿದೇಶಿ ಬಂಡವಾಳಗಾರರೊಂದಿಗೆ ಕೈ ಜೋಡಿಸಿರುವ ದೇಶದ ದೊಡ್ಡ ಬಂಡವಾಳಗಾರರು ಈಗ, ಗಣಿ, ಕಾರ್ಖಾನೆ, ಬ್ಯಾಂಕ್, ವಿಮಾನ, ವಿಮಾನ ನಿಲ್ದಾಣ ಎಲ್ಲವನ್ನು ತಾವು ಆಪೋಶನ ತೆಗೆದುಕೊಳ್ಳಲು, ತಹತರಿಸುತ್ತಿದ್ದಾರೆ. 1951ರಲ್ಲಿ 29 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದ ಹೂಡಿಕೆಯೊಂದಿಗೆ ಆರಂಭವಾದ ಈ ಸಾರ್ವಜನಿಕ ಉದ್ದಿಮೆಗಳು ಈಗ 3.5 ಲಕ್ಷ ಕೋಟಿ ರೂಪಾಯಿಗಳ ಒಟ್ಟು ಆಸ್ತಿ ಮೌಲ್ಯವನ್ನು ಹೊಂದಿವೆ. ಈ ಸಂಪತ್ತು ಈಗ ದೇಶೀಯ ವಿದೇಶಿಯ ಬಂಡವಾಳಗಾರರ ಕಣ್ಣು ಕುಕ್ಕುತ್ತಿದೆ. ಜಗತ್ತನ್ನೇ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಹವಣಿಸುತ್ತಿರುವ ಜಾಗತಿಕ ಬಂಡವಾಳಗಾರರು ಹಿರಿಹಿರಿ ಹಿಗ್ಗಿದ್ದಾರೆ. ಇವರೆಲ್ಲಾ ಸೇರಿ ಸೃಷ್ಟಿಸಿದ ವಾದಗಳು ಮಂಡಿಸಿದ ಸಿದ್ಧಾಂತಗಳು ಹೂಡಿದ ಹೂಟ ಎಲ್ಲವೂ ಸಾರ್ವಜನಿಕ ಸಂಸ್ಥೆಗಳಿಗೆ ಉರುಳಾಗಿ ಪರಿಣಮಿಸಿದೆ.



ಕರ್ನಾಟಕದಲ್ಲಿರುವ ನೂರಾರು ಸರ್ಕಾರಿ ಹಾಗೂ ಅರೆ ಸರ್ಕಾರಿ ಕಛೇರಿ, ಕಾರ್ಖಾನೆಗಳಿಗೆ ಸರ್ಕಾರದ್ದೇ ಸಂಸ್ಥೆಯಾದ ಮೈಸೂರು ಲ್ಯಾಂಪ್ಸ್‌ನ ಬಲ್ಬ್‌ಗಳನ್ನು ಟ್ಯೂಬ್‌ಗಳನ್ನು ಪೂರೈಸದೇ ಹೇಗೆ ಖ್ಯಾತ ಮೈಸೂರು ಲ್ಯಾಂಪ್ಸ್ ಎಂಬ ಕಾರ್ಖಾನೆ ನಂದಿ ಹೋಯಿತೋ ಹಾಗೆ ಸರ್ಕಾರದ ಕಾರ್ಖಾನೆ ಕಛೇರಿಗಳಿಗೆ ಅಗತ್ಯ ಟೆಲಿಫೋನ್‌ಗಳಾಗಿ ಸರ್ಕಾರಿ ಐಟಿಐಗೆ ಆರ್ಡರ್ ಕೊಡದೇ ಕೊಲ್ಲಲಾಗುತ್ತಿದೆ. ಇದಕ್ಕೆ ಮುಕ್ತ ಟೆಂಡರ್ ಜಾಗತಿಕ ಟೆಂಡರ್ ಎಂದೆಲ್ಲಾ ವಂಚಕ ಹೆಸರುಗಳನ್ನು ನೀಡಲಾಗಿದೆ. ಉದಾಹರಣೆ ಉಕ್ಕು ಕ್ಷೇತ್ರವನ್ನೇ ನೋಡಿ. ಉಕ್ಕು ಅಂದರೆ ಅದು ಒಂದೇ ತರಹದ್ದಲ್ಲ. ಅದರಲ್ಲಿ ಹತ್ತಾರು ವಿಧಗಳಿವೆ. ಒಂದು ಹಂತದಲ್ಲಿ ಉಕ್ಕಿನ ಕ್ಷೇತ್ರದಲ್ಲಿ ಲಾಭದಾಯಕವಾದ ಕೆಲವು ವಿಧದ ಹಕ್ಕನ್ನು ಮಾತ್ರ ಖಾಸಗಿ ಉದ್ದಿಮೆಗಳು ಉತ್ಪಾದಿಸಲು ಆರಂಭಿಸಿದವು. ಇದರಿಂದ ಅಷ್ಟು ಲಾಭದಾಯಕವಲ್ಲದ ಮತ್ತು ನಷ್ಟವನ್ನೇರಿಸುವ ವಿವಿಧ ಉಕ್ಕನ್ನು ತಯಾರಿಸುವ ಜವಾಬ್ದಾರಿ ಸರ್ಕಾರಿ ಕಂಪನಿಗಳ ಮೇಲೆಯೇ ಬಿತ್ತು. ಏಕೆಂದರೆ ಆ ವಿವಿಧ ಬಗೆಯ ಉಕ್ಕು ದೇಶದ ಒಟ್ಟು ಬೆಳವಣಿಗೆಯ ದೃಷ್ಟಿಯಿಂದ ಅಮೂಲ್ಯವಾದುದಾಗಿತ್ತು.

ಮಾಡೋನಿಗೆ ಮೂರು ಹಣ,
ಹೇಳೋನಿಗೆ ಆರು ಹಣ. ಅಲ್ಲಲ್ಲ....

ಸಾರ್ವಜನಿಕ ಉದ್ದಿಮೆಗಳಲ್ಲಿ ಇನ್ನು ಎಷ್ಟೇಷ್ಟೋ ಸಮಸ್ಯೆಗಳಿವೆ. ಇಲ್ಲಿ ಅಧಿಕಾರಿಗಳು ಮತ್ತು ಕಾರ್ಮಿಕರ ನಡುವಿನ ವೇತನದ ಅಂತರ ವಿಪರೀತವಾಗಿದೆ. ಮಾಡೋನಿಗೆ ಮೂರು ಹಣ,

ಪುಟ 10ಕ್ಕೆ

‘ನಾವು ದೇಶದ ರಕ್ಷಣೆಗೆ ಸನ್ನದ್ದರು’

“ಬಿ.ಇ.ಎಲ್. ದೇಶದ ರಕ್ಷಣೆ ಅಗತ್ಯವಾದ ರಾಡಾರ್‌ಗಳು, ಸಂಪರ್ಕ ಸಾಧನಗಳು, ರಾತ್ರಿ ದರ್ಶಕ ದೂರ ದರ್ಶಕಗಳು (Night Vision bina Culory) ಇತ್ಯಾದಿ ಅಮೂಲ್ಯ ಸಾಧನಗಳನ್ನು ಉತ್ಪಾದಿಸುತ್ತಾ ಇದೆ. ಸಾಧನ ಪೂರೈಸುವುದು ಮಾತ್ರವಲ್ಲ. ಯುದ್ಧದ ಸಂದರ್ಭಗಳಲ್ಲಿ ಬಿ.ಇ.ಎಲ್. ತಜ್ಞರ ತಂಡ ರಣರಂಗದಲ್ಲಿ ಹೋರಾಡುವ ಸೈನಿಕರ ಜೊತೆ ಇದ್ದು, ಆಕಸ್ಮಾತ್ ಉಂಟಾಗಬಹುದಾದ ತಾಂತ್ರಿಕ ದೋಷಗಳನ್ನು ನಿವಾರಿಸಿಕೊಡುತ್ತದೆ.

ಇಂತಹ ಬದ್ಧತೆ ಖಾಸಗಿ ರಂಗದ ಉದ್ಯಮಿಗಳಿಗೆ ಇದೆಯೇ. ಎಲ್ ಅಂಡ್ ಟಿ ಮುಂತಾದ ಖಾಸಗಿ ಸಂಸ್ಥೆಗಳಿಗೆ ರಕ್ಷಾ ಉದ್ಯೋಗ ರತ್ನ ಅಂತ ಸ್ಥಾನ ನೀಡಿ, ಅವರಿಂದ ರಕ್ಷಣಾ ಸಾಧನಗಳನ್ನು ಪಡೆದುಕೊಳ್ಳೋದಕ್ಕೆ ಪ್ರಯತ್ನಸುತ್ತಿದೆ.

ಮೊದಲಿಗೆ ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವ ರಕ್ಷಣಾ ಸಾಧನೆಗಳನ್ನು ಮಾತ್ರ ಇವರಿಂದ ಪಡೆದುಕೊಳ್ಳುವುದಾಗಿ ಹೇಳಲಾಯಿತು. ಆದರೆ ಈಗ ಸ್ಪರ್ಧೆ ಹೆಸರಿನಲ್ಲಿ ನಮ್ಮ ದೇಶದ ಸಾರ್ವಜನಿಕ ಸಂಸ್ಥೆಗಳು ತಯಾರಿಸುವ ಸಾಧನಗಳನ್ನು ಇವರಿಂದ ಪಡೆದುಕೊಳ್ಳಲು ಯತ್ನಿಸಲಾಗುತ್ತಿದೆ.

ಇದೊಂದು ಅಪಾಯಕಾರಿ ಹೆಜ್ಜೆ. ಖಾಸಗಿ ಕಂಪನಿಗಳು ಲಾಭಕ್ಕಾಗಿ ಅತ್ಯಂತ ನಿರ್ಣಾಯಕ (ಯುದ್ಧ) ಸಂದರ್ಭದಲ್ಲಿ ವಿದೇಶಿ ಶಕ್ತಿಗಳೊಂದಿಗೆ ಶಾಮೀಲಾಗುವುದಿಲ್ಲ ಅನ್ನುವುದಕ್ಕೆ ಏನು ಖಾತರಿ ಇದೆ?”

ಎಸ್.ಓಂಪ್ರಕಾಶ್, ಕಾರ್ಯದರ್ಶಿ
ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್, ಸಿಐಟಿಯು

★

ಖಾಸಗಿ ಸಾರ್ವಜನಿಕ ಉದ್ದಿಮೆ ವ್ಯತ್ಯಾಸ

“ನಮ್ಮ ದೇಶದ ಸಾರ್ವಜನಿಕ ಉದ್ದಿಮೆಗಳು ತಮ್ಮ ತೆರಿಗೆ, ಡಿವಿಡೆಂಡ್, ಇತ್ಯಾದಿ ರೂಪದಲ್ಲಿ ಕಳೆದ ವರ್ಷ 1 ಲಕ್ಷ 25 ಸಾವಿರ ಕೋಟಿ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡಿವೆ. ಅದು ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ.10-11 ರಷ್ಟಾಗುತ್ತದೆ. ಆದರೆ ಇದೇ ಅವಧಿಯಲ್ಲಿ ದೇಶದ 245 ಖಾಸಗಿ ಉದ್ದಿಮೆಗಳಿಂದ ಸರ್ಕಾರಕ್ಕೆ ಸಲ್ಲಬೇಕಿದ್ದ 1 ಲಕ್ಷ 93 ಸಾವಿರ ಕೋಟಿ ರೂ.ಗಳನ್ನು ಸಂದಾಯ ಮಾಡದೆ ವಂಚಿಸಲಾಗಿದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ.

ಇಷ್ಟಾದರೂ ಸರ್ಕಾರದ ಧೋರಣೆ ಹೇಗಿದೆ ಎಂದರೆ ಖಾಸಗಿ ಉದ್ಯಮಿ ರತನ್ ಟಾಟಾ ಅವರು ಯಾವಾಗ ಬೇಕಾದರೂ ರಕ್ಷಣಾ ಮಂತ್ರಿಗಳನ್ನು ಭೇಟಿ ಮಾಡಬಹುದು. ಆದರೆ ಸಾರ್ವಜನಿಕ ಉದ್ದಿಮೆಗಳ ಮುಖ್ಯಸ್ಥರು ರಕ್ಷಣಾ ಮಂತ್ರಿಗಳನ್ನು ಭೇಟಿ ಮಾಡುವುದೇ ಕಷ್ಟ’...

ಗಂಗಾಧರ ಭೂಸ್ತಳಿಮಠ,
ಉಪಾಧ್ಯಕ್ಷರು, ಬಿ.ಇ.ಡಬ್ಲ್ಯ್.ಯು

★

ಪಾನ್ ಮಸಾಲಾ ಉದ್ಯಮಿಯ ಯೋಗ!

“ದೇಶದ ವಿದ್ಯುತ್ ಉತ್ಪಾದನಾ ಸಾಧನಗಳ ಅಗತ್ಯದಲ್ಲಿ ಶೇ 70 ರಷ್ಟನ್ನು ಬಿ.ಹೆಚ್.ಇ.ಎಲ್. ಪೂರೈಸುತ್ತಿದೆ. ಆದರೆ ಸರ್ಕಾರ ಈ ಉದ್ದಿಮೆಯ ಖಾಸಗೀಕರಣಕ್ಕೆ ಪ್ರಯತ್ನಿಸುತ್ತಿದೆ. ಬಿ.ಹೆಚ್.ಇ.ಎಲ್. ನಿಂದ ಶೇ.32 ರಷ್ಟು ಬಂಡವಾಳವನ್ನು ಈಗಾಗಲೇ ಸರ್ಕಾರ ವಾಪಸ್ ತೆಗೆದಿದೆ. ಇದರಿಂದಾಗಿ ಈಗಾಗಲೇ ಪಾನ್ ಮಸಾಲಾ ಕಂಪನಿಯ ಉದ್ಯಮಿಯೊಬ್ಬರು ಬಿ.ಹೆಚ್.ಇ.ಎಲ್.ಗೆ ನಿರ್ದೇಶಕರುಗಳ ಲ್ಲೊಬ್ಬರಾಗಿ ಬಂದಿದ್ದಾರೆ. ಸರ್ಕಾರ ಮತ್ತೆ ಶೇ.10 ರಷ್ಟು ಬಂಡವಾಳ ವಾಪಸ್ ತೆಗೆಯುವ ಆತುರದಲ್ಲಿದೆ’.

ವಿನಾಯಕಂ, ಪ್ರಧಾನ ಕಾರ್ಯದರ್ಶಿಗಳು, ಬಿ.ಹೆಚ್.ಇ.ಎಲ್. ಕಾರ್ಮಿಕರ ಸಂಘ

★

ಐಟಿಐಯನ್ನು ಕೊಲ್ಲಬೇಡಿ

ಐಟಿಐ ಕಾರ್ಖಾನೆಯಲ್ಲಿ 1984-85 ರಲ್ಲಿ 20,000 ಜನ ಕಾರ್ಮಿಕರು ಬೆಂಗಳೂರು ಘಟಕದಲ್ಲೇ ಇದ್ದರು. ಈಗದು 3000 ಸಂಖ್ಯೆಗೆ ಇಳಿದಿದೆ. ಐಟಿಐನಲ್ಲಿ ಉತ್ಪಾದನೆಗೆ ಸರ್ಕಾರ ಯಾವುದೇ ಆದೇಶ ನೀಡುತ್ತಿಲ್ಲ. ನಮ್ಮ ಕೆಲಸ ಈಗೇನಿದ್ದರೂ ಝಡ್.ಇ. ಅಲ್ಕಾಟೆಲ್, ಎರಿಕಸನ್ ಹೀಗೆ ಯಾರ್‍ಯಾರೋ ಮಾಡಿದ ಯಂತ್ರೋಪಕರಣ ತೆಗೆದುಕೊಂಡು ಜೋಡಿಸುವುದಷ್ಟೇ ಆಗಿದೆ. 1995 ರಿಂದ ಜಾಗತೀಕರಣ ತೀವ್ರಗೊಂಡ ಮೇಲೆ ನಮ್ಮ ಕಾರ್ಖಾನೆಗೆ ಹೊಡೆತ ಬಿತ್ತು. ಸರ್ಕಾರ ನೂತನ ತಂತ್ರಜ್ಞಾನ ಬೆಳವಣಿಗೆಗೆ ಹಣ ತೊಡಗಿಸಲಿಲ್ಲ.

ಈಗ ನಮಗೆ ಸಂಬಳ ಸರಿಯಾಗಿ ಕೊಡುತ್ತಿಲ್ಲ. ತಿಂಗಳುಗಟ್ಟಲೆ ತಡವಾಗುತ್ತದೆ. ಸರ್ಕಾರ ಈಗ ಕಾರ್ಖಾನೆಯ ಹೆಚ್ಚುವರಿ ಭೂಮಿಯನ್ನು ಮಾರಲು ಹೊರಟಿದೆ. ಕೆ.ಆರ್.ಪುರಂ ಸಮೀಪದ 52 ಎಕರೆ ಭೂಮಿ ಹಾಗೂ ಹೊಸೂರು ರಸ್ತೆಯ ಇ.ಸಿ. ಘಟಕದ 30 ಎಕರೆ ಭೂಮಿ ಮಾರಲಾಗುತ್ತಿದೆ. ಇದನ್ನು ನಾವು ವಿರೋಧಿಸುತ್ತೇವೆ. ಸಾರ್ವಜನಿಕ ಉದ್ದಿಮೆಗಳನ್ನು ಉಳಿಸಿಕೊಳ್ಳಬೇಕೆಂದು ಈ ಹೋರಾಟ ನಡೆಯುತ್ತಿದೆ.

- ಕೆ.ವಿ.ರಾಮ
ಪ್ರಧಾನ ಕಾರ್ಯದರ್ಶಿ, ಐಟಿಐ ಎಂಪ್ಲಾಯಿಸ್ ಯೂನಿಯನ್

★

ಏಕಪಕ್ಷೀಯ ವರ್ತನೆ


ಬಿಇಎಂಎಲ್ ಕಾರ್ಖಾನೆ ಮೇಲೆ ಇತರ ಸಾರ್ವಜನಿಕ ಉದ್ದಿಮೆಗಳ ಮೇಲೆ ನಡೆಯುತ್ತಿರುವಂತಹ ದಾಳಿ ಈ ಸದ್ಯದಲ್ಲಿ ಇಲ್ಲ. ಆದರೆ ಬಿ.ಇ.ಎಂ.ಎಲ್ ಆಡಳಿತ ಮಂಡಳಿಯು ಕಾರ್ಮಿಕರು ಸಂಘಟಿತ ರಾಗಲು ಬಿಡುತ್ತಿಲ್ಲ. ಕಾರ್ಮಿಕ ಸಂಘ ವಿರೋಧಿ ಧೋರಣೆ ಅನುಸರಿಸುತ್ತಾ ಏಕಪಕ್ಷೀಯವಾಗಿ ವರ್ತಿಸುತ್ತಿದೆ.

- ಬಸಪ್ಪ,
ಅಧ್ಯಕ್ಷರು,
ಬಿ.ಇ.ಎಂ.ಎಲ್ ಎಂಪ್ಲಾಯಿಸ್ ಯೂನಿಯನ್

ಜನಶಕ್ತಿ ಕನ್ನಡ ವಾರಪತ್ರಿಕೆ

ಜುಲೈ15, 2007





ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ

ಅವಳೆದೆಯ ಮೌನದಲ್ಲಿ ಸುಪ್ತ ಲಾವಾರಸ ಕುದಿಯುತ್ತಿತ್ತು. ಅದೊಂದು ದಿನ ಸೂರ್ಯ ಬರುವ ಮುನ್ನ ದೂರದ ಸಂಬಂಧಿಯ ವಿಳಾಸ ಹಿಡಿದು ದ್ರೌಪದಿ ಮನೆ ಬಿಟ್ಟಳು.

ಗೆಲುವೆನೆಂಬ ಭಾಷೆ

"ಆ ಧುರಪತಿ (ದ್ರೌಪದಿ)ಗಿ ಒಂದೇ ಸಾರಿ ಸೀರಿ ಬಿಚ್ಚಿ ಅಪಮಾನ ಮಾಡಿರ್ಬೇಕು. ಆದರ ನನಗ ಜಿಂದಗಿ ಪೂರ್ತಿ ತಲಿ ಎತ್ತ ಬದುಕಲಾರ್ದಂಗ ಮಾಡ್ಯಾರ. ಅವ್ರ ಹೆಣಾ ಎತ್ಲೀ. ಹಾಂಗಂತ ನಾ ಮುಣಗಾ ಹೆಣ ಮಗಳಲ್ಲ. ಜಿದ್ದಿನ ಮ್ಯಾಲ ಸಂಸಾರ ಮಾಡೀನಿ. ಆ ಧುರಪತಿ ಪಣತೊಟ್ಟು ರಾಜ್ಯಾ ಗೆದ್ದಂಗ. ದುರ್ಯೋಧನನ ತೊಡಿ ಮುರ್ದಂಗ. ನಾನೂ ನಂಗ ನೋಡಿ ನಕ್ಕೋರ ಎದಿ ಮ್ಯಾಲ್ಕ ಒದ್ದಂಗ ಬಾಳ್ವಿ ನಡಸೀನಿ...' ಅಂತ ದ್ರೌಪದಿ ಹತ್ತಾರು ವರ್ಷದ ಅಳು, ಸಿಟ್ಟು, ಆಕ್ರೋಶ ಎಲ್ಲ ಎಲ್ಲವನ್ನೂ ಏಕಕಾಲಕ್ಕೆ ಅನಾವರಣಗೊಳಿಸತ್ತ ಅವಡುಗಚ್ಚಿ ಮಾತಾಡುತ್ತಿದ್ದಳು. ತನ್ನ ಬದುಕಿನ ಎಳೆಗಳನ್ನು ಬಿಚ್ಚಿ ಹರವುವ ಹೊತ್ತಲ್ಲಿ, ಹೊರಗೆ ರಸ್ತೆಯ ತುಂಬ ಸಣ್ಣ ಮಳೆ ಹನಿಗಳು. ಮೆತ್ತಗೆ ಟಪಗುಟ್ಟುತ್ತಿದ್ದವು. ಕರುಳಿರಿಯುವ ಈ ಹೆಣ್ಣ ಕತೆಗೆ ಕಿವಿಯಾಗುವ ಮನಸಾಗಿರಬೇಕು ಮಳೆಗೂ ಮೋಡಕ್ಕೂ.

... ದ್ರೌಪದಿ ಎರಡು ವರ್ಷವೂ ಭರ್ತಿ ತಾಯ ಎದೆ ಹಾಲು ಕುಡಿಯಲಿಲ್ಲ. ಹೆಸರಿಲ್ಲದ ರೋಗ ಹೆತ್ತವ್ವನನ್ನು ಕರಕೊಂಡು ಹೋದ ಮೇಲೆ ದ್ರೌಪದಿಯ ಅಪ್ಪ ಮಹಾರಾಷ್ಟ್ರದ ಬೆಳ್ಳನೆ ತೊಗಲಿನ ವಯ್ಯಾರದ ಹೆಣ್ಣೊಬ್ಬಳನ್ನು ಎರಡನೆಯ ಹೆಂಡತಿಯಾಗಿ ತಂದನು. ಆನಂತರ ದ್ರೌಪದಿಯ ಅಕ್ಕ ಮತ್ತು ದ್ರೌಪದಿ ಅಕ್ಷರಶಃ ಬೀದಿಕೂಸುಗಳಾದರು. ಮನೆಯಲ್ಲಿ ಹೆಂಡಿ-ಕಸ-ಮುಸುರೆ ಎಲ್ಲ ಕೆಲಸ ಮಾಡಿದ ಮೇಲೂ ಹೊಟ್ಟೆ ತುಂಬಾ ಅನ್ನವಿಲ್ಲದಿದ್ದರೂ ಮೈ ಕೈ ತುಂಬಿಕೊಂಡ ಪರಿಗೆ ವಿಚಿತ್ರ ಚೆಲುವು ದ್ರೌಪದಿಯ ಬೆನ್ನಟ್ಟಿ ಕಾಡಿತು. ಯಾರೋ ಹಾದಿ ಹೋಕ ಕುಂಟನನ್ನು ಕರೆದು ಮಗಳನ್ನು ಧಾರೆ ಎರೆಯಲು ಸ್ವತಃ ಅಪ್ಪನೇ ಸಿದ್ದನಾದಾಗ ಯಾರಿಗೆ ಹೇಳುವುದು? ಅರಿವು ಬಂದಾಗಿಂದ ಅಪ್ಪನಿಂದ ಬಯ್ಗಳ. ಹೊಡೆತಗಳನ್ನೇ ಅನುಭವಿಸಿದ್ದ ದ್ರೌಪದಿಗೆ ಕುಂಟನೊಂದಿಗೆ ಮದುವೆ ಮಾಡಿಸುವ ತಂದೆಯ ಬಗ್ಗೆ ರೋಷವುಕ್ಕಿ ಹೇಸಿಗೆಯೆನಿಸಿತು. ಅವಳೆದೆಯ ಮೌನದಲ್ಲಿ ಸುಪ್ತ ಲಾವಾರಸ ಕುದಿಯುತ್ತಿತ್ತು. ಅದೊಂದು ದಿನ ಸೂರ್ಯ ಬರುವ ಮುನ್ನ ದೂರದ ಸಂಬಂಧಿಯ ವಿಳಾಸ ಹಿಡಿದು ದ್ರೌಪದಿ ಮನೆ ಬಿಟ್ಟಳು. ಕೆಂಪು ಬಸ್ಸು ಹತ್ತಿ ಕಿಟಕಿಯಲ್ಲಿ ಮುಖವಿಟ್ಟು ಹಿಂದೆ ಸರಿಯುವ ತನ್ನ ತವರು ಹಳ್ಳಿಯ ಹಾದಿ ದಿಟ್ಟಿಸುತ ಕಣ್ಣೀರಧಾರೆ ಹರಿಸಿದಳು. ಹೆಜ್ಜೆ ಹೆಜ್ಜೆಗೂ ತಾಯ ಬಯ್ಗಳ, ಅಪ್ಪನ ಹೊಡೆತ, ಮೈಮುರಿ ಕೆಲಸ. ಅರೆ ಹೊಟ್ಟೆ ಊಟ. ಹರಕು ಬಟ್ಟೆ, ಬೀದಿ ಹುಡುಗರ ನಾಯಿ-ನೋಟ. ಹದಿನೇಳು ವರ್ಷದ ಅನುಭವದ ಗಂಟಿದು.

ದ್ರೌಪದಿ ಹೊಸ ಬದುಕು ಅರಸಿ ಹೊರಟಳು. ಒಂದಿಷ್ಟು ನಗು, ಹಿಡಿಯಷ್ಟು ನೆಮ್ಮದಿ, ನನ್ನವಳು ಎಂದು ಎದೆಗಪ್ಪಿಗೆಗೊಳ್ಳುವ ಪುಟ್ಟ ಅನುರಾಗ ಎಲ್ಲಕ್ಕೂ ಮಿಗಿಲಾಗಿ ಮುಗಿಲ ಚುಕ್ಕಿಯಷ್ಟೇ 'ಪ್ರೀತಿ' ಗಾಗಿ ಹಂಬಲಿಸಿ ಹುಂಬ ಧೈರ್ಯದಿಂದ ದ್ರೌಪದಿ ಹೊರಟೇ ಬಿಟ್ಟಳು.

ತಾಯಿ ತವರಿನ ನೆಂಟರ ಮನೆಯದು. ಮನೆಗೆಲಸವೆಲ್ಲ ಚಕಚಕನೇ ಮಾಡಿ ಮುಗಿಸುವ ಪರಿಗೆ ಮನೆ ಮಂದಿಯೇನೋ ಖುಷಿ. ಅಲ್ಲೂ ವಕ್ಕರಿಸಿದ ಶನಿಯಂಥ ಹುಡುಗನೊಬ್ಬ ಮದುವೆ ಮಾಡಿಕೊಳ್ಳುವುದಾಗಿ ಕಾಡತೊಡಗಿದ. ಈಗಾಗಲೇ ಒಂದು ಮದುವೆಯಾಗಿದ್ದ ಅವನು 'ಆಳುವನಿಗೆ ಅರವತ್ತ ಹೆಣ್ತಿಯರು, ನೀನಿನ್ನ ಎಡರನೆಯಾಕಿ, ಒಲ್ಲೆಂದರ ಕೈಕಾಲ ಕಟ್ಟಿ ಎಳ್ಕೊಂಡು ಹೋಗ್ತೀನಿ...ನಂಗಂದ್ರ ಏನಂತ್ ತಿಳದಿ?....' ಅಂತ ಧಮಕಿ ಹಾಕಿದ. ಖರನೇ ಅಂವ 'ಗಲ್ಲಿ ಗೂಂಡಾ' ಆಗಿದ್ದ. ಬೆನ್ನಿಗೆ ಯಾರ ಬಿಸ್ತಿಲ್ಲದ ದ್ರೌಪದಿ ಅನಿವಾರ್ಯವಾಗಿ 'ತುಳಜಾಭವಾನಿ' ಗುಡಿಯಲ್ಲಿ ತಾಳಿ ಕಟ್ಟಿಸಿಕೊಂಡಳು. 'ಓಡಿ ಹೋಗಿ ಮದವ್ಯಾದಾಕಿ ನಮ್ಮ ಪಾಲಿಗೆ ಸತ್ತಳು' ಅಂತ ತವರ ಮನೆಯಲ್ಲಿ 'ಸಪ್ಪನ ಬಾನಾ' ಉಂಡರು.

ಬದುಕು ಹುಡುಕಿ ಹೊರಟವಳಕಾಲಿಗೆ ಕುಡುಕ ಗಂಡನೆಂಬ ಆ ವಾರ ಬಳ್ಳಿ ತೊಡರಿತು. ಒಂದೇ ಒಂದು ವರ್ಷ ಬಚ್ಚಲು ಮನೆಯಂಥ ಪುಟ್ಟ, ಕೋಣೆಯಲ್ಲಿ ನೆಮ್ಮದಿಯಿಂದ ತೊಗಲ ಸುಖದ ದಿನ ಕಳೆದಳು ದ್ರೌಪದಿ. ಆನಂತರ ಸುರುವಾದವು ಮತ್ತವೆ ಹಳೆ ದಿನಗಳು. ಹಗಲೆಲ್ಲ ಕುಡಿದು ಬರುವ ಗಂಡ ಮೈ ಮೂಳೆ ಮುರಿವಂತೆ ಹೊಡೆದು ರಾತ್ರಿಯಾದ ಮೇಲೆ ಜೀವ ಹಿಂಡಿ ಹೈರಾಣಾಗಿಸುತ್ತಿದ್ದ ಯಾರಿಗೆ ಹೇಳುವುದು? ಕೇಳುವವರಾರು? ಗಂಡ ಮಾಡುವ ಗೂಂಡಾಗಿರಿಗೆ ಪೋಲೀಸರೂ ಆಗೀಗ ಇವನಿಂದ ಪಾಕೀಟ ಪಡೆದು ತೆಪ್ಪಗಿರುತ್ತಿದ್ದರು. ಅದೊಮ್ಮೆ ಬೊಂಬಾಯಿಗೆ ಹೋಗಿದ್ದ. ಹೆಂಡತಿ ಬಸುರಿ ಎಂದು ತಿಳಿದು ಅಗ್ಗನ ಗಾಡಿ (ರೈಲು) ಹತ್ತಿ ವಾಪಸ್ ಬಂದನು. ಗಂಡನ ಅರಳಿದ ಮುಖ ಕಾಣುವ ತವಕದಲ್ಲಿದ್ದ ದ್ರೌಪದಿಗೆ ಸಿಕ್ಕಿದ್ದು ಅವನ ಚಪ್ಪಲಿಗಾಲಿನ ಒದೆತಗಳು. 'ನಿನ್ನವ್ವ ಯಾಂವ್ನ ....ಕೂಸಿದು'? ಬೈಯ್ಯುತ ಹೊಡೆದ ಭೀಕರತೆಗೆ ಇವಳ ಭುಜ ಉಳುಕಿತು. ತಲೆ ಒಡೆದು ರಕ್ತ ಹರಿಯಿತು. ಬಾಯ ಹಲ್ಲುಗಳು ಸಡಿಲಾದವು. ಆದರೆ ಒಡಲೊಳಗಿನ ಕೂಸು ಗರ್ಭ ಕೋಟೆಯೊಳಗೆ ಭದ್ರವಾಗಿತ್ತು! ಹಸಿ ಬಾಣಂತಿಯನ್ನು ಅಂಗಳದಲ್ಲಿ ಕೆಡವಿ ಧೋಗರೆವ ಮಳೆಯಲ್ಲಿ ಉರುಳಾಡಿಸಿ ಹೊಡೆದನು. ತಾಯ ಮೊಲೆ ಉಣ್ಣುವ ಕೂಸನ್ನು ಕಸಿದು ಸೀಮೆ ಎಣ್ಣೆಯಲ್ಲಿ ಅದ್ದಿ ಬೆಂಕಿ ಹಚ್ಚಲು ನಿಂತನು. ದ್ರೌಪದಿ ಜೀವದ ಹಂಗು ತೊರೆದು ಕರುಳ ಕುಡಿಯನ್ನು ಕಿತ್ತಿಕೊಂಡು ಮತ್ತೊಮ್ಮೆ ರಸ್ತೆಗೆ ಓಡಿದಳು. ಹೀಗೆ ಹೆತ್ತವರಿದ್ದೂ, ಗಂಡನಿದ್ದೂ ದ್ರೌಪದಿ ಮತ್ತೆ ಬೀದಿಯಲ್ಲಿ ನಿಲ್ಲಬೇಕಾಯ್ತು.

'ಹುಟ್ಟಿದಾಗಿಂದ ಅಪ್ಪ ಹೊಡೆದ. ಹಿಂಸಾ ಕೊಟ್ಟ. ಮದಿ ಆರ ಮ್ಯಾಲ ಗಂಡ ಅಪ್ಪನ ಕಿನಾ ಹೆಚ್ಚ ಹಿಂಸಾ ಕೊಟ್ಟ. ಒಮ್ಮೊಮ್ಮೆ ಸಾಯಬೇಕು ಅನಸ್ತಿತ್ತು. ಆದ್ರ ಸತ್ತೇನು ಸಾಧಸಾದದಾ? ಇದ್ದೊಂದ ಕೂಸಿಗೆ ಜೀವನ ಕುಡಾರು ದೊಡ್ಡದದಾ. ನನ್ನ ದಿನಗೋಳು ಮಗಳಿಗೆ ಬರಬಾರದು ಅಂತ ನಿರ್ಧಾರ ಮಾಡಡೆ...' ದ್ರೌಪದಿ ಬಿಕ್ಕುತ್ತಿದ್ದಳು. ಮಡಿವಾಳ ವೃತ್ತಿಯ ದ್ರೌಪದಿ ಕೈ ಬಟ್ಟೆಗಳಿಗೆ ಇಸ್ತ್ರಿ ತಿಕ್ಕಿ ತಿಕ್ಕಿ ನೋವಾಗಿರಬೇಕು ಅಂದುಕೊಂಡಿದ್ದೆ. ಸ್ವಲ್ಪ ಹಿಂದೆ ಚಲಿಸಲು ಒಲ್ಲದ ಕೈಯಿಂದಲೇ ಅದ್ಹೇಗೆ ಇಸ್ತ್ರಿ ತಿಕ್ಕುವಿ? ಎಂದು ಕೇಳಿದ ಪ್ರಶ್ನೆಗೆ ದ್ರೌಪದಿಯ ತುಟಿಯ ಮೇಲೆ ಒಂದು ಸಣ್ಣ ನಗು ಸರಿಯಿತು. ಹಿರ್ಸಿನಿಂದ (ಜಿದ್ದಿನಿಂದ) ಕೆಲ್ಸಾ ಮಾಡ್ತೀನ್ರೀ... ಗಂಡ ಹೊಡೆದು ರಸ್ತೆಗೆ ಹಾಕಿದ ದಿನ ಇಸ್ತ್ರೀ ಪೆಟ್ಟಿಗೆ ತಂದೆ. ಸ್ವತಃ ದುಡಿದು ಬದುಕ ನಡಸೀನಿ. ತವರಮನ್ಯಾಗ ಗಂಣಸಮಕ್ಕಳಿಲ್ಲ. ಅಕ್ಕಗ ಮದವಿ ಮಾಡ್ಯಾರ. ನಾಲ್ಕೆಕರೆ ನೀರಾವರಿ ಭೂಮಿ ಅದಾ. ನನ್ನ ಪಾಲಾ ನನಗ ಕುಡ್ರಿ ಅಂತ ಕೇಳೀನಿ. ಗಂಡನ ಮನ್ಯಾಗ ಇದ್ದ ಆಸ್ತಿ ಅಂವ ಸತ್ತ ಮ್ಯಾಲ ಮಣ್ಣಿಗೆ ಖರ್ಚು ಮಾಡಿದ ನೆವದಾಗ ನಯಾ ಪೈಸಾ ಕುಡಲಿಲ್ಲ. ಇರಸ್ತನಕಾ ನನ ಜೀವ ತಿಂದು ಜೀರಗಿ ಮಾಡಿದ್ದ. ನನ ಕತಿ ಹೇಳ್ಲಾಕ ಕುಂತ್ರ ಯಾಡ್ ರಾತ್ರಿ ಯಾಡ್ ಹಗಲ ಸಾಕಾಗಲ್ಲ. ಇದ್ದೊಬ್ಬ ಮಗಳಿಗೆ ಚಲೋ ಓದ್ಸಿ ತನ್ನ ಕಾಲ ಮ್ಯಾಲ ತಾ ನಿಲ್ಲಂಗ ಮಾಡ್ತೀನಿ....' ದ್ರೌಪದಿ ಈ ಮಾತು ಹೇಳುವಾಗ ಹೊರಗೆ ಮಳೆ ಹನಿಗಳು ನಿಂತು ಹೋಗಿ ಮೋಡಗಳೆಲ್ಲ ಕರಗಿ ನಿಚ್ಚಳ ಬೆಳಕು ಚೆಲ್ಲಿತ್ತು.

ಪ್ರತಿದಿನ ಮುಂಜಾನೆ ಮತ್ತು ಸಾಯಂಕಾಲ ನಮ್ಮ ಕಾಲೋನಿ ತುಂಬ ಓಡಾಡಿ ಇಸ್ತ್ರಿ ಬಟ್ಟೆಗಳನ್ನು ಒಯ್ದು ಇಸ್ತ್ರಿ ತೀಡಿ, ಹೂ ಮಾಡಿ, ಮನೆ ಬಾಗಿಲಿಗೆ ಮುಟ್ಟಿಸುವ ದ್ರೌಪದಿಯ ಬದುಕೊಂದು ಸಾಹಸಗಾಥೆಯೇ ಸರಿ. ಜಾಗತೀಕರಣ ಹುಟ್ಟು ಹಾಕುತ್ತಿರುವ ನಿರುದ್ಯೋಗಕ್ಕೊಂದು ಸವಾಲೂ ಹೌದು. ಸಂಕಷ್ಟಕ್ಕೆ ಪರಿಹಾರ ಆತ್ಮಹತ್ಯೆಯೊಂದೇ ಎಂಬ ಹೇಡಿತನವನ್ನು ಹಿಮ್ಮೆಟ್ಟಿಸಿ ಬದುಕು ನಡೆಸುತ್ತಿರುವ ಅನಕ್ಷರಸ್ಥೆ ದ್ರೌಪದಿ ಜೀವನ ಧೀರತೆಯಲ್ಲಿ ಮಾಸ್ಟರ್ ಡಿಗ್ರಿ ಪಡೆದಂತೆಯೇ.

ಕಷ್ಟದಲ್ಲಿರುವ ನೆಂಟರೊಬ್ಬರಿಗೆ ಕರುಳು ಚುರ್ರೆಂದು ಕೊಡಿಸಿದ ಸಾಲ ಮುಣುಗಿ ಹೋಯ್ತು. ಸಾಲಗಾರರ ಬಡ್ಡಿ ತೀರಿಸುತ ಪರರ ಸಾಲಕ್ಕೆ ಹೆಗಲು ಕೊಟ್ಟಿಯೂ, "ಎಂದಾನ ಒಂದಿನ ಮುಟ್ಟಿಸ್ತೀನ್ರೀ..." ಅನ್ನುವ ದ್ರೌಪದಿಯ ಛಲಕ್ಕೆ ಬೆರಗಾಗಲೇಬೇಕು.

"ಈಗಿನ ಹಂಗ ಶ್ಯಾಣೆ ಇದ್ರ, ಕುಡದು ಹೊಡ್ಯಾ ಗಂಡರ, ಅಪ್ಪಗ ಕೈಯಾಗಬೇಡಿ ತೊಡ್ಸಿ ಜೇಲಿಗೆ ಕಳಸ್ತಿದ್ದೆ...' ಅನ್ನುವ ದ್ರೌಪದಿಗೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಬಗ್ಗೆ ಅರಿವಿದೆ. ಕಷ್ಟದಲ್ಲಿರುವ ಹೆಂಗಸರಿಗೆ ಸಂಘದತ್ತ ಕರೆ ತರುವ ಮೂಲಕ ಸಂತೃಪ್ತಿ ಅನುಭವಿಸುತ್ತಾಳೆ. ಇಪ್ಪತ್ತು ವರ್ಷದ ಮಗಳನ್ನು ಕಂಪ್ಯೂಟರ್ ಕಲಿಯಲು ಕಳಿಸುತ್ತಿದ್ದಾಳೆ. 'ಜಲ್ದಿ ಮದಿ ಮಾಡಂಗಿಲ್ಲರೀ...' ಅನ್ನುವ ಅವಳ ಜೀವನ ಪಾಠ ಸರಿಯೇ. ಈವರೆಗೆ ಸಣ್ಣ ಕೋಣೆಯಲ್ಲಿ ಇಸ್ತ್ರಿ ತಿಕ್ಕುತ್ತಿದ್ದಳು. ಈಗ ರಸ್ತೆ ಬದಿಗೆ ಇಸ್ತ್ರಿ ಡಬ್ಬಾ ಇದೆ. ಅದು ಅವಳ ಹೆಮ್ಮೆಯ ಸಾಧನೆ. ಎಲ್ಲಿಂದಲೋ ವಚನದ ಸಾಲು ಹೊಳೆಯಿತು.

ಕೊಲುವೆನೆಂಬ ಭಾಷೆ ದೇವನದಾದರೆ
ಗೆಲುವೆನೆಂಬ ಭಾಷೆ ಭಕ್ತನದು.

ಬ.ಕ.ಗಳ ಬಾಯಿಗೆ ಭಾರತ ಕಾಮಧೇನು

ಪುಟ 7 ರಿಂದ

ಹೇಳೋನಿಗೆ ಆರು ಹಣ ಎಂಬ ಗಾದೆ ಮಾತೊಂದಿದೆ. ಆದರೆ ಇಲ್ಲಿಯ ಪರಿಸ್ಥಿತಿ ಗಾದೆ ಮಾತನ್ನು ಮೀರಿದ್ದಾಗಿದೆ. ಏಕೆಂದರೆ ಇಲ್ಲಿ ಒಟ್ಟು ಕಾರ್ಮಿಕ ಪಡೆಯುವ ವೇತನಕ್ಕಿಂತ 8 ಪಟ್ಟು 10 ಪಟ್ಟು ಹೆಚ್ಚು ವೇತನ ಅಧಿಕಾರಿ ವರ್ಗಕ್ಕೆ ದೊರೆಯುತ್ತದೆ!! ಬಿ.ಹೆಚ್.ಇ.ಎಲ್.ನಲ್ಲಿ ಒಬ್ಬ ಸಾಮಾನ್ಯ ಕಾರ್ಮಿಕನ ವೇತನ 4200 ರೂ. ಇದ್ದರೆ, ಕಾರ್ಯ ನಿರ್ವಾಹಕ ನಿರ್ದೇಶಕರ (ಇ.ಡಿ) 27000 ರೂ.ಇದೆ. ಪ್ರತಿಭಾ ಪಲಾಯನ - ಅಂದರೆ ಅಧಿಕಾರಿಗಳು ದೇಶ ಬಿಟ್ಟು ಬೇರೆ ದೇಶಗಳ ಕಂಪನಿಗಳಿಗೆ ಹೋಗಿ ಬಿಡುತ್ತಾರೆಂದು ವಾದ ಹೂಡಿ ಅವರಿಗೆ ಈ ಪರಿಯ ಸಂಬಳ ನೀಡಲಾಗುತ್ತಿದೆ.

ಈ ಉದ್ದಿಮೆಗಳಲ್ಲಿ ಖಾಲಿ ಬಿದ್ದಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುತ್ತಿಲ್ಲ. ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತಿದೆ. ಹೊರ ಗುತ್ತಿಗೆ ನೀಡುವ ಪ್ರವೃತ್ತಿಯೂ ಹೆಚ್ಚುತ್ತಿದೆ. ಬೆಂಗಳೂರಿನ ಹೆಚ್.ಎ.ಎಲ್. ಬಿ.ಇ.ಎಲ್. ಬಿ.ಇ.ಎಂ.ಎಲ್. ಮುಂತಾದ ಕಾರ್ಖಾನೆಗಳಲ್ಲಿ ಖಾಯಂ ಕಾರ್ಮಿಕರು ಮತ್ತು ಗುತ್ತಿಗೆ ನೌಕರರ ಅನುಪಾತ 4:6 ತಲುಪಿದೆ. ಅಂದರೆ 40 ಜನ ಖಾಯಂ ಆದರೆ ನೂರು ಜನ ಗುತ್ತಿಗೆ ಕಾರ್ಮಿಕರು.

ಮನೆ ಬಾಡಿಗೆ ಭತ್ಯೆ - ಹೆಚ್.ಆರ್.ಎ

ಬೆಂಗಳೂರು ಹೊರ ನೋಟಕ್ಕೆ ಇಂದ್ರನಗರಿಯಂತೆ ಕಂಗೊಳಿಸುತ್ತಾ ಬೆಳೆಯುತ್ತಿರಬೇಕಾದರೆ ಇಲ್ಲಿನ ಜೀವನ ವೆಚ್ಚವೂ ವಿಪರೀತ ಏರುತ್ತಿದೆ. ಮನೆ ಬಾಡಿಗೆಯೂ ಅಷ್ಟೇ ದುಬಾರಿಯಾಗುತ್ತಿದೆ.


ಇದೀಗ ಕಾರ್ಮಿಕರಿಗೆ ಮನೆ ಬಾಡಿಗೆ ಭತ್ಯೆ (ಹೆಚ್.ಆರ್.ಎ) ಸಿಗುತ್ತಿರುವುದು ವೇತನದ ಶೇ.25 ರಷ್ಟು ಮಾತ್ರ. ದುಬಾರಿ ಬೆಂಗಳೂರಿನ ಮನೆ ಬಾಡಿಗೆಯನ್ನು ಇದರಿಂದ ಭರಿಸಲಾಗುತ್ತಿಲ್ಲ. ಇದು ಹೆಚ್ಚಾಗಬೇಕಿದೆ. ಬೆಂಗಳೂರನ್ನೇ ಕೇಂದ್ರ ಸರ್ಕಾರ ಎ1 ನಗರ ಎಂದು ಪರಿಗಣಿಸಿದರೆ ಮನೆ ಬಾಡಿಗೆ ವೇತನ ಶೇ 30 ರಷ್ಟು ಸಿಗುತ್ತದೆ. ಬೆಂಗಳೂರನ್ನು ಎ 1 ನಗರ ಎಂದು ಪರಿಗಣಿಸಬೇಕು ಎಂದು ಕಾರ್ಮಿಕರು ಬೇಡಿಕೆ ಮುಂದಿಟ್ಟಿದ್ದಾರೆ.

ತೈಲಉದ್ದಿಮೆಯಲ್ಲಿ ಈಗಾಗಲೇ ಬೆಂಗಳೂರನ್ನು ಎ1 ನಗರ ಎಂದು ಪರಿಗಣಿಸಿ ಅದರಂತೆ ಹೆಚ್.ಆರ್.ಎ ನೀಡಲಾಗುತ್ತಿದೆ. ವಾಸ್ತವವಾಗಿ ಯಾವುದೇ ನಗರದ ಜನಸಂಖ್ಯೆ 50 ಲಕ್ಷಕ್ಕಿಂತ ಹೆಚ್ಚಾಗಿದ್ದರೆ ಈ ಕುರಿತ ಮಾನದಂಡದಂತೆ ಅದು ಎ1 ನಗರ. ಈಗ ಬೆಂಗಳೂರಿನ ಜನಸಂಖ್ಯೆ 68 ಲಕ್ಷ ದಾಟಿದೆ ಆದರೂ ಎ1 ನಗರ ಆಗಿಲ್ಲ. ಇದೀಗ ಸರ್ಕಾರ ಈ ಮಿತಿಯನ್ನು 1 ಕೋಟಿಗೆ ಏರಿಸಿದೆ. ಇದು ಸರ್ಕಾರದ ಅನುಕೂಲ ಸಿಂಧೂ ನೀತಿಗೆ ಅತ್ಯುತ್ತಮ ಉದಾಹರಣೆ ಅಲ್ಲವೇ?

ಇದಲ್ಲದೆ ತುಟ್ಟಿಭತ್ಯೆಯ ಶೇ. 50 ರಷ್ಟನ್ನು ಮೂಲವೇತನಕ್ಕೆ ಸೇರಿಸಬೇಕೆಂಬ ಕಾರ್ಮಿಕರ ಹಳೇ ಬೇಡಿಕೆಯನ್ನು ನಿರ್ಲಕ್ಷಿಸಲಾಗಿದೆ. ಇವೆಲ್ಲವುಗಳ ವಿರುದ್ಧ ರಾಜ್ಯದ ಸಾರ್ವಜನಿಕ ವಲಯದ ಕಾರ್ಮಿಕರು ಐಕ್ಯ ಹೋರಾಟಕ್ಕೆ ಮುಂದಾಗಿದ್ದಾರೆ. ಜುಲೈ 10 ರಂದು ಬೆಂಗಳೂರಿನಲ್ಲಿ ಭಾರಿ ಬೃಹತ್ ಪ್ರತಿಭಟನಾ ರ್‍ಯಾಲಿ - ಪ್ರದರ್ಶನ ನಡೆಸಲು ಸಿದ್ಧತೆ ನಡೆದಿದೆ. ಈ ಪ್ರತಿಭಟನೆಯಲ್ಲಿ ಸಾರ್ವಜನಿಕ ಉದ್ದಿಮೆಗಳ ರಕ್ಷಣೆ ಹಾಗೂ ಕಾರ್ಮಿಕ ವರ್ಗದ ಹಿತ ರಕ್ಷಣೆಗಾಗಿ ನಿರಂತರ ದನಿಯೆತ್ತುತ್ತಿರುವ ಸಿಪಿಐ(ಎಂ) ಪಕ್ಷದ ಸಂಸದೀಯ ಪಕಷದ ಮುಖಂಡರಾದ ದೀಪಂಕರ್ ಮುಖರ್ಜಿಯವರು ಭಾಗವಹಿಸುತ್ತಿದ್ದಾರೆ.

ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯಾದ ಜೆಎಎಫ್ ಹೋರಾಟದ ನೇತೃತ್ವ ವಹಿಸಿದೆ. ಕೆಜಿಎಫ್, ಮೈಸೂರು ಮುಂತಾದ ಘಟಕಗಳ ಕಾರ್ಮಿಕರೂ ಪಾಲ್ಗೊಳ್ಳಲಿದ್ದಾರೆ.

ಮತ್ತೊಮ್ಮೆ ಎರ್ರಾಬಿರ್ರಿಯಾಗಿ ವಿದ್ಯಾರ್ಥಿ ಬಸ್‌ಪಾಸ್ ದರಗಳನ್ನು ಏರಿಸಲಾಗಿದೆ. ಡೀಸೆಲ್ ಬೆಲೆ ಇಳಿದಿದೆ, ಸಾರಿಗೆ ಸಂಸ್ಥೆಯ ಲಾಭ ಏರಿದೆ. ಆದರೂ ಯಾಕೆ ಈ ಏರಿಕೆ?



ಬಸ್‌ಪಾಸ್ ದರ ಏರಿಕೆ ಹೋರಾಟದ ಬಾವುಟ ಹಾರಿಕೆ

ರಾಜ್ಯದ ಬಿಜೆಪಿ-ಜೆಡಿ(ಎಸ್) ಸಮ್ಮಿಶ್ರ ಸರ್ಕಾರವು ಪ್ರಸಕ್ತ ವರ್ಷದಲ್ಲಿ ವಿದ್ಯಾರ್ಥಿಗಳ ರಿಯಾಯ್ತಿ(?) ಬಸ್ ಪಾಸ್ ದರವನ್ನು ಹೆಚ್ಚಿಸಿದೆ. ಇದರಿಂದ ರಾಜ್ಯದ ಸಾಮಾನ್ಯ ಮತ್ತು ಬಡವರ್ಗಗಳಿಂದ ಶಿಕ್ಷಣ ಪಡೆಯಬೇಕೆಂದು ಬರುವವರಿಗೆ ದೊಡ್ಡ ಆಘಾತವಾಗಿದೆ.

ಶಂಕ್ರ ಎಸ್.ಎಸ್.ಎಲ್.ಸಿ. ಪಾಸಾಗಿ ಮನೆಯಲ್ಲಿದ್ದ. ಯಾಕೋ ಶಂಕ್ರ ಕಾಲೇಜಿಗೋತಿಲ್ವ ಅಂದೆ ಅದಕ್ಕೆ ಅವ್ನು ಪಿ.ಯು.ಸಿ. ಕಾಲೇಜು ನಮ್ಮೂರಿಂದ 35 ಮೈಲಿ ಆಗುತ್ತೆ ಅಲ್ಲಿಗೆ ಹೋಗಬೇಕು ಅಂದ್ರೆ ಬಸ್ ಪಾಸ್ ಮಾಡಿಸಬೇಕು. ಈ ಕೆ.ಎಸ್.ಆರ್.ಟಿ.ಸಿ. ಯವರು ಅದರ ರೇಟ್‌ನೂ ಜಾಸ್ತಿ ಮಾಡೌರಂತೆ. ನಮ್ಮನೇಲಿ ಕಾಲೇಜಿಗೆ ಕಳ್ಸಕ್ಕೆ ದುಡ್ಡಿಲ್ಲ, ಇನ್ನು ಅಷ್ಟೊಂದು ದುಡ್ ಕಟ್ಟಿ ಬಸ್‌ಪಾಸ್ ಮಾಡಕಾಗುತ್ತಾ? ಅದಕ್ಕೆ ಕಾಲೇಜಿಗೆ ಸೇರ್‌ಲಿಲ್ಲ. ನಮ್ಮಪ್ಪ ಎರಡಕ್ಕೂ ದುಡ್ಡ ಕೊಡಕಾಗಕ್ಕಿಲ್ಲ. ಕಾಲೇಜಿಗ್ ಕೊಡ್ತೀನಿ, ಇಲ್ಲ ಬಸ್ ಪಾಸ್‌ಗೆ ಕೊಡ್ತೀನಿ ಅಂತನೆ. ನಾನ್ ಏನ್ ಮಾಡಲಿ. ಈ ಸರ್ಕಾರದಿಂದ ನಾವು ಓದ್‌ದಂಗಾಯ್ತು" ಎಂದ.

ಇದು ರಾಜ್ಯದ ಪ್ರತಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಗೋಳು. ಈ ಗೋಳು ಕೇಳುವವರ್‍ಯಾರು? ಗೋಳು ಕೇಳಬೇಕಾದ ಜನಪ್ರತಿನಿಧಿಗಳು ಕಿವಿಯಿದ್ದು ಕಿವುಡ ರಾಗಿದ್ದಾರೆ.



ಆನೇಕಲ್

ಇವರ ಜಾಣ ಕಿವುಡಿಗೆ ಹಣವಂತರ ಯಜಮಾನರ ಮಾತುಗಳು ಮಾತ್ರ ಕೇಳುತ್ತವೆ.

ಪೆಟ್ರೋಲ್-ಡೀಸೆಲ್ ದರ ಇಳಿದರೂ ಪಾಸ್ ದರ ಹೆಚ್ಚಳ

ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಅನ್ನು ವಿತರಿಸುವಾಗ ದರ ಹೆಚ್ಚಳವಾಗಿರುತ್ತದೆ. ಇದಕ್ಕೆ ಸರ್ಕಾರ ಕೊಡುವ ಕಾರಣ ಕೇಂದ್ರ ಸರ್ಕಾರ ಪೆಟ್ರೋಲ್-ಡೀಸೆಲ್ ಬೆಲೆ ಏರಿಸಿದೆ ಹೀಗಾಗಿ ನಾವು ಪ್ರಯಾಣದರ ಮತ್ತು ಪಾಸ್ ದರಗಳನ್ನು ಏರಿಸುತ್ತೇವೆಂದು. ಆದರೆ ಈ ಬಾರಿ ಅದು ವ್ಯತಿರಿಕ್ತವಾಗಿದೆ. ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ದರವನ್ನು ಇಳಿಸಿದ್ದರೂ ರಾಜ್ಯ ಸರ್ಕಾರ ಮಾತ್ರ ಬಸ್ ಪಾಸ್ ದರವನ್ನು ಹೆಚ್ಚಿಸುತ್ತಿದೆ ಇದ್ಯಾವನ್ಯಾಯ?

ರಿಯಾಯಿತಿ ಬಸ್ ಪಾಸ್‌ನ ಅರ್ಥವೇನು?

ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್ ಪಾಸ್ ನೀಡುತ್ತೇವೆಂದು ಅಧಿಕ ಹಣವನ್ನು ರಾಜ್ಯ ಸರ್ಕಾರ ವಿದ್ಯಾರ್ಥಿಗಳಿಂದ ಸಂಗ್ರಹಿಸುತ್ತಿದೆ. ಆದರೆ ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಪಿಯುಸಿ ವರೆಗೆ ಉಚಿತವಾಗಿ ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಿಸಲಾಗುತ್ತದೆ. ಹಣ ವಸೂಲಿ ಮಾಡಿ ನೀಡುವ ಪಾಸ್ ಅನ್ನು ದೊಡ್ಡ ಸಾಧನೆ ಎಂದು ಕರ್ನಾಟಕ ರಾಜ್ಯ ಸರ್ಕಾರ ಬೀಗುತ್ತಿದೆ.



ಚಿಂತಾಮಣಿ

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಸರಿಸುಮಾರು ಶೇ.60 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಸ್ ಪಾಸ್ ಅನ್ನೇ ನಂಬಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದಕ್ಕೆ ಮೂಲ ಕಾರಣ ಅವರು ವಾಸ ಮಾಡುವ ಸ್ಥಳಗಳಲ್ಲಿ ಎಲ್ಲ ಹಂತದ ಶಿಕ್ಷಣ ಸಿಗದಿರುವುದು ಮತ್ತು ತಾವುಗಳು ಸ್ವತಃ ವಾಹನಗಳನ್ನು ಇಟ್ಟು ಕೊಳ್ಳವಷ್ಟು ಶಕ್ತರಾಗದಿರುವುದು. ಇಂತಹ ಸಂದರ್ಭದಲ್ಲಿ ಸರ್ಕಾರ ಪಾಸ್‌ಗಳನ್ನು ಉಚಿತವಾಗಿ ವಿತರಿಸಬೇಕು. ಇಲ್ಲವೇ ಎಲ್ಲ ಪ್ರದೇಶಗಳಲ್ಲೂ ಅಗತ್ಯಕ್ಕೆ ತಕ್ಕಷ್ಟು ಶಾಲಾ ಕಾಲೇಜುಗಳನ್ನು ತೆರೆಯಬೇಕು.

ರಿಯಾಯಿತಿ ಬಸ್‌ಪಾಸ್ ದರದ ವಿವರ

ವಿಭಾಗ	ಕಳೆದ ವರ್ಷ	ಈ ವರ್ಷ
ಪ್ರಾಥಮಿಕ ಶಾಲೆ	80	285
ಪ್ರೌಢಶಾಲೆ	410	570
ಕಾಲೇಜು	760	1140
ಮೆಡಿಕಲ್/ ಇಂಜಿನಿಯರಿಂಗ್	890	1820
ಸಂಜೆ ಕಾಲೇಜು	-	1820

ಇದರಲ್ಲಿ ಇವರು ಸಂಸ್ಕರಣಾ ಶುಲ್ಕ 70 ರೂ. ವಿಮಾ ಶುಲ್ಕ 10 ರೂ., ಮಾಹಿತಿ ತಂತ್ರ ಜ್ಞಾನ ಶುಲ್ಕ 10 ರೂ., ಹೋಲಿಂಗ್ ಸ್ಟಾಕ್ ಶುಲ್ಕ 1 ರೂ., ಅಭಿವೃದ್ಧಿ ಶುಲ್ಕ ರೂ.10. ಈ ಶುಲ್ಕಗಳನ್ನು ಯಾವ ಕಾರಣಕ್ಕಾಗಿ ಸಂಗ್ರಹಿಸುತ್ತಾರೆ ಇದರಿಂದ ಪಾಸ್ ಪಡೆದ ವಿದ್ಯಾರ್ಥಿಗಳಿಗೇನು ಪ್ರಯೋಜನ (ವಿಮಾ ಶುಲ್ಕ ಹೊರತುಪಡಿಸಿ) ರಾಜ್ಯದ ಸಾರಿಗೆ ಸಚಿವರಾದ ಚಲುವರಾಯಸ್ವಾಮಿಯವರು ಇತ್ತೀಚಿಗೆ ಯಾವ ಕಾರ್ಯಕ್ರಮಕ್ಕೆ ಹೋದರೂ ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ.ಗಳು ಕೋಟಿಗಟ್ಟಲೆ ಲಾಭ ತರುತ್ತಿವೆ ಎಂದು ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ಹವಾನಿಯಂತ್ರಿತ ಓಲ್ವೋ ಬಸ್ ಗಳ ಪ್ರಯಾಣ ದರವನ್ನು ಕಡಿತ ಗೊಳಿಸುತ್ತಾರೆ. ಆದರೆ ವಿದ್ಯಾರ್ಥಿಗಳ ಬಸ್ ಪಾಸ್‌ದರವನ್ನು ಮಾತ್ರ ಪ್ರತಿ ವರ್ಷ ಏರಿಸುತ್ತಾರೆ. ಹಾಗಾದರೆ ಸಂಸ್ಥೆಯ ಲಾಭ ಯಾರಿಗಾಗಿ ಬಳಕೆಯಾಗಬೇಕು. ಪ್ರಯಾಣಿಕರಿಗೋ ಅಥವಾ ಅಧಿಕಾರಿ, ಸಚಿವರುಗಳಿಗೋ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿ ಖಂಡಿಸಿ ರಾಜ್ಯಾದ್ಯಂತ ವಿದ್ಯಾರ್ಥಿಗಳ ಪ್ರತಿಭಟನೆ

ಏಕಾಏಕಿಯಾಗಿ ಬಸ್ ಪಾಸ್‌ದರವನ್ನು ಹೆಚ್ಚಿಸಿರುವ ಸರ್ಕಾರದ ಕ್ರಮವನ್ನು ಖಂಡಿಸಿ ರಾಜ್ಯಾದಾದ್ಯಂತ ವಿದ್ಯಾರ್ಥಿಗಳು ಎಸ್‌ಎಫ್‌ಐನ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಗಳನ್ನು ನಡೆಸಿ ತಮ್ಮ ಆಕ್ರೋಶಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಕೋಲಾರ, ಮಂಡ್ಯ, ಉ.ಕ, ಮೈಸೂರು, ಉಡುಪಿ, ಹಾಸನ, ಬಳ್ಳಾರಿ, ಹಾವೇರಿ, ಆನೇಕಲ್, ಕೊಪ್ಪಳ, ಗದಗ, ಕೋಲಾರ ಮತ್ತು ಮಂಡ್ಯ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಿವೆ. ಜೂನ್ 28 ರಂದು ಎಸ್.ಎಫ್.ಐ. ಕರ್ನಾಟಕ ರಾಜ್ಯ ಸಮಿತಿ ಬಸ್ ಪಾಸ್ ದರ ಏರಿಕೆ ವಿರುದ್ಧ ರಾಜ್ಯದ್ಯಂತ ಪ್ರತಿಭಟನೆಗೆ ಕರೆ ನೀಡಿದ್ದನ್ನು ಗಮನಿಸಬಹುದು ರಾಜ್ಯದಲ್ಲಿ ಈ ವಿಚಾರವನ್ನು ಕೈಗೆತ್ತಿಕೊಂಡಿರುವ ಏಕೈಕ ವಿದ್ಯಾರ್ಥಿ ಸಂಘಟನೆ ಇದಾಗಿದೆ.

ಬಸ್ ಪಾಸ್‌ದರ ಏರಿಕೆ ವಾಪಸ್ ಆಗುವವರೆಗೆ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿರುವ ಎಸ್.ಎಫ್.ಐ. ಮುಖಂಡತ್ವ ಮತ್ತೆ ಜುಲೈ 3 ರಂದು ಸಹ ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು. ಕರೆಗೆ ಸ್ಪಂದಿಸಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಪ್ರತಿಭಟಿಸಿ ಸಚಿವರ ಭೂತ ದಹನ ನಡೆಸಿ ರಸ್ತೆತಡೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ವಿವಿಧ ಕಾಲೇಜುಗಳಿಂದ ಆಗಮಿಸಿದ ವಿದ್ಯಾರ್ಥಿಗಳು ಮೈಸೂರು ವೃತ್ತದಲ್ಲಿ ರಸ್ತೆ ತಡೆ ನಡೆಸಿ ಸಾರಿಗೆ ಸಚಿವರ ಭೂತ ದಹನ ನಡೆಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮುಖಂಡರು ಮತ್ತು ಪೋಲೀಸರೊಂದಿಗೆ ಮಾತಿನ ಚಕಮಕಿ ನಡೆಯಿತು.

ಚಳುವಳಿಕಾರರ ಮೇಲೆ ಪೋಲೀಸರ ಲಾಠಿ ಪ್ರಯೋಗ


ಕಳೆದ 2 ತಿಂಗಳ ಹಿಂದಿನ ಘಟನೆಯೊಂದು ನೆನಪಾಗುತ್ತದೆ. ಹಾಸನನಗರದಲ್ಲಿ ಸಮರ್ಪಕವಾಗಿ ಬಸ್ ಪಾಸ್ ವಿತರಿಸಬೇಕೆಂದು ಶಾಂತ ರೀತಿಯಲ್ಲಿ ಒತ್ತಾಯಿಸಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಗೂಂಡಾಗಳ ರೀತಿಯಲ್ಲಿ ಅಮಾನುಷವಾಗಿ ಹಲ್ಲೆ ಮಾಡಿದರು. ಅದು ಮತ್ತೆ ಕೋಲಾರದಲ್ಲಿ ಮರುಕಳಿಸಿದೆ. ಜೂನ್ 21ರಂದು ಕೋಲಾರ ನಗರದಲ್ಲಿ ರಸ್ತೆ ತಡೆ ನಡೆಸುತ್ತಿದ್ದ ಎಸ್.ಎಫ್.ಐ.ನ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠಿ ಪ್ರಹಾರ ನಡೆಸಿ ಸುಮಾರು 100 ಜನ ವಿದ್ಯಾರ್ಥಿಗಳ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿದ್ದಾರೆ. ವಿದ್ಯಾರ್ಥಿಗಳ ನೈಜ ಬೇಡಿಕೆಗಳನ್ನು ಬಗೆಹರಿಸಲು ಸಾಧ್ಯವಾಗದ ಸರ್ಕಾರ ಈ ರೀತಿಯಲ್ಲಿ ಪೋಲೀಸ್ ಬಲಪ್ರಯೋಗ ನಡೆಸಿ ಚಳುವಳಿಯನ್ನು ದಮನ ಮಾಡಲು ಯತ್ನಿಸುತ್ತಿದೆ ಆದರೆ ಪೋಲೀಸ್ ಲಾಠಿ ಚಾರ್ಜ್ ನಂತರ ಅದನ್ನು ವಿರೋಧಿಸಿ ಕೋಲಾರ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಸಾವಿರಾರು ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ಪ್ರಸಕ್ತ ಏರಿಸಿರುವ ಬಸ್ ಪಾಸ್‌ದರವನ್ನು ಇಳಿಸುವವರೆಗೆ ರಾಜ್ಯಾದ್ಯಂತ ಹೋರಾಟವನ್ನು ಮುಂದುವರಿಸಲು ಎಸ್.ಎಫ್.ಐ. ಮುಖಂಡತ್ವ ನಿರ್ಧರಿಸಿದೆ.

ವರದಿ: **ಹೆಚ್.ಆರ್.ನವೀನ್‌ಕುಮಾರ್**

ಬಸ್ ಪಾಸ್ ದರ ಎಷ್ಟು ಹೆಚ್ಚಾಗಿದೆ ಸಾರಿಗೆ ಸಚಿವ ಚಲುವರಾಯ ಸ್ವಾಮಿಗೆ ಗೊತ್ತಿಲ್ಲಂತೆ!!

ಜೂನ್ 29 ರಂದು ರಾಜ್ಯದ ಸಾರಿಗೆ ಸಚಿವರಾದ ಚಲುವರಾಯಸ್ವಾಮಿಯವರು ತಮ್ಮ ತವರು ಜಿಲ್ಲೆಯಾದ ಮಂಡ್ಯಕ್ಕೆ ಭೇಟಿ ನೀಡಿದ್ದರು. ಅಂದು ಜಿಲ್ಲೆಯ ಸಾವಿರಾರು ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಸಚಿವರನ್ನು ಗೆರಾವ್ ಮಾಡಿ ಬಸ್ ಪಾಸ್ ದರ ಏರಿಕೆಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಪ್ರಶ್ನಿಸಿದರೆ, ಅವರು ಹೇಳಿದ್ದು ಹೀಗೆ "ಬಸ್ ಪಾಸ್ ರೇಟನ್ನ ಎಷ್ಟು ಜಾಸ್ತಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಅದನ್ನ ತಕ್ಷಣ ತಿಳಿದು ಕೊಳ್ಳುತ್ತೇನೆ. ಹಾಗಾಗಿ ನಿಮ್ಮ ಹೋರಾಟವನ್ನು ವಾಪಸ್ ಪಡೆಯಿರಿ" ಮಾಹಿತಿಯೇ ಇಲ್ಲದ ಸಚಿವರನ್ನು ಕಂಡ ವಿದ್ಯಾರ್ಥಿಗಳು ಪ್ರತಿಭಟನೆಯನ್ನು ಇನ್ನಷ್ಟು ತೀವ್ರಗೊಳಿಸಿ ಅವರ ಕಛೇರಿ ಒಳಗೆ ನುಗ್ಗಿದರು. ಪರಿಸ್ಥಿತಿ ಬಿಗುವಿನಿಂದ ಕೂಡಿದಾಗ ಪ್ರತಿಭಟನಾಕಾರರಿಗೆ ಮಣಿದ ಸಚಿವರು 3 ದಿನಗಳೊಳಗಾಗಿ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂಬ ಭರವಸೆ ನೀಡಿದ ಮೇಲೆ ಪ್ರತಿಭಟನಾಕಾರರು ಹಿಂದಿರುಗಿದರು.



ಬಾಗೇಪಲ್ಲಿಯಲ್ಲಿ ಸಚಿವ ಆಲಂಗೂರು ಶ್ರೀನಿವಾಸ್‌ಗೆ ಘೇರಾವ್

ಕೋಲಾರ ಜಿಲ್ಲೆಯ ಬಾಗೇಪಲ್ಲಿಗೆ ಭೇಟಿ ನೀಡಿದ್ದ ರಾಜ್ಯದ ಪೌರಾಡಳಿತ ಸಚಿವರಾದ ಆಲಂಗೂರು ಶ್ರೀನಿವಾಸ್‌ಗೆ ಎಸ್.ಎಫ್.ಐ. ನ ಮುಖಂಡರು ಹಠಾತ್ತನೆ ಮುತ್ತಿಗೆ ಹಾಕಿ ಬಸ್ ಪಾಸ್ ದರ ಏರಿಸಿರುವ ರಾಜ್ಯ ಸರ್ಕಾರ ನೀತಿಯನ್ನು ಪ್ರತಿಭಟಿಸಿದ್ದಾರೆ. ಈ ಮುತ್ತಿಗೆಯಿಂದ ಪೇಚಿಗೆ ಸಿಲುಕಿದ ಸಚಿವರು 'ಈ ರೀತಿ ಬಸ್ ಪಾಸ್ ದರ ಏರಿಕೆ ಅವೈಜ್ಞಾನಿಕವಾದದ್ದು ಇದರ ಬಗ್ಗೆ ನಾನು ಮುಖ್ಯಮಂತ್ರಿಗಳು ಮತ್ತು ಸಾರಿಗೆ ಸಚಿವರೊಂದಿಗೆ ಮಾತುಕತೆ ನಡೆಸಿ ಇಷ್ಟರಲ್ಲೇ ವಿಧಾನಸೌಧದಲ್ಲಿ ವಿದ್ಯಾರ್ಥಿ ಮುಖಂಡರನ್ನು ಮಾತುಕತೆಗೆ ಕರೆಯುತ್ತೇನೆ' ಎಂದು ಭರವಸೆ ನೀಡಿದರು. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು! ಒಂದೇ ಸರ್ಕಾರದ ಸಚಿವ ಸಂಪುಟದ ಸದಸ್ಯರು ಅದೇ ಸರ್ಕಾರ ಜಾರಿಗೆ ತಂದಿರುವ ನೀತಿಯನ್ನು ಅವೈಜ್ಞಾನಿಕ ಎಂದು ಒಪ್ಪಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ.



ಸಣ್ಣ ಉಳಿತಾಯ ಅಭಿವೃದ್ಧಿ ಮತ್ತು ನಿಯಂತ್ರಣ ಮಸೂದೆ - 2007

ಮಹಿಳೆಯರಿಗೆ ಮರಣ ಶಾಸನ

ಕೇಂ[illegible] ಸಣ್ಣ ಉಳಿತಾಯ [illegible] ಮತ್ತು ನಿಯಂತ್ರಣ ಮಸೂದೆ 2007ನ್ನು ಲೋಕಸಭೆಯ ಮುಂದೆ [illegible] ಸ್ವತಂತ್ರವಾಗಿರುವ [illegible] ಉಳಿತಾಯ ಗುಂಪುಗಳ ಜವಾಬ್ದಾರಿಯನ್ನು [illegible] ವಹಿಸಿ, ಬಡ ಮಹಿಳೆಯರ ಹಣವನ್ನು ನುಂಗಿ ನೀರು ಕುಡಿಯುವ ಹುನ್ನಾರ ನಡೆಸಿದೆ.

ಈಗಾಗಲೇ ಸಾರ್ವಜನಿಕ ಸಂಸ್ಥೆ ಉದ್ದಿಮೆಗಳನ್ನು ಖಾಸಗೀಯವರಿಗೆ ನೀಡಿದ ರೀತಿಯಲ್ಲಿಯೇ ಇವುಗಳನ್ನು ಕೂಡ ಅವರ ತೆಕ್ಕೆಗೆ ನಿಡುವ ದುಷ್ಟ ಆಲೋಚನೆಗೆ ಕೇಂದ್ರ ಸರ್ಕಾರ ಮುಂದಾಗಿರುವುದು ದುರಂತದ ಸಂಗತಿ

ಈ ಮಸೂದೆ ಕುರಿತಂತೆ ಇತ್ತೀಚೆಗೆ ಪ್ರಗತಿಪರ ಸಂಘಟನೆಗಳು ಬೆಂಗಳೂರಿನಲ್ಲಿ ವಿಚಾರ ಸಂಕೀರಣವನ್ನು ಹಮ್ಮಿಕೊಂಡು, ರಾಜ್ಯಾದ್ಯಂತ ಸ್ವಸಹಾಯ ಗುಂಪುಗಳ ಮಹಿಳೆಯರನ್ನು ಆಹ್ವಾನಿಸಿ ಮಸೂದೆಯ ಹುಳುಕು ಹುನ್ನಾರಗಳನ್ನು ಮನವರಿಕೆ ಮಾಡಿಸಿದವು, ಆ ಸಂಧರ್ಭದಲ್ಲಿ ಮಸೂದೆ ಕುರಿತು ನಡೆದ ಚರ್ಚೆ ಇಲ್ಲಿದೆ.

ಸ್ವಸಹಾಯ ಗುಂಪುಗಳ ಹಿನ್ನೆಲೆ :

ಗುಜರಾತಿನ ಸೇವಾ, ಹಾಗೂ ನಬಾರ್ಡ್ ಯೋಜನೆಗಳ ಮೂಲಕ ನಮ್ಮ ದೇಶದಲ್ಲಿ ಸೂಕ್ಷ್ಮ ಅರ್ಥವ್ಯವಸ್ಥೆ(ಮೈಕ್ರೋಫೈನಾನ್ಸ್)ಬೆಳೆದು ಬಂದಿತು. ಸದ್ಯ ದೇಶದಲ್ಲಿ ಐವತ್ತು ಲಕ್ಷ ಸ್ವಸಹಾಯ ಗುಂಪುಗಳಿದ್ದು ಪರಸ್ಪರ ಉಳಿತಾಯ ಹಾಗೂ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಗಾಗಿ ಅಸ್ತಿತ್ವದಲ್ಲಿವೆ. ಇಲ್ಲಿಯುವರೆಗೆ ಮನೆಗಷ್ಟೆ ಸೀಮಿತವಾಗಿದ್ದ ಲಕ್ಷಾಂತರ ಮಹಿಳೆಯರಿಗೆ ಇಂತಹ ಸಂಸ್ಥೆಗಳು ಸಾರ್ವಜನಿಕ ಚಟುವಟಿಕೆಗಳಿಕೆ ವೇದಿಕೆಯಾಗಿವೆ.

ಇಲ್ಲಿಯವರೆಗೆ ಇವುಗಳು ಸಹಕಾರಿ ಬ್ಯಾಂಕುಗಳು ಸೇರಿದಂತೆ ಸಂಘಟಿತ ಬ್ಯಾಂಕುಗಳಿಂದ ತಮ್ಮ ಹಣಕಾಸು ವ್ಯವಸ್ಥೆಯನ್ನು ಮಾಡಿಕೊಂಡು ಸ್ವತಂತ್ರವಾಗಿ ಸಾಲ ಕೊಡುವ-ತೆಗೆದುಕೊಳ್ಳುವ ವ್ಯವಸ್ಥೆ ಹೊಂದಿದ್ದವು. ಅಲ್ಲದೆ ಸಾಲ ನೀಡುವ ಬ್ಯಾಂಕುಗಳು ನಿಯಂತ್ರಣವನ್ನೂ ಹೊಂದಿದ್ದವು.

ಸಾಕಷ್ಟು ಬ್ಯಾಂಕುಗಳಿರುವ ನಮ್ಮ ದೇಶದಲ್ಲಿ ಸರ್ಕಾರ ಖಾಸಗಿ ಲಾಭಿಗೆ ತಲೆಬಾಗಿ ಸದ್ಯ ಈ ಮಸೂದೆಯನ್ನು ತರುವ ಮೂಲಕ, ಸ್ವಸಹಾಯ ಗುಂಪುಗಳ ಉಳಿತಾಯ ಹಣದ ಜವಬ್ದಾರಿಯುನ್ನು ಸರ್ಕಾರೇತರ ಸಂಘಟನೆ(ಎನ್‌ಜಿಓ)ಗಳಿಗೆ ನೀಡ ಹೊರಟಿದೆ.

ಮಸೂದೆ ಏನು ಹೇಳುತ್ತದೆ

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸೂಕ್ಷ್ಮ ಅರ್ಥವ್ಯವಸ್ಥೆಯು ವ್ಯವಸ್ಥಿತ ಬೆಳವಣಿಗೆ ಶ್ರಮಿಸುವುದು ಮತ್ತು ಸೂಕ್ಷ್ಮ ಆರ್ಥಿಕ ಸಂಸ್ಥೆ(ಎಂಎಫ್ಐ)ಗಳಿಗೆ ಉಳಿತಾಯದ ಕಾರ್ಯ ವಹಿಸುವುದು, ವಿವಿಧ ಉದ್ದೇಶಗಳಿಗೆ ರೂ50.000 ಮತ್ತು ಗೃಹಸಾಲದ ಮೊತ್ತವನ್ನು ರೂ.1.5ಲಕ್ಷ ನೀಡುವುದು. ನಬಾರ್ಡ್ ಸಲಹಾ ಮಂಡಲಿಯಾಗಿ ಸೂಕ್ಷ್ಮ ಹಣಕಾಸು ಪರಿಷತ್ತು ಸ್ಥಾಪಿಸುವುದು.

ಸೂಕ್ಷ್ಮ ಆರ್ಥಿಕ ಸೇವೆಗಳಿಗೆ ಸಾರ್ವತ್ರಿಕ ಪ್ರವೇಶದ ವಾತಾವರಣ, ಸಂಕಷ್ಟಕ್ಕೊಳಗಾದ ಮಹಿಳೆಯರಿಗೆ ಪರಿಹಾರ, ಪ್ರಸಕ್ತ ಯಾವ ಕಾಯ್ದೆಯಿಂದಲೂ ನಿಯಂತ್ರಣಕ್ಕೊಳಗಾಗದ ಸೂಕ್ಷ್ಮ ಆರ್ಥಿಕ ಸಂಸ್ಥೆಗಳನ್ನು ನಿಯಂತ್ರಿಸುವುದು.

ಮಸೂದೆಯ ದುಷ್ಪರಿಣಾಮ ಏನು

■ ಇಲ್ಲಿಯವರೆಗೆ ಮಹಿಳೆಯರು ತಮ್ಮ ಹಣದ ಮೇಲೆ ಹಿಡಿತ ಹೊಂದಿ ಹಾಗೂ ಇತರರಿಗೆ ಸಾಲ ನೀಡಿ ಬರುವ ಹಣದಿಂದ ಜೀವನ ನಡೆಸುತ್ತಿದ್ದರು. ಆದರೆ ಈ ಮಸೂದೆಯಿಂದ. ಮಹಿಳಾ ಗುಂಪುಗಳ ಉಳಿತಾಯದ ಕಾರ್ಯ ಸೂಕ್ಷ್ಮ ಆರ್ಥಿಕ ಸಂಸ್ಥೆಗಳಿಗೆ (ಎಂಎಫ್ಓ)ಗೆ ವಹಿಸುವುದರಿಂದ ಆ ಹಣದ ಮೇಲಿನ ಹಿಡಿತ ಸರ್ಕಾರೇತರ ಸಂಸ್ಥೆಗಳಿಗೆ ಹೋಗುತ್ತದೆ.



■ ಈಗಾಗಲೇ ಬ್ಯಾಂಕುಗಳ ಸಂಖ್ಯೆ ಕಡಿಮೆಯಾಗುತ್ತಿದ್ದು ಇದರ ಪರಿಣಾಮ ಬ್ಯಾಂಕುಗಳು ದಿವಾಳಿ ಯಾಗುತ್ತವೆ.

■ ಖಾಸಗಿ ಕ್ಷೇತ್ರ ಬಂಡವಾಳ ಹಾಕದೆ ಮಾರುಕಟ್ಟೆ ಪ್ರವೇಶಿಸಿ ಲಾಭ ಪಡೆಯುತ್ತದೆ. ಇದರಿಂದ ವಾಣಿಜ್ಯ ಬ್ಯಾಂಕುಗಳು ಗ್ರಾಮೀಣ ಭಾಗದಿಂದ ಹೊರಹೋಗುತ್ತವೆ, ಎನ್‌ಜಿಓಗಳು ಮಾತ್ರ ಬೆಳೆಯುತ್ತವೆ.

■ ವಿದೇಶಿ ನೇರಬಂಡವಾಳ ನಿಷೇದಿಸಿಲ್ಲವಾದ್ದರಿಂದ, ವಿದೇಶಿ ಬಂಡವಾಳಿಗರಿಗೆ ಎನ್‌ಜಿಓಗಳ ಮೂಲಕ ಬಡಮಹಿಳೆಯರ ಹಣ ದೋಚಲು ದಾರಿಯಾಗುತ್ತದೆ.

■ ಯಾರು ಬೇಕಾದವರಿಗೆ ಉಳಿತಾಯದ ಹಣ ಸಂಗ್ರಹಿಸಲು ಅವಕಾಶ ನೀಡುವುದರಿಂದ ಅಪಾಯ ಕಟ್ಟಿಟ್ಟದ್ದು.

■ ಈ ಮಸೂದೆಯು ಸಾಲ ನೀಡುವ ಸಂಘಟನೆಗಳ ಬಡ್ಡಿದರದ ಬಗ್ಗೆ ಮೌನ ವಹಿಸಿದೆ. ಯಾರು ಬಡ್ಡಿ ದರವನ್ನು ನಿರ್ಧರಿಸಬೇಕೆಂಬುದರ ಬಗ್ಗೆ ಹೇಳಿಲ್ಲ.

■ ಸಾಲದ ಮೊತ್ತವನ್ನು ರೂ 50.000 ಮತ್ತು ಗೃಹಸಾಲದ ಮೊತ್ತವನ್ನು ರೂ. 1.5 ಲಕ್ಷಗಳಿಗೆ ಮಿತಿಗೊಳಿಸಲಾಗಿದ್ದು ಈ ವಿಷಯ ಮರಳಿ ಚರ್ಚೆಯಾಗಬೇಕು.

■ ಸೂಕ್ಷ್ಮ ಆರ್ಥಿಕ ಸಂಘಟನೆಗಳು(ಎಂಎಫ್ಓ) ಮತ್ತು ಸೂಕ್ಷ್ಮ ಆರ್ಥಿಕ ಸಂಸ್ಥೆಗಳು(ಎಂಎಫ್ಐ) ಯಾವ ವಿವೇಚನೆಯಿಲ್ಲದೆ ಬಡ್ಡಿ ದರ ಹೇರಲು ಸುಲಭವಾಗುತ್ತದೆ.

ಸಭೆಯಿಂದ ವ್ಯಾಪಕ ವಿರೋಧ

ಬಂಡವಾಳಿಗರು, ಲೇವಾದೇವಿಗಾರರು ಸಂಘಗಳನ್ನು ನಡೆಸಲು ಅರ್ಹರಲ್ಲದಿದ್ದರೂ, 5 ಲಕ್ಷ ರೂ ಹಣ ಠೇವಣೆಯನ್ನಿಟ್ಟು ಯಾರು (ವ್ಯಕ್ತಿ, ಸಂಘಸಂಸ್ಥೆ) ಬೇಕಾದರೂ ಗುಂಪುಗಳನ್ನು ನಡೆಸಬಹುದಾ?

ಜಿಲ್ಲೆಗೊಂದು ಏಕ ವ್ಯಕ್ತಿ ಕಚೇರಿಯನ್ನು ಹೊಂದಿ ಸಂಘ ರಚಿಸಲು, ತರಬೇತಿ ನೀಡಲು, ಹಣ ಒದಗಿಸಲು ಸಾಧ್ಯವಾಗದ ನಬಾರ್ಡ್‌ಗೆ ಇವುಗಳ ಜವಬ್ದಾರಿ ಕೊಡುವುದು ಎಷ್ಟು ಸಮಂಜಸ?

5 ಲಕ್ಷ ರೂ ಹಣ ಠೇವಣೆಯನ್ನಿಟ್ಟು ಯಾರೇ ವ್ಯಕ್ತಿ ತನಗಿಷ್ಟ ಬಂದಷ್ಟು ಬಡ್ಡಿ ವಿಧಿಸುವ, ಒಂದು ಗುಂಪಿಗೆ ಬರಿ 50 ಸಾವಿರ ಸಾಲ ನಿಡುವ ಪ್ರಸ್ತಾಪ ಯಾರ ಲಾಭಕ್ಕಾಗಿ?


ಈ ಮಸೂದೆಯಿಂದ 15 ರಿಂದ 20 ಜನರಿರುವ ಒಂದು ಗುಂಪಿಗೆ ರೂ 50 ಸಾವಿರ ಸಾಲ ಸಿಗುವುದಾದರೆ ಅದರಿಂದ ಬಡತನ ನೀರ್ಮೂಲನೆ ಆಗಬಹುದಾ?

ಇದೇ ಸಂದರ್ಭದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಬೃಂದಾಕಾರಟ್ ಮಾತನಾಡಿ 'ಬಡ್ಡಿದರದ ಮೇಲೆ ನಿಯಂತ್ರಣ ಹೊಂದಿರದ ಈ ಮಸೂದೆ ಮರಣ ಶಾಸನದಂತೆ. ಸರ್ಕಾರ ಬಡ ಮಹಿಳೆಯರ ಉಳಿತಾಯದ ಹಣವನ್ನೂ ಖಾಸಗೀ ಕಂಪನಿಗಳ ಕೈಗೆ ಹಾಕುವ ಹುನ್ನಾರ ನಡೆಸಿದ್ದು ಮಹಿಳಾ ವಿರೋಧಿಯಾದ ಈ ಮಸೂದೆಯ ವಿರುದ್ಧ ದೇಶಾದ್ಯಂತ ಐಕ್ಯ ಹೋರಾಟದ ಅವಶ್ಯಕತೆ ಇದೆ' ಎಂದರು.

'ಖಾಸಗೀಯವರಿಗೆ ಇವುಗಳ ಜವಬ್ದಾರಿ ನೀಡುವುದರಿಂದ ಸ್ವ ಸಹಾಯ ಸಂಘಗಳಿಗೆ ಉಳಿವಿಲ್ಲ. [illegible]ರಿ ಲಾಭ ಮಾಡಿಕೊಳ್ಳುವ ಉದ್ದೇಶಿತ ಈ ಮಸೂದೆ ಮರಳಿ ಸಂಸತ್ತಿನಲ್ಲಿ ಚರ್ಚೆಯಾಗಲಿ' ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿ ರಾಜ್ಯ ಮುಖಂಡರಾದ ಈ ಬಸವರಾಜು ನುಡಿದರು. ಹಾಗೂ ಸಮತಾ ಮಹಿಳಾ ವೇದಿಕೆಯ ಎನ್ ಪ್ರಭಾ 'ಸಂಘಗಳ ಸರಿಯಾದ ನಿಯಂತ್ರಣಕ್ಕೆ ಒಂದು ಕಾನೂನಿನ ಅವಶ್ಯಕತೆ ಇದೆ, ಆದರೆ ಇಂತಹ ಕಾನೂನು ಅಲ್ಲ' ಎಂದರು.

ಇನ್ನುಳಿದಂತೆ ಸಿಪಿಐಎಂನ ರಾಜ್ಯ ಕಾರ್ಯದರ್ಶಿ ಜಿ ಎನ್ ನಾಗರಾಜ್ ಹಾಗೂ ಇನ್ನಿತರರು ಭಾಗವಹಿಸಿದ್ದರು.


'ದರಿದ್ರ' ಅಮೆರಿಕಾ



ಎಂ.ವಿಜಯಕುಮಾರ್
ಮೈಸೂರು

ಅಮೇರಿಕಾ ದೇಶದ ಕನಸು ಈಗ ಅಲ್ಲಿನ ಲಕ್ಷಾಂತರ ಜನರಿಗೆ ಸಿಂಹಸ್ವಪ್ನವಾಗಿರುವ ವಿಷಯ ನಿಮಗೆ ಗೊತ್ತೇ? 2004ರ ಜನಗಣತಿಯ ವಿಶ್ಲೇಷಣೆ ತೆರೆದಿಟ್ಟ ಸತ್ಯವಿದು. 60 ದಶಲಕ್ಷ ಅಮೇರಿಕನ್ನರ ದಿನಂಪ್ರತಿ ಆದಾಯ 7 ಡಾಲರ್‌ಗೂ ಕಡಿಮೆ ಇದೆ. ಆದರೆ ಅಲ್ಲಿನ ಒಟ್ಟು ಜನಸಂಖ್ಯೆಯ ಶೇ 1 ರಷ್ಟಿರುವ ಅತೀ ಶ್ರೀಮಂತರು ರಾಷ್ಟ್ರೀಯ ಆದಾಯದ ಶೇ.16ನ್ನು ಬಾಚಿಕೊಳ್ಳುತ್ತಿದ್ದಾರೆ.

ಜಾಗತಿಕ ಆದಾಯ ಅಸಮಾನತೆಯ ತೀವ್ರತೆಯ ಹೋಲಿಕೆಗೆ ಇದು ನಿಲುಕದಾದರೂ ಅಮೇರಿಕಾದ ಸಂದರ್ಭದಲ್ಲಿ ಗಂಭೀರವಾಗಿದೆ. 'ಭೂಮಿಯ ಮೇಲಿನ ಶ್ರೀಮಂತ ತವರು' ಎಂದೇ ಖ್ಯಾತಿ ಪಡೆದಿರುವ ಅಮೇರಿಕಾದಲ್ಲಿ ಯಾವುದೇ ಕೈಗಾರಿಕಾ ದೇಶಗಳಿಗೆ ಹೋಲಿಸಿದರೆ ಬಡವ ಶ್ರೀಮಂತರ ಮಧ್ಯೆ ತೀವ್ರವಾದ ಅಂತರ ಸೃಷ್ಟಿಯಾಗುತ್ತಿದೆ. ಲ್ಯಾಟಿನ್ ಅಮೇರಿಕಾದಲ್ಲಿ ಏಷ್ಯಾದಲ್ಲಿ ಕ್ಯಾರಿಬಿಯನ್ ದ್ವೀಪಗಳಲ್ಲಿ ಒಂದು ವಸ್ತುವನ್ನು ಖರೀದಿಸಲು 1 ಡಾಲರ್ ವೆಚ್ಚ ಮಾಡಿದರೆ ಅಮೇರಿಕಾದಲ್ಲಿ ಅದೇ ವಸ್ತುವಿನ ಖರೀದಿಗೆ 3 ರಿಂದ 4 ಡಾಲರ್ ತೆರಬೇಕಾಗುತ್ತದೆ. ಹೀಗಾಗಿ ಜಗತ್ತಿನ ಲಕ್ಷಾಂತರ ದರಿದ್ರರ ಜೀವನ ಮಟ್ಟಕ್ಕೂ ಅಮೇರಿಕಾದ ಜನರ ಜೀವನಮಟ್ಟಕ್ಕೂ ಅಂಥ ವ್ಯತ್ಯಾಸವೇನೂ ಇಲ್ಲ. ಮೇಲ್ವಿಚಾರಕರಲ್ಲದವರ ಹುದ್ದೆಗಳ ವೇತನ 1972 ರಿಂದಲೂ ಪರಿಷ್ಕೃತಗೊಂಡಿಲ್ಲ. 25 ಲಕ್ಷ ಅಮೇರಿಕನ್ನರು ತುರ್ತು ಆಹಾರ ಸಹಾಯ ಯೋಜನೆಯ ಮೇಲೆಯೇ ಬದುಕಿದ್ದಾರೆ. ಕಳೆದ 25 ವರ್ಷಗಳಿಂದ ರಾಜಕೀಯ ಹಕ್ಕುಗಳನ್ನು ಬಲವಾಗಿ ಸಮರ್ಥಿಸುವ ಅಮೇರಿಕಾದಲ್ಲಿ ಸಾಮಾಜಿಕ ಸುರಕ್ಷಾ ಕ್ರಮಗಳು ದುರ್ಬಲಗೊಳ್ಳುತ್ತಿವೆ. ಜಾಗತೀಕರಣವೆಂಬ ಕಡಿವಾಣ ಕಿತ್ತ ಕುದುರೆ ಎಲ್ಲೆಡೆ ಕೆನೆಯುತ್ತಿದ್ದರೆ ಡೆಟ್ರಾಯಿಟ್‌ನಿಂದ ಕನೆಕ್ಟಿಕಟ್‌ವರೆಗೆ ಬಹುತೇಕ



ಕಾರ್ಮಿಕರು ವಿಪತ್ಕಾರಿ ಪರಿಣಾಮಗಳನ್ನು ಎದುರಿಸುತ್ತಿದ್ದಾರೆ. 'ಗೆದ್ದವನಿಗೇ ಎಲ್ಲ' ಎನ್ನುವ ಸಂಸ್ಕೃತಿಯು ಅಧಿಕಾರ ರಾಜಕೀಯದ ಸೂತ್ರವಾಗಿರುವ ಅಮೇರಿಕಾದಲ್ಲಿ ಬಡತನದ ವೆಚ್ಚಕ್ಕೆ ಶ್ರೀಮಂತಿಕೆಯ ದಾಹ ತಣಿಯುತ್ತಿದೆ.

ಜಗತ್ತಿನ ಜನಸಂಖ್ಯೆಯ ಶೇ.6 ರಷ್ಟು ಜನ ಅಮೇರಿಕಾದಲ್ಲಿ ವಾಸಿಸುತ್ತಾರೆ. ಆದರೆ ಜಗತ್ತಿನ ಒಟ್ಟು ಸಂಪನ್ಮೂಲದ ಶೇ.25 ರಷ್ಟು ಕಬಳಿಕೆಯನ್ನು ಅಮೇರಿಕಾ ಮಾಡುತ್ತಿದೆ. ಅಮೇರಿಕಾದ ಶ್ರೀಮಂತ ರಾಜ್ಯವೆಂದು ಗುರುತಿಸಲ್ಪಡುವ ಕನೆಕ್ಟಿಕಟ್ ಪ್ರಾಂತವು ಜಗತ್ತಿನ ಅತ್ಯಂತ ಸಂಪದ್ಭರಿತ ದ್ವೀಪಗಳನ್ನು ಫೇರ್‌ಫೀಲ್ಡ್ ಕಾಂಟಿಯಾದ್ಯಂತ ಹೊಂದಿದೆ. ಆದರೆ ಅಮೇರಿಕಾದ ಹತ್ತು ಬಡ ನಗರಗಳ ಪೈಕಿ ಮೂರು ನಗರಗಳು ಹಾರ್ಟ್‌ಫೋರ್ಡ್, ಬ್ರಿಡ್ಜ್ ಪೋರ್ಟ್ ಹಾಗೂ ನ್ಯೂ ಲಂಡನ್ ಇರುವುದು ಈ ಪ್ರದೇಶದಲ್ಲೇ. ಮಿಸ್ಸಿಸ್ಸಿಪ್ಪಿ, ಅಲಬಾಮಾಗಳು ದಕ್ಷಿಣ ಗೋಳದ ಯಾವ ದೇಶಕ್ಕೂ ಕಡಿಮೆ ಇರದಂಥ ಬಡತನವನ್ನು ಹೊಂದಿವೆ. ಈ ರೀತಿಯ ಅರ್ಥ ವ್ಯವಸ್ಥೆಯ ಅನರ್ಥಕಾರಿ ಅನಾಹುತಗಳು ಜನರಲ್ಲಿ ಅಭದ್ರತೆ ಹಾಗೂ ನೋವನ್ನು ಹುಟ್ಟುಹಾಕಿವೆ. ಹಿಂಸೆ, ಅಪರಾಧ, ಮಾದಕವಸ್ತು, ಬಂದೂಕು, ಮಾನಸಿಕ ಅಸ್ವಸ್ಥತೆ, ಮುಗಿದ ಹೋದ ಬದುಕಿನ ಕನಸುಗಳು, ಸಿನಿಕತನ, ಭ್ರಷ್ಟಾಚಾರ ಎಲ್ಲವೂ ಸರ್ವ ವ್ಯಾಪಿಯಾಗಿರುವಾಗ ಇವಿಲ್ಲದೇ ಬದುಕಿಲ್ಲ ಎನ್ನುವಂಥ ಸ್ಥಿತಿ ಅಲ್ಲದೆ, ತೆರಿಗೆಯ ಹೊರೆಯಿಂದ ಮಧ್ಯಮವರ್ಗ ತತ್ತರಿಸಿದೆ. ಅಮೇರಿಕಾದ ಪೋಲೀಸು, ಕೋರ್ಟು, ಜೈಲು, ಕಲ್ಯಾಣ ಯೋಜನೆಗಳಿಗೆ ಸಂಪನ್ಮೂಲ ಸಂಗ್ರಹವಾಗುವುದೇ ಈ ತೆರಿಗೆಗಳಿಂದ. ಜಗತ್ತಿಗೇ ಕನಸುಗಳನ್ನು ಮಾರುವ ಅಮೇರಿಕದಲ್ಲಿ ಇದು ಅಲ್ಲಿನ ಜನರು ಕಾಣುತ್ತಿರುವ ಸಿಂಹಸ್ವಪ್ನ.

ರೈತರ ಸಾಲು ಸಾಲು ಆತ್ಮಹತ್ಯೆಗೆ ಕಾರಣಗಳನ್ನು ಕಂಡುಕೊಳ್ಳುವ ರೈತ ನ್ಯಾಯಾಲಯದ ಕಟೆಕಟೆ ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆಯಿತು. ಏನದರ ತೀರ್ಪು?

ನೇಗಿಲ ಯೋಗಿ ನೇಣಿಗೆ ಯಾಕೆ!

ಡಾ. ಮೀನಾಕ್ಷಿ ಬಾಳಿ

ಆಕೆ ಸರಸ್ವತಿ. ಬೀದರ್ ಜಿಲ್ಲೆಯ ನಾಗೂರು (ಕೆ)ಗ್ರಾಮ ನಿವಾಸಿ. ಕಬ್ಬು ಬೆಳೆದು ಸಾಲದ ಭಾದೆ ತಾಳದೆ ಅವಳ ಗಂಡ ತಿಂಗಳ ಹಿಂದೆ ವಿಷ ಸೇವಿಸಿ ಪ್ರಾಣ ಕಳೆದುಕೊಂಡಿದ್ದಾನೆ. ಎರಡು ವರ್ಷಗಳ ಅವಧಿಯಲ್ಲಿ ಆ ಕುಟುಂಬವು ಒಟ್ಟು 5 ಲಕ್ಷ ಸಾಲ ಮಾಡಿದೆ. ಇರುವ ನಾಲ್ಕು ಎಕರೆಯಲ್ಲಿ ಎರಡು ಎಕರೆ ಮಾತ್ರ ನೀರಾವರಿ ಮಾಡಿದ್ದು. ಶಕ್ತಿ ಮೀರಿ ಖರ್ಚು ಮಾಡಿ ಕಬ್ಬು ಬೆಳೆದಿದ್ದಾರೆ. ಆದರೆ ಕಟಾವಿಗೆ ಬಂದ ಬೆಳೆ ಮಾತ್ರ ಸಮಯದ ದವಡೆಗೆ ಸಿಕ್ಕು ಸತ್ವ ಕಳೆದುಕೊಂಡು ಅನುಪಯೋಗಕಾರಿಯಾಗಿ ನಿಂತಿದೆ. ಫ್ಯಾಕ್ಟರಿಯವರು ಕಬ್ಬು ಒಯ್ಯಲಿಲ್ಲ. ಸಾಲಗಾರರು ಮಾತ್ರ ಎಳ್ಳಷ್ಟು ಕರುಣೆ ತೋರದೆ ಕುಂತಲ್ಲಿ, ನಿಂತಲ್ಲಿ ಸರಸ್ವತಿ ಕುಟುಂಬದ ಮಾನವನ್ನು ಹರಾಜಿಗೆ ಹಾಕತೊಡಗಿದರು. ಇಂಥ ಅಸಹನೀಯ ಪರಿಸ್ಥಿತಿಯಲ್ಲಿ ಮನೆಯ ಯಜಮಾನನು ಎಲ್ಲ ಬಗೆಯ ಭರವಸೆ ಮತ್ತು ಬದುಕುವ ವಾಂಛೆಯನ್ನು ಕಳೆದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಕುಟುಂಬವು ಮಾತ್ರ ಇನ್ನೂ ಸಾಲಗಾರರ ಸತಾಯಿಸುವಿಕೆಯಿಂದ ಮುಕ್ತವಾಗಿಲ್ಲ. 5 ಲಕ್ಷದಷ್ಟಿರುವ ಸಾಲಕ್ಕೆ ಸರ್ಕಾರ ನೀಡಿದ ಸಮ್ಮಿಶ್ರ ಸರ್ಕಾರದ ತುಟಿ ಅನುಕಂಪದ ತೋರಿಕೆಯ ಪರಿಹಾರವಾಗಿ ಸತ್ತವರ ಕುಟುಂಬಕ್ಕೆ ಒಂದು ಲಕ್ಷ ಹಣವೇನೋ ಬಂದಿದೆ. ಆದರೆ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿ ಜಗಜ್ಜಾಹಿರವಾಗಿ ಸಂದಾಯವಾದ ಈ ಹಣವು ಬಂದಷ್ಟೇ ಸ್ಪೀಡಾಗಿ ಸಾಲಗಾರರ ಕೈ ಸೇರಿದೆ.

ಉಳಿದದ್ದು ಬಿಕ್ಕಳಿಕೆ ಮಾತ್ರ

ಸರಸ್ವತಿಯ ಮೂರು ಹೆಣ್ಣು, ಒಂದು ಗಂಡು ಮಗು, ಬಂಧು ಬಳಗದೊಂದಿಗೆ ಭರ್ತಿ ಕುಟುಂಬವು ಮಾತ್ರ ಇನ್ನೂ ಸಾಲಗಾರರ ಸತಾಯಿಸುವಿಕೆಯಿಂದ ಮುಕ್ತವಾಗಿಲ್ಲ. 5 ಲಕ್ಷದಷ್ಟಿರುವ ಸಾಲಕ್ಕೆ ಸರ್ಕಾರ ನೀಡಿದ ಪರಿಹಾರವು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. ಮೇಲಾಗಿ ದುಡಿಯುವ ಯಜಮಾನನ್ನು ಕಳೆದುಕೊಂಡ ಕುಟುಂಬವು ಅಕ್ಷರಶಃ ಬದುಕುವ ಮಾರ್ಗವಿಲ್ಲದೆ ಬೀದಿ ಪಾಲಾಗಿದೆ. 4 ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಒದ್ದಾಡುತ್ತಿರುವ ಸರಸ್ವತಿಗೆ ಮುಂದೆ ತನ್ನ ದುಃಖವನ್ನು ವಿವರಿಸಲು ಸಾಧ್ಯವಾಗದೆ ಗಂಟಲು ತುಂಬಿ ಬಂದು ಬಿಕ್ಕಳಿಸುವುದು ಮಾತ್ರ ಸಾಧ್ಯವಾಯಿತು.

ಸಾಕ್ಷ್ಯಾಧಾರಗಳನ್ನು, ವಾದ ಪ್ರತಿ ವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳು ತುಂಬಾ ಸ್ಪಷ್ಟವಾಗಿ ರೈತ ನ್ಯಾಯಾಲಯದಲ್ಲಿ ನಿರ್ಣಯವನ್ನು ಮಂಡಿಸಿದರು. ಅವರು ಹೇಳಿದ್ದನೆಂದರೇ ತಾಂತ್ರಿಕವಾಗಿ ಈ ಸಾವುಗಳು ಆತ್ಮಹತ್ಯೆ ಎಂದು ಕರೆಸಿಕೊಂಡರೂ ತಾತ್ವಿಕವಾಗಿ ಅವು ಕೊಲೆಗಳಾಗಿವೆ.

ಕಟಕಟೆಗೆ ಸರ್ಕಾರ

ಇದಿಷ್ಟು ಸನ್ನಿವೇಶವು ಜೂನ್ 25,2007ರಂದು ಬೀದರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳು ಜಂಟಿಯಾಗಿ ನಡೆಸಿದ್ದ ರೈತ ನ್ಯಾಯಾಲಯದ ಕಟಕಟೆಯಲ್ಲಿ ಕಂಡು ಬಂದಿತು. ಎರಡು ತಿಂಗಳ ಅವಧಿಯಲ್ಲಿ ಬೀದರ್ ಜಿಲ್ಲೆಯೊಂದರಲ್ಲಿಯೇ ಸುಮಾರು 15 ರಿಂದ 20 ರಷ್ಟು ಜನ ರೈತರು ಅದರಲ್ಲೂ ವಿಶೇಷವಾಗಿ ಕಬ್ಬು ಬೆಳೆದ ಬೇಸಾಯಗಾರರು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಪ್ರಸಂಗವನ್ನು ಕುರಿತು ವಿವೇಚಿಸಲೆಂದು ಅಂದು ಸಭೆ ಸೇರಿಸಲಾಗಿತ್ತು.

ಅಸದಳ ತಲ್ಲಣ

ಆತ್ಮಹತ್ಯೆ ಮಾಡಿಕೊಂಡ ರೈತ ಮಡದಿ ಮಕ್ಕಳು, ವಯೋವೃದ್ಧ ಪಾಲಕರು ಖುದ್ದಾಗಿ ಬಂದು ರೈತ ನ್ಯಾಯಾಲಯದಲ್ಲಿ ತಮ್ಮ ಗೋಳನ್ನು ತೋಡಿಕೊಳ್ಳುತ್ತಿದ್ದು ಕರುಳು ಕಿತ್ತು ಬರುವಂತೆ ನೋವನ್ನು ಉಂಟು ಮಾಡಿತ್ತು. ಇದೇ ಸಾಲದ ಭಾರದಿಂದ ತತ್ತರಿಸಿ ಅಸುನೀಗಿರುವ ತರುಣನ ತಂದೆ ಸುಭಾಷ ಸಿರ್ಸೆ ಎಂಬುವ ಹಿರಿಯರು ಕಟಕಟೆಯಲ್ಲಿ ನಿಂತು ಮಡಿದ ಹರೆಯದ ಮಗನಿಗಾಗಿ ಹಲುಬುವ ಪರಿಗೆ ಧರೆಹತ್ತಿ ಉರಿಯುತ್ತಿರುವಂತೆ ಭಾಸವಾಗುತ್ತಿತ್ತು. ಮರ್ಯಾದೆಗೆ ಅಂಜಿ ಎಲ್ಲ ಆಘಾತಕಾರಿ ಆರ್ಥಿಕ ಅವಘಡಗಳ ಮಧ್ಯೆಯೂ ಬದುಕು ಮಾಡಿಕೊಂಡು ಬರುತ್ತಿದ್ದ ಕೆಳ, ಮಧ್ಯಮವರ್ಗಗಳ ರೈತರು ಪುಂಖಾನುಪುಂಖವಾಗಿ ಸಾವಿಗೆ ಶರಣಾಗುತ್ತಿರುವ ಪ್ರಸಂಗಗಳು ಜಿಲ್ಲೆಯಲ್ಲಿ ಅಸದಳ ತಲ್ಲಣ ಉಂಟು ಮಾಡುತ್ತಿವೆ. ಸತ್ತವರ ಕುಟುಂಬದ ಸದಸ್ಯರು ಒಂದೊಂದಾಗಿ ತಮ್ಮ ನೋವುಗಳನ್ನು ತೋಡಿಕೊಳ್ಳುತ್ತಿದ್ದರೇ, ನ್ಯಾಯಾಧೀಶರ ಸ್ಥಾನವನ್ನು ಅಲಂಕರಿಸಿದ್ದ. ರೈತ ಸಂಘದ ಮುಖಂಡ ಜಿ.ಸಿ.ಬಯ್ಯಾರೆಡ್ಡಿ, ಜನವಾದಿ ಸಂಘಟನೆ ಮುಖಂಡರಾದ ಮೀನಾಕ್ಷಿ ಬಾಳಿ, ಖ್ಯಾತ ವಕೀಲೆಯಾಗಿರುವ ಪದ್ಮಜಾ ಪೊದ್ದರ ಮುಂತಾದವರು ಸಭಿಕರೊಂದಿಗೆ ಮೂಕ ವಿಸ್ಮಿತರಾಗಿದ್ದರು.

ಭಯಂಕರ ಅನಾವೃಷ್ಟಿಗೆ ತುತ್ತಾಗಿ ಭೀಕರ ಬರಗಾಲವನ್ನು ಎದುರಿಸಿದಾಗಲೂ ಧೃತಿಗೆಡದ ಈ ಭಾಗದ ರೈತರು ಈ ಹೊತ್ತು ಹೊಲದ ತುಂಬ ಭರ್ತಿ ಬೆಳೆಯನ್ನು ಇಟ್ಟುಕೊಂಡಾಗಲೂ ಹೀಗೇಕೆ ಸಾವನಪ್ಪುತ್ತಿದ್ದಾರೆ? ಎಂಬ ಪ್ರಶ್ನೆಗೆ ರೈತರ ಪರವಾಗಿ ಸಾಕ್ಷಿ ನುಡಿದ ಹೋರಾಟಗಾರ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಯವರು ಉತ್ತರಗಳನ್ನು ಕೊಟ್ಟರು. ಬೀದರ್ ಜಿಲ್ಲೆಯ ರೈತರ ಮಧ್ಯೆ ನಿರಂತರ ಕೆಲಸ ಮಾಡಿ ಅಲ್ಲಿನ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿದ ಮಾನ್ಪಡೆಯವರು ಸರ್ಕಾರದ ಹೊಸ ಆರ್ಥಿಕ ನೀತಿ ಮತ್ತು ಮುಕ್ತ ಮಾರುಕಟ್ಟೆ ವ್ಯವಸ್ಥೆಯು ಸ್ಥಳೀಯ ರೈತರ ಬದುಕನ್ನು ಹಂತ, ಹಂತವಾಗಿ ಹೇಗೆ ನಾಶಮಾಡಿದೆ ಎಂಬುದನ್ನು ವಿವರಿಸಿದರು.



ನಾಟಕೀಯವಲ್ಲ, ಸರ್ಕಾರಿ ವಕೀಲ ನಿಜವಾಗಿ ತರಾಟೆಗೆ

ಸರ್ಕಾರದ ಪರವಾಗಿ ವಾದ ಮಾಡಿದ ವಕೀಲ ಪಾತ್ರಧಾರಿ ಸಮುದಾಯದ ಕೂಚಬಾಳ. ಈತನು ಸರ್ಕಾರ ನೀಡಿದ ಪರಿಹಾರಧನ, ಸಾಲ ಮನ್ನಾ, ಪ್ಯಾಕೇಜ್ ಪ್ರೋಗ್ರಾಂ ಇತ್ಯಾದಿಗಳನ್ನು ವಿವರಿಸುತ್ತಿರುವಾಗಲೇ, ಮೊಸಳೆ ಕಣ್ಣೀರು ಸುರಿಸುತ್ತಿರುವ ಸರ್ಕಾರದ ಆಷಾಢಭೂತಿತನವನ್ನು ಕಂಡಿರುವ ರೈತನೊಬ್ಬ ಸಭಿಕರ ಮಧ್ಯೆದಿಂದ ಎದ್ದು ಬಂದು ಸರ್ಕಾರಿ ವಕೀಲನನ್ನು ತರಾಟೆಗೆ ತೆಗೆದುಕೊಂಡನು. ರೈತನ ಸಿಟ್ಟು, ಅಸಹಾಯಕತೆ ಮತ್ತು ರೋಷಗಳು ಎಷ್ಟು ಪ್ರಖರವಾಗಿದ್ದವೆಂದರೆ ಕ್ಷಣ ಹೊತ್ತು ಸಭಿಕರೆಲ್ಲರೂ ಅದೊಂದು ಅಣಕು ನ್ಯಾಯಾಲಯ ಎಂಬುದು ಮರೆತಂತಾಗಿತ್ತು. ಅಲ್ಲಿ ಮಾತಾಡುತ್ತಿರುವ ಪ್ರತಿಯೊಂದು ಸಾಕ್ಷಿಗಳು ವಾಸ್ತವದ ರೈತ ಸಮುದಾಯ ಸಂಕಟಗಳಿಗೆ ಬಾಯಾಗಲು ಕಾತರಿಸುತ್ತಿದ್ದವು. ಜನವಾದಿ ಸಂಘಟನೆಯ ರಾಜ್ಯಾಧ್ಯಕ್ಷೆ ಕೆ.ನೀಲಾ ಅವರು


ಪುಟ 14 ಕ್ಕೆ

'ನಿಮಿಟ್ಜ್' ಸಾಮ್ರಾಜ್ಯಶಾಹಿ ದಾಹದ ನೌಕೆ

ಅಮೇರಿಕಾದ ನಿಮಿಟ್ಜ್ ಎಂಬ ಯುದ್ಧನೌಕೆ ಚೆನ್ನೈನ ರೇವು ಬಂದರಿನಲ್ಲಿ ನಾಲ್ಕು ದಿನ ಲಂಗರು ಹಾಕಿ ಹೊರಟು ನಿಂತಿದೆ. ಬೃಹದಾಕಾರವಾದ ಈ ನೌಕೆಯ ಒಟ್ಟು ವಿಸ್ತೀರ್ಣ ಸುಮಾರು 4.5 ಎಕರೆ. 1092 ಅಡಿ ಉದ್ದ, 252 ಅಡಿ ಅಗಲ 18 ಅಂತಸ್ತಿನ ಮಹಡಿಯಷ್ಟು ಎತ್ತರ ಹೊಂದಿದ್ದು, ಸುಮಾರು 6000 ಜನ ಸಿಬ್ಬಂದಿಯನ್ನು ಒಳಗೊಂಡಿದೆಯಂತೆ. ಇದರಲ್ಲಿ 65 ಯುದ್ಧ ವಿಮಾನಗಳು ಅವು ಏರಿಳಿಯುವ ರನ್‌ವೇ ಹೆಲಿಕ್ಯಾಪ್ಟರ್‌ಗಳು, ಹೆಲಿಪ್ಯಾಡ್, 53 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ, ತುರ್ತುನಿಗಾ ಘಟಕ, 6 ಜನ ವೈದ್ಯರಿದ್ದಾರಂತೆ. ಅಲ್ಲದೇ ನಿತ್ಯ 4 ಲಕ್ಷ ಗ್ಯಾಲನ್ ಶುದ್ಧ ಕುಡಿಯುವ ನೀರು ಉತ್ಪಾದನೆ, 18ರಿಂದ 20 ಸಾವಿರ ಮಂದಿಗೆ ಅಡುಗೆ, 70 ದಿನಗಳ ಆಹಾರ ದಾಸ್ತಾನು ಸಾಮರ್ಥ್ಯ ಒಳಗೊಂಡಿದೆಯಂತೆ. ಅನೇಕ ರೀತಿಯ ವಾದ, ವಿವಾದ ಹೊಗಳಿಕೆಗೆ ಕಾರಣವಾದ ಈ ಯುದ್ಧ ನೌಕೆ ಪರಮಾಣು ಅಸ್ತ್ರವನ್ನು ತನ್ನ ಒಡಲಲ್ಲಿ ಹೊಂದಿದೆಯೇ? ಎಂಬ ಪ್ರಶ್ನೆಗೆ ಧುತ್ತೆಂದು ಎದ್ದುನಿಂತಿದೆ. ಈ ಬಗ್ಗೆ ಪ್ರಶ್ನಿಸಿದರೆ ಯುದ್ಧ ನೌಕೆಯಲ್ಲಿ ಅಣ್ವಸ್ತ್ರ ಇದೆಯೋ ಅಥವಾ ಇಲ್ಲವೋ ಎಂಬ ಏನು ಹೇಳಲು ಸಾಧ್ಯವಿಲ್ಲ ಹಡಗಿನ ಮುಖ್ಯಸ್ಥರು ಏನಿದರ ಅರ್ಥ. ಇದ್ದರೆ ಇದೆ ಎಂದರು ಎನ್ನಬೇಕು. ಇಲ್ಲವಾದರೆ ಇಲ್ಲ ಅನ್ನಬೇಕು. ಮಳ್ಳಿ ಮಳ್ಳಿ ಮಂಚಕ್ಕೆ ಕಾಲೆಷ್ಟು ಅಂದರೆ ಮೂರು ಮತ್ತೊಂದು ಅಂದಳಂತೆ. ಹೌದು ಇಂಥದ್ದೊಂದು ಹಡಗು ಜಗತ್ತು ಸುತ್ತುವುದು ಎಂದರೆ ಅರ್ಥವೇನು?

ಈಗಾಗಲೇ ಅಮೇರಿಕಾ ತನ್ನ ಸಾಮ್ರಾಜ್ಯಶಾಹಿ ದಾಹದ ಕಂಬದ ಬಾಹುಗಳನ್ನು ಪಕ್ಕದ ರಾಷ್ಟ್ರಗಳಾದ ಇರಾಕ್, ಇರಾನ್ ಮತ್ತು ಆಫಘಾನಿಸ್ತಾನದ ಮೇಲೆ ಚಾಚಿದೆ. ಅಮೇರಿಕಾದ ಅಣತಿಯನ್ನು ಪಾಲಿಸದಿರುವುದಕ್ಕಾಗಿ ಈ ದೇಶಗಳನ್ನು ಹೇಗೆ ನಿರ್ದಯವಾಗಿ ಪುಟಿಗುಟ್ಟಲಾಯಿತು ಎಂಬುದನ್ನು ಇಡೀ ಜಗತ್ತು ನೋಡಿದೆ.

ತಮಿಳುನಾಡಿನ ರೇವು ಬಂದರಿನ ಮುಂದೆ ಎಡಪಕ್ಷಗಳಾದ ಸಿಪಿಎಂ, ಸಿಪಿಐ ತಮ್ಮ ವ್ಯಾಪಕ ವಿರೋಧವನ್ನು ವ್ಯಕ್ತಪಡಿಸಿ, ಸಾಮ್ರಾಜ್ಯಶಾಹಿ ದೈತ್ಯ ಜಾರ್ಜ್‌ಬುಶ್‌ನ ಪ್ರತಿಕೃತಿ ದಹಿಸುವ ಮೂಲಕ ತಮ್ಮ ಪ್ರತಿಭಟನೆಯ ಕುಗನ್ನು ಹಾಕಿವೆ. ಇದರಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು ಭಾಗವಹಿಸುವುದರ ಮೂಲಕ ಅಮೇರಿಕಾದ ಈ ಸಾಮ್ರಾಜ್ಯಶಾಹೀ ನೀತಿಗೆ ತಮ್ಮ ವಿರೋಧ ವ್ಯಕ್ತಪಡಿಸಿವೆ.



ಮಾಧ್ಯಮಗಳ ಬಣ್ಣ ಬಯಲು: ಈ ನಿಮಿಟ್ಜ್ ಎಂಬ ಯುದ್ಧ ನೌಕೆ ಇಲ್ಲಿ ಯಾಕೆ ಏತಕ್ಕೆ ಬಂದಿದೆ ಎನ್ನುವ ವಸ್ತುನಿಷ್ಠ ವರದಿ ಕೊಡುವುದನ್ನು ಬಿಟ್ಟು ತಮ್ಮ ಹಿಂದಿನ ಚಾಳಿಯಾದ ಸಾಮ್ರಾಜ್ಯಶಾಹೀ ದೊರೆಗಳ ಬೂಟು ನೆಕ್ಕುವ ಕೆಲಸವನ್ನು ತುಂಬಾ ಚೆನ್ನಾಗಿ ಮಾಡಿವೆ.

ವಿಜಯ ಕರ್ನಾಟಕವೆಂಬ ಪತ್ರಿಕೆ ಈ ಹಡಗು ಬಂದಿದ್ದೇ ನಮ್ಮ ದೇಶದ ದೊಡ್ಡ ಭಾಗ್ಯವೇನೋ ಎನ್ನುವ ಹಾಗೆ "ಮಹಾ ಬೆರಗು, ಬೆಡಗು ಈ ಹಡಗು" ಎಂದು ಸಾಮ್ರಾಜ್ಯಶಾಹಿ ಪ್ರೇಮವನ್ನು ಚೆನ್ನಾಗಿ ಮೆರೆದಿದೆ.

■ ಪರಶುರಾಮ ಬೋನೇರ

ಶರತ್‌ಚಂದ್ರ

ಬ್ಲೇರ್ ಹೋದ, ಬ್ರೌನ್ ಬಂದ 'ಆದರೆ ನನ್ನ ಮಗ ಬರಲಿಲ್ಲ !'


ಬ್ಲೇರ್ ಬ್ರಿಟನ್ ಪ್ರಧಾನಿ ಪಟ್ಟ ಬಿಟ್ಟು, ಬ್ರೌನ್ ಪ್ರಧಾನಿಯಾಗಿದ್ದಾರೆ. ಬ್ರೌನ್ ಅಧಿಕಾರ ವಹಿಸಿಕೊಂಡು ಪ್ರಧಾನಿ ನಿವಾಸಕ್ಕೆ (10 ಡೌನಿಂಗ್ ಬೀದಿ ಎಂದು ಪ್ರಸಿದ್ಧವಾದದ್ದು) ಬರುವಾಗ ಭಾರೀ ಯುದ್ಧ-ವಿರೋಧಿ ಪ್ರದರ್ಶನ ಎದುರಿಸಬೇಕಾಯಿತು. ಪ್ರದರ್ಶನಕಾರರು ಬ್ಲೇರ್ ನಿವಾಸ ಬಿಡುತ್ತಿದ್ದಂತೆ ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು. ಹಲವು ಬ್ರಿಟಿಷ್ ಸೈನಿಕರ ತಾಯಂದಿರು, ಸಂಬಂಧಿಕರು ದೊಡ್ಡ ಸಂಖ್ಯೆಯಲ್ಲಿ ಇದ್ದ ಪ್ರತಿಭಟನೆಯಲ್ಲಿ 'ಬ್ಲೇರ್ ಹೋದ-ಬ್ರೌನ್ ಬಂದ-ಆದರೆ ನನ್ನ ಮಗ ಬರಲಿಲ್ಲ!' ಎಂಬ ಘೋಷಣೆಗಳು ಕೇಳಿ ಬಂದವು. ಬ್ರೌನ್ ಸಹ ಲೇಬರ್ ಪಕ್ಷವನ್ನು ಇನ್ನಷ್ಟು ಜನರಿಂದ ದೂರ ಮತ್ತು ಬಲಪಂಥದತ್ತ ಒಯ್ದ ಬ್ಲೇರ್ ರ 'ಹೊಸ ಲೇಬರ್' ಎಂಬ ಬಣಕ್ಕೆ ಸೇರಿದವರು. ಬ್ರೌನ್ ಸರಕಾರದ ಮೇಲೆ ಇರಾಕ್ ಯುದ್ಧ ಮತ್ತು ಹಲವು ಜನ-ವಿರೋಧಿ ಬ್ಲೇರ್ ಅವಧಿಯ ನೀತಿಗಳನ್ನು ಬದಲಿಸಲು ಭಾರೀ ಒತ್ತಡ ಇದೆ. ಬ್ರೌನ್ ಸರಕಾರ ಇದಕ್ಕೆ ಯಾವ ರೀತಿ ಸ್ಪಂದಿಸುತ್ತದೆ ಎಂಬುದರ ಮೇಲೆ ಬ್ರಿಟನ್ ರಾಜಕೀಯ ಬೆಳವಣಿಗೆ ಅವಲಂಬಿಸಿದೆ. ಬ್ರಿಟನ್ ರಾಜಕೀಯ ಭಾರೀ ಬದಲಾವಣೆಗಳತ್ತ ಹೋಗುತ್ತಿದೆ ಎಂಬುದಂತೂ ಸ್ಪಷ್ಟ.

ಫ್ರಾನ್ಸ್‌ನಲ್ಲಿ ಸಾರ್ಕೊಝಿ ಪಕ್ಷಕ್ಕೆ ಬಹುಮತ

ಫ್ರಾನ್ಸ್ ನಲ್ಲಿ ಅಧ್ಯಕ್ಷೀಯ ಚುನಾವಣೆಗಳ ನಂತರ ನಡೆದ ಪಾರ್ಲಿಮೆಂಟ್ ಚುನಾವಣೆಗಳಲ್ಲೂ ಬಲಪಂಥೀಯ ಪಕ್ಷ ಯು.ಎಂ.ಪಿ. ಸ್ಪಷ್ಟ ಬಹುಮತ ಪಡೆದಿದೆ. ಆದರೆ ಹಲವರು ಅಂದುಕೊಂಡಂತೆ ಸಾರ್ಕೊಝಿ ಪಕ್ಷಕ್ಕೆ ಭಾರೀ ಬಹುಮತ ಬರಲಿಲ್ಲ. 577 ಸದಸ್ಯರಿರುವ ಪಾರ್ಲಿಮೆಂಟಿನಲ್ಲಿ ಯು.ಎಂ.ಪಿ. ಕೂಟಕ್ಕೆ 470 ಸೀಟು ಸಿಗಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಬಂದಿದ್ದು 340. ಯು.ಎಂ.ಪಿ. ಕಳೆದ ಚುನಾವಣೆಗಿಂತ 45 ಸೀಟು ಕಡಿಮೆ ಪಡೆಯಿತು. ಸೋಶಲಿಸ್ಟ್ ಪಕ್ಷದ ಸದಸ್ಯರ ಸಂಖ್ಯೆ 149 ರಿಂದ 185 ಕ್ಕೆ ಏರಿತು. ಕಮ್ಯುನಿಸ್ಟರು ಮತ್ತು ಗ್ರೀನ್ ಸೇರಿ ವಿರೋಧ ಪಕ್ಷಗಳ ಬಲ 232 ಇದೆ. ಸಾರ್ಕೋಝಿ ಬಲಗೈ ಎನ್ನಲಾದ ಅಲನ್ ಜುಪ್ಪೆ ಸೋಲು ಆಳುವ ಕೂಟಕ್ಕೆ ಶಾಕ್ ಕೊಟ್ಟಿದೆ. ಸಾರ್ಕೊಝಿ ಅಧಿಕಾರ ವಹಿಸಿಕೊಂಡ ಕೂಡಲೇ ತರಾತುರಿಯಲ್ಲಿ ತೆಗೆದುಕೊಂಡ ಕ್ರಮಗಳು ಜನರಿಗೆ ಕಿರಿಕಿರಿ ತಂದಿವೆ. ಶ್ರೀಮಂತರು ಕೊಡಬೇಕಾದ ಆದಾಯ ಮತ್ತಿತರ ತೆರಿಗೆಯಲ್ಲಿ ಕಡಿತ, 'ಸಾಮಾಜಿಕ-ವ್ಯಾಟ್' ಹೆಸರಲ್ಲಿ ಬಡವರು ಕೊಳ್ಳುವ ವಸ್ತುಗಳಿಗೆ ಹೆಚ್ಚಿನ ತೆರಿಗೆಯ ಕ್ರಮಗಳು ಇದಕ್ಕೆ ಕಾರಣ ಎನ್ನಲಾಗಿದೆ. ಈಗಲೇ ಸಾರ್ಕೊಝಿ ತೆಗೆದುಕೊಳ್ಳ ಬೇಕಾಗಿರುವ ಬಿಗಿ ಬಲಪಂಥೀಯ ಕ್ರಮಗಳಿಗೆ ಕಾರ್ಮಿಕರು ಮತ್ತು ದುಡಿಯುವ ಜನರಿಂದ ಬರಬಹುದಾದ ತೀವ್ರ ಪ್ರತಿರೋಧದ ಮುನ್ಸೂಚನೆ ಇದು ಎನ್ನಲಾಗಿದೆ.

'ಜೆರೂಸಲೆಂ ಇನಿಶಿಯೇಟಿವ್'

ಈ ಜೂನ್ ಮೊದಲ ವಾರದಲ್ಲಿ 'ಆರು ದಿನಗಳ ಯುಧ್ಧ' ಎಂದು ಕರೆಯಲಾಗುವ ಇಸ್ರೇಲ್-ಅರಬ್ ಯುದ್ಧದ 40ನೇ ವಾರ್ಷಿಕ ಬಂದಿತ್ತು. 1967 ರಲ್ಲಿ ನಡೆದ ಇಸ್ರೇಲ್ ದಾಳಿಯ ನಂತರ ಜೆರೂಸಲೆಮನ್ನು ಇಸ್ರೇಲ್ ವಶಪಡಿಸಿಕೊಂಡಿತ್ತು. ಪ್ಯಾಲೆಸ್ಟೈನ್ ಸಮಸ್ಯೆ ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ - ಅದರತ್ತ ಅಂತರ್‌ರಾಷ್ಟ್ರೀಯ ಗಮನ ಸೆಳೆಯಲು, ಜಗತ್ತಿನ ಜನತೆಯ ಮಧ್ಯಪ್ರವೇಶಕ್ಕೆ ಅನುವು ಮಾಡಿಕೊಡಲು - ಇಸ್ರೇಲಿನ ಕಮ್ಯುನಿಸ್ಟ್ ಪಕ್ಷ ಮತ್ತು ಪ್ಯಾಲೆಸ್ಟೈನ್ ಪೀಪಲ್ಸ್ ಪಾರ್ಟಿಗಳು 'ಜೆರೂಸಲೆಂ ಇನಿಶಿಯೇಟಿವ್' ಎಂಬ ಅಂತರ್‌ರಾಷ್ಟ್ರೀಯ ಕಾರ್ಯಕ್ರಮ ಆಯೋಜಿಸಿದ್ದವು. ಇದರಲ್ಲಿ 12 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. 'ನ್ಯಾಯಯುತ ಶಾಂತಿ' ಎಂಬ ಹೇಳಿಕೆಯನ್ನು ಹೊರಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಭಾರತದ ಪರವಾಗಿ ಸೀತಾರಾಮ್ ಯೆಚೂರಿ (ಸಿಪಿಐ-ಎಂ ಪಾಲಿಟ್ ಬ್ಯೂರೋ ಸದಸ್ಯ), ವಿ.ಜೆ.ಕೆ.ನಾಯರ್ (ಉಪಾಧ್ಯಕ್ಷ, ಸಿಐಟಿಯು), ರಾಜೀವ್ ರಂಜನ್ (ಶಾಂತಿ ಸಂಘಟನೆಯಾದ ಎಐಪಿಎಸ್‌ಓ ಮಹಾ ಕಾರ್ಯದರ್ಶಿ) ಮತ್ತು ಆರ್‌ಜೆಡಿ ಪ್ರತಿನಿಧಿ ಭಾಗವಹಿಸಿದ್ದರು. ಅಮೆರಿಕ, ಬ್ರಿಟನ್, ಇಟಲಿ, ಪೋರ್ಚುಗಲ್, ಗ್ರೀಸ್, ಫ್ರಾನ್ಸ್ ಕಮ್ಯುನಿಸ್ಟ್ ಪಕ್ಷಗಳು; ನಾರ್ವೆ ಸೋಶಲಿಸ್ಟ್, ಡೆನ್ಮಾರ್ಕ್ ರೆಡ್-ಗ್ರೀನ್ ಕೂಟ, ಜರ್ಮನಿಯ ಎಡ ಪಕ್ಷ, ಸೈಪ್ರಸ್ ನ ಅಕೇಲ್ ಮುಂತಾದ ರಾಜಕೀಯ ಸಂಘಟನೆಗಳು; ಪೋರ್ಚುಗಲ್, ಗ್ರೀಸ್ ಮಹಿಳಾ ಚಳುವಳಿಗಳು; ಯುರೋಪಿಯನ್ ಪಾರ್ಲಿಮೆಂಟ್ - ಇವೆಲ್ಲದರ 27 ಪ್ರತಿನಿಧಿಗಳೂ ಭಾಗವಹಿಸಿದ್ದರು. ಇವರಲ್ಲಿ ಐವರು ಪಾರ್ಲಿಮೆಂಟ್ ಸದಸ್ಯರು ಇದ್ದರು.



ಆಫ್ರಿಕದಲ್ಲಿ ಅಮೆರಿಕನ್ ಮಿಲಿಟರಿ ನೆಲೆಗೆ ನಿರಾಕರಣೆ

ಆಫ್ರಿಕದಲ್ಲಿ ಯುರೋಪು, ಏಶ್ಯಾಗಳಂತೆ ಮಿಲಿಟರಿ ನೆಲೆಗಳನ್ನು ನಿರ್ಮಿಸಿ ಭಾರೀ ಸಂಖ್ಯೆಯಲ್ಲಿ ಸೈನ್ಯ ಇರಿಸುವ ಅಧ್ಯಕ್ಷ ಬುಶ್ ಯೋಜನೆಗೆ ದೊಡ್ಡ ಅಡ್ಡಿ ಬಂದಿದೆ. 'ಆಫ್ರಿಕಾಮ್' ಎಂದು ಕರೆಯಲಾಗುವ ಈ ಹೊಸ ಮಿಲಿಟರಿ ಕಮಾಂಡ್ ಗೆ ಯಾವುದೇ ರೀತಿಯಲ್ಲಿ ಸವಲತ್ತುಗಳನ್ನು (ಜಾಗ, ಅನುಮತಿ ಇತ್ಯಾದಿ) ಕೊಡಲು ಆಫ್ರಿಕದ ದೇಶದ ಸರಕಾರಗಳು ನಿರಾಕರಿಸಿವೆ. ಅಮೆರಿಕನ್ ಸರಕಾರದ ಉನ್ನತ ಅಧಿಕಾರಿಗಳ ನಿಯೋಗವೊಂದು ಅಲ್ಜೀರಿಯ, ಮೊರೊಕ್ಕೊ, ಲಿಬ್ಯಾ, ಈಜಿಪ್ಟ್ ಮುಂತಾದ ದೇಶಗಳಲ್ಲದೆ ಆಫ್ರಿಕನ್ ಯೂನಿಯನ್ ಗೂ ಭೇಟಿ ನೀಡಿತು. ಆದರೆ ಎಲ್ಲೆಡೆ ಸವಲತ್ತುಗಳನ್ನು ಕೊಡಲು ಮಾತ್ರವಲ್ಲ, ಮಿಲಿಟರಿ ನೆಲೆಯ ಅಗತ್ಯ ವನ್ನೇ ನಿರಾಕರಿಸಿದವು. ಆಫ್ರಿಕಾದ ಭದ್ರತೆಗೆ, ಭಯೋತ್ಪಾದನೆಗೆ ಇದು ಅಗತ್ಯ ಎಂಬ ಅಮೆರಿಕನ್ ಸರಕಾರದ ಮಾಮೂಲಿ ಬೊಗಳೆಯನ್ನು ಅವರು ತಿರಸ್ಕರಿಸಿದರು. ಇದು ಪ್ಯಾಂಟಗನ್ (ಅಮೆರಿಕದ ರಕ್ಷಣಾ ಇಲಾಖೆ) ಯೋಜನೆಯನ್ನು ಬುಡಮೇಲೆ ಮಾಡಿದ್ದು ಮಾತ್ರವಲ್ಲ, ಮುಖಭಂಗವೂ ಆಗಿದೆ. ಅಮೆರಿಕದ ಮಿಲಿಟರಿ ಮಧ್ಯಪ್ರವೇಶ ಮಾತ್ರವಲ್ಲ, ಅಮೆರಿಕದ ನೆಲೆಗಳ ಮೇಲೆ 'ಭಯೋತ್ಪಾದಕರ ದಾಳಿ' - ಈ ಎಲ್ಲಾ ಆತಂಕಗಳು ಆಫ್ರಿಕನ್ನರ ಈ ದೃಢ ನಿರ್ಧಾರಕ್ಕೆ ಕಾರಣ ಎನ್ನಲಾಗಿದೆ.

'ಕ್ರಿಸ್ತನ ನಾಡಿನಲ್ಲಿ ದಿನಾ ಜನರನ್ನು ಗಲ್ಲಿಗೇರಿಸ್ತಾರೆ'

ಇಸ್ರೇಲ್-ಪ್ಯಾಲೆಸ್ಟೈನ್ ನಲ್ಲಿ ನಮಗೆ ಕಳೆದ ಒಂದು ವಾರದಲ್ಲಿ ಸಾಮ್ರಾಜ್ಯಶಾಹಿಯ ಕ್ರೂರ ಧೋರಣೆ ಮತ್ತು ಇಬ್ಬಗೆ ನೀತಿಯ ಜಾಗತಿಕ ರೂಪದ ದರ್ಶನವಾಯಿತು. 1918ರಲ್ಲಿ ಆಗಿನ ಸಾಮ್ರಾಜ್ಯಶಾಹಿ ಶಕ್ತಿ ಬ್ರಿಟನ್ ಆಕ್ರಮಿಸಿಕೊಂಡ ಪ್ಯಾಲೆಸ್ಟೈನ್, ಇಂದು ಅಮೆರಿಕ ಮತ್ತು ಇತರ ಸಾಮ್ರಾಜ್ಯಶಾಹಿ ಶಕ್ತಿಗಳ ವಶದಲ್ಲಿ ಇದೆ. ಮೂರು ಪ್ರಮುಖ ಧರ್ಮಗಳಿಗೂ (ಕ್ರಿಶ್ಚಿಯನ್, ಮುಸ್ಲಿಮ್, ಜ್ಯೂ) ಪವಿತ್ರವಾದ ಒಂದು ಸ್ಥಳ ಈ ಭೂಮಿಯ ಮೇಲೆ ಇದ್ದರೆ ಅದು ಜೆರೂಸಲೆಮ್. ಅದೇ ರೀತಿ ಇಂದು ಭೂಮಿಯ ಮೇಲೆ ಧಾರ್ಮಿಕ ಕಲಹಗಳಿಂದ ಜನ ನಲುಗಿ ಹೋದ ಸ್ಥಳ ಒಂದು ಇದ್ದರೆ ಅದು ಜೆರೂಸಲೆಮ್. ಇಲ್ಲಿ ಹಿಂದೊಂದು ದಿನ ಕ್ರಿಸ್ತನನ್ನು ಗಲ್ಲಿಗೇರಿಸ ಲಾಗಿತ್ತಂತೆ. ಆದರೆ ಇಂದು ಇಲ್ಲಿ ದಿನಾ ಜನರನ್ನು ಗಲ್ಲಿಗೇರಿಸಲಾಗುತ್ತಿದೆ. ಪ್ಯಾಲೆಸ್ಟೈನ್ ಜನ ಜೆರೂಸಲೆಮ್ ನಲ್ಲಿ ಒಂದು ದಿನ ಶಾಂತಿಯುತ ಈಸ್ಟರ್ ಹಬ್ಬ ಮಾಡಬೇಕಾದರೆ, ಜಗತ್ತಿನ ಜನತೆ (ಆಳುವವರು ಮಾತ್ರವಲ್ಲ) ಮಧ್ಯಪ್ರವೇಶ ಮಾಡಿದರೆ ಮಾತ್ರ ಸಾಧ್ಯ.

- ವಿ ಜೆ ಕೆ ನಾಯರ್

ನೇಗಿಲ ಯೋಗಿ ನೇಣಿಗೆ ....

ಪುಟ 13 ರಿಂದ

ಕೃಷಿ ಕೃತ್ಯ ಕುಸಿದು ಬದುಕೆಲ್ಲವೂ ದಿವಾಳಿ ಎದ್ದ ಪ್ರದೇಶದಲ್ಲಿ ಸಾಮಾನ್ಯರ ಮಹಿಳೆಯರ ಮೇಲಾಗುತ್ತಿರುವ ಕ್ರೌರ್ಯ, ದಬ್ಬಾಳಿಕೆಯನ್ನು ಸಾಕ್ಷ್ಯಾಧಾರಗಳ ಸಹಿತ ವಿವರಿಸಿದರು. ಆರ್ಥಿಕ ಮೂಲಗಳು ದಿಕ್ಕುತಪ್ಪಿರುವ ನೆಲದಲ್ಲಿ ಮಹಿಳೆಯರು ವ್ಯಾಪಾರಿ ಸರಕಾಗಿ ಬಿಕರಿಯಾಗುತ್ತಾರೆ. ಮನೆಯ ಗಂಡಸರು ಸಾವಿಗೆ ಶರಣಾದರೆ ಸ್ತ್ರೀಯರು ತಮ್ಮನ್ನು ಮಾರಿ ಕೊಂಡಾದರೂ ಮಕ್ಕಳನ್ನು ಬದುಕಿಸುವ ಸ್ಥಿತಿ ನಿರ್ಮಾಣವಾಗುತ್ತಿದೆ. ಅಷ್ಟಕ್ಕೂ ಜಮೀನ್ದಾರಿ ಕಪಿ ಮುಷ್ಠಿಗಳು ಬಲವಾಗಿರುವ ಬೀದರದಂಥ ಭಾಗದಲ್ಲಿ, ಬಾಲ್ಯವಿವಾಹ, ವರದಕ್ಷಿಣೆ ಕಿರುಕುಳ, ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುತ್ತಿವೆ ಎಂದು ಸಭಿಕರನ್ನು ವಾಸ್ತವದ ಕಡೆ ಕರೆದುಕೊಂಡು ಹೋದರು.

ರೈತ ನ್ಯಾಯಾಲಯದ ತೀರ್ಮಾನ

ಸಾಕ್ಷ್ಯಾಧಾರಗಳನ್ನು, ವಾದ ಪ್ರತಿ ವಾದಗಳನ್ನು ಆಲಿಸಿದ ನ್ಯಾಯಮೂರ್ತಿ ಗಳು ತುಂಬಾ ಸ್ಪಷ್ಟವಾಗಿ ರೈತ ನ್ಯಾಯಾಲಯದಲ್ಲಿ ನಿರ್ಣಯವನ್ನು ಮಂಡಿಸಿದರು. ಅವರು ಹೇಳಿದ್ದೇನೆಂದರೇ ತಾಂತ್ರಿಕವಾಗಿ ಈ ಸಾವುಗಳು ಆತ್ಮಹತ್ಯೆ ಎಂದು ಕರೆಸಿಕೊಂಡರೂ ತಾತ್ವಿಕವಾಗಿ ಅವು ಕೊಲೆಗಳಾಗಿವೆ. ಸಾವು ಅನಿವಾರ್ಯವಾಗುತ್ತಿರುವ ಪರಿಸ್ಥಿತಿಯನ್ನು ನಿರ್ಮಿಸುತ್ತಿರುವ ಸರ್ಕಾರದ ಧೋರಣೆ ಬದಲಾಗಬೇಕು. ರೈತ ವಿರೋಧಿ, ಕೃಷಿಕೂಲಿಕಾರರ ವಿರೋಧಿ ಮಾರುಕಟ್ಟೆ ನೀತಿಗಳನ್ನು ಸಮಗ್ರವಾಗಿ ಬದಲಿಸಬೇಕು. ಮುಕ್ತ ಮಾರುಕಟ್ಟೆಗೆ ಕಡಿವಾಣ ಹಾಕಬೇಕು. ತಕ್ಷಣವೇ ನೀಡಬೇಕಾದ ಪರಿಹಾರವಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ 5 ಲಕ್ಷ ಪರಿಹಾರ ಧನ ಕೊಡಬೇಕು. ಅವರ ಕುಟುಂಬಕ್ಕೆ ಒಂದು ಸರ್ಕಾರಿ ನೌಕರಿ ಕೊಡಬೇಕು. ಹಾಗೂ ಸಂಪೂರ್ಣ ಸಾಲ ಮನ್ನಾ ಮಾಡಬೇಕಲ್ಲದೆ ಹೆಕ್ಟೇರಿಗೆ 25 ಸಾವಿರ ರೂಪಾಯಿ ಪರಿಹಾರ ಧನದ ಬದಲಾಗಿ ಎಕರೆಗೆ 25 ಸಾವಿರ ರೂಪಾಯಿ ಕೊಡ ಮಾಡಬೇಕು. ಈ ಎಲ್ಲ ಸೌಲಭ್ಯಗಳನ್ನು ಸರ್ಕಾರವು ತಕ್ಷಣವೇ ರೈತರಿಗೆ ನೀಡಬೇಕು. ಇಷ್ಟನ್ನು ಮಾಡಲು ಸಾಧ್ಯವಾಗದಿದ್ದರೆ ಸಮ್ಮಿಶ್ರ ಸರ್ಕಾರವು ಅಧಿಕಾರವನ್ನು ಬಿಟ್ಟು ಬಿಡತಕ್ಕದ್ದು. ಜನತೆಯಾದರೂ ಇಂಥ ರೈತ ವಿರೋಧಿ ಸರ್ಕಾರಗಳನ್ನು ತಿರಸ್ಕರಿಸಿ ಆಳುವವರಿಗೆ ಬುದ್ಧಿ ಕಲಿಸತಕ್ಕದ್ದು ಎಂದು ನಿರ್ಣಯ ಮಂಡಿಸಿದರು. ಸಾಂಕೇತಿಕವಾಗಿ ನಡೆದ ಸದರಿ ರೈತ ನ್ಯಾಯಾಲಯವು ತಾತ್ವಿಕ ನಿರ್ಣಯವನ್ನು ಮಂಡಿಸಿ ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಎತ್ತಿ ಹಿಡಿಯಿತು.

ಧರಿನಾಡು ಬೀದರ್‌ನಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮ್ಮೇಳನದ ಸಂಭ್ರಮ

ಸ್ವಾಗತ ಸಮಿತಿ ರಚನೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಭಾರತ ಮಹಿಳಾ ಲೋಕದಲ್ಲೊಂದು ವಿಶ್ವಾಸದ ಹೆಜ್ಜೆಯಾಗಿ ಪರಿಣಮಿಸಿದೆ. ದೇಶದಾದ್ಯಂತ ಒಟ್ಟು ಇಪ್ಪತ್ತೆರಡು ರಾಜ್ಯಗಳಲ್ಲಿ ಸಮಿತಿಗಳನ್ನು ಹೊಂದಿದ್ದು ಸದರಿ ವರ್ಷಕ್ಕೆ 1 ಕೋಟಿ 68 ಸಾವಿರದಷ್ಟು ಸದಸ್ಯತ್ವ ಪಡೆದುಕೊಂಡಿದೆ. ಕಳೆದ ಇಪ್ಪತ್ತೈದು ವರ್ಷಗಳಿಂದ ಮಹಿಳಾಪರ ಹೋರಾಟಗಳನ್ನು ಅಣಿನೆರೆಸುತ್ತಾ ಸ್ತ್ರೀಲೋಕದಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ನಿರಂತರ ಸಂಘರ್ಷ ಮತ್ತು ನೀತಿ ನಿರೂಪಣೆಯಲ್ಲಿ ಪ್ರಧಾನ ಪಾತ್ರ ವಹಿಸುವ ಮೂಲಕ ಸಂಘಟನೆಯು ದೇಶದಲ್ಲಿ ಮಹಿಳೆಯರಿಗಾಗಿ ಹಲವು ಕಾನೂನುಗಳನ್ನು ಜಾರಿಗೊಳಿಸಿದೆ. ಆಸ್ತಿ ಹಕ್ಕು, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಲೈಂಗಿಕ ಕಿರುಕುಳ ತಡೆ ಸಮಿತಿಗಳ ರಚನೆ, ಅಲ್ಪಸಂಖ್ಯಾತ ಮಹಿಳೆಯರಿಗಾಗಿ ಪರಿಷ್ಕೃತ 'ತಲಾಖ್ ನಾಮಾ' ರಚನೆ ಇತ್ಯಾದಿ ಸಾಧನೆಗಳನ್ನು ಸಂಘಟನೆ ಮಾಡಿದೆ. ದೇಶದ ಯಾವುದೇ ಮೂಲೆಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ, ಶೋಷಣೆಗಳು ಸಂಭವಿಸಿದಾಗ ಸಂಘಟನೆ ಅವುಗಳ ವಿರುದ್ಧ ಧ್ವನಿಯತ್ತಿ ವ್ಯಾಪಕ ಹೋರಾಟ, ಧರಣಿ,



ಸ್ವಾಗತ ಸಮಿತಿ ರಚನೆಯ ಸಭೆಯಲ್ಲಿ ಪ್ರಮುಖರು

ಮುಷ್ಕರವೂ ನಡೆಸಿದೆ. ಒಟ್ಟು ಮಹಿಳೆಯರನ್ನು ಏಕಘಟಕವಾಗಿ ಪರಿಗಣಿಸುವ ಜನವಾದಿಯ ಎಲ್ಲ ವರ್ಗದ ಮಹಿಳೆಯರ ನಿರ್ದಿಷ್ಟ ಸಮಸ್ಯೆಗಳನ್ನು ಗುರುತಿಸಿ ಆಯಾ ಮಟ್ಟದಲ್ಲಿ ಹೋರಾಟಗಳನ್ನು ರೂಪಿಸಿದೆ.

ಜನವಾದಿ ಮಹಿಳಾ ಸಂಘಟನೆಯು ಪ್ರಜಾತಾಂತ್ರಿಕ ನೆಲೆಯಲ್ಲಿ ತನ್ನ ಕಾರ್ಯವೈಖರಿಯನ್ನು ರೂಪಿಸಿಕೊಂಡಿದೆ. ಹೀಗಾಗಿ ಅದು ಪ್ರಜಾಸತ್ತಾತ್ಮಕವಾಗಿ ಪ್ರತಿ ಮೂರು ವರ್ಷಗಳಿಗೊಮ್ಮೆ ಅತ್ಯಂತ ಸಣ್ಣ ಘಟಕಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ ಸಮ್ಮೇಳನಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಸಮ್ಮೇಳನಗಳಲ್ಲಿ ಹೊಸ ಸಮಿತಿಗಳನ್ನು ಆಯ್ಕೆ ಮಾಡಿಕೊಂಡು ಮತ್ತೆ ಹೊಸ ಹುರುಪಿನಿಂದ ಕ್ಷೇತ್ರಕ್ಕಿಳಿದು ಕೆಲಸ ಮಾಡುತ್ತದೆ. ಕರ್ನಾಟಕ ರಾಜ್ಯ ಸಮಿತಿಯು ಸಮ್ಮೇಳನದಿಂದ ಸಮ್ಮೇಳನಕ್ಕೆ ನಿರ್ದಿಷ್ಟ ಗುರಿ ಮತ್ತು ಸ್ಪಷ್ಟ ಕಣ್ಣೋಟವಿಟ್ಟುಕೊಂಡು ಪ್ರವರ್ಧಮಾನಕ್ಕೆ ಬರುತ್ತಿದೆ. ತನ್ನ ಕಾಲು ಶತಮಾನದ ಪಯಣದಲ್ಲಿ ಕರ್ನಾಟಕವೂ ಮಹಿಳಾ ಪರ ಚಳುವಳಿಗಳಲ್ಲಿ ವಿಶಿಷ್ಟ ಛಾಪೊಂದನ್ನು ಮೂಡಿಸಿದ್ದು ಸಂಘಟನೆಯ ಕೀರ್ತಿಯನ್ನು ನಾಡಿನ ಮೂಲೆ ಮೂಲೆಗೆ ತೆಗೆದುಕೊಂಡು ಹೋಗುತ್ತಿದೆ. ರಾಜ್ಯದ ಅತ್ಯಂತ ಕೊನೆಯ ಮಹಿಳೆಯರನ್ನು ತಲುಪಬೇಕೆಂಬ ಆಶಯವನ್ನು ಹೊಂದಿರುವ ಜನವಾದಿ ರಾಜ್ಯ ಸಮಿತಿಯು ಈ ಕಾರಣವಾಗಿಯೇ ಆರನೇ ರಾಜ್ಯ ಸಮ್ಮೇಳನವನ್ನು ಬೀದರ್ ಜಿಲ್ಲೆಯಲ್ಲಿ ನಡೆಸಲು ನಿರ್ಧರಿಸಿದೆ.

'ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ' 'ಮನದ ಸೂತಕವ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ? ಎಂದು 900 ವರ್ಷಗಳ ಹಿಂದೆಯೇ ಲಿಂಗ ತಾರತಮ್ಯದ ವಿರುದ್ಧ ಸಮಗ್ರ ದಂಗೆ ಎದ್ದ ಬೀದರ ನಾಡಿನಲ್ಲಿ 6ನೇ ರಾಜ್ಯ ಸಮ್ಮೇಳನ ನಡೆಸುವ ಮೂಲಕ ಮತ್ತೆ ನಾಡಿಗೆ ಸಂದೇಶ ಕೊಡಲು ಜನವಾದಿ ಹೊರಟಿದೆ. ಬೀದರ್ ಜಿಲ್ಲಾ ಸಮಿತಿಯ ಬಹುದಿನದ ಬಯಕೆಯ ಕಾರಣವಾಗಿ ಮತ್ತು ಸ್ಥಳೀಯ ವಿಚಾರವಾದಿಗಳ ಒತ್ತಾಸೆಯಿಂದಾಗಿ ಈ ಸಲದ ಸಮ್ಮೇಳನದ ಸಿದ್ಧತೆಯು ಬೀದರಿನ ಕೆಂಪು ಮಣ್ಣಿನಲ್ಲಿ ಮಹಿಳಾ ಕ್ರಾಂತಿಯ ಕಂಪನ್ನು ಮೂಡಿಸುತ್ತಿದೆ. ದಿನಾಂಕ:21, 22 ಮತ್ತು 23 ನೇ ಆಗಸ್ಟ್ 2007 ರ ಮೂರು ದಿನಗಳವರೆಗೆ ಬೀದರ್‌ನಗರದ ಹೃದಯಭಾಗದಲ್ಲಿ ನಡೆಯಲಿರುವ ಸಮ್ಮೇಳನದ ಪೂರ್ವ ತಯಾರಿ ಮತ್ತು ಸ್ವಾಗತ ಸಮಿತಿಯ ರಚನೆಗಾಗಿ ದಿನಾಂಕ:01.07.2007ರಂದು ವಿಸ್ತೃತ ಸಭೆ ಕರೆಯಲಾಗಿತ್ತು. ಜಿಲ್ಲಾ ಸಮಿತಿಯ ವಿಶಿಷ್ಠ ನಡೆ ಮತ್ತು ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ಸದರಿ ಸಭೆಗೆ 150ಕ್ಕೂ ಮಿಕ್ಕು ಚಿಂತಕ ಕಾರ್ಯಕರ್ತರು ಸೇರಿಸಿದ್ದರು. ದಲಿತ ಸಾಹಿತ್ಯ ಸಂಘಟನೆ, ಕನ್ನಡ ಸಾಹಿತ್ಯ ಪರಿಷತ್ತು, ದಲಿತ ಸಂಘರ್ಷ ಸಮಿತಿ, ರೈತ ಸಂಘ, ಅಂಗನವಾಡಿ ಸಂಘಟನೆ, ಬಿಸಿಯೂಟ, ಗ್ರಾಮ ಪಂಚಾಯಿತಿ, ಸರ್ಕಾರಿ ನೌಕರರ ಒಕ್ಕೂಟ, ಬೀದರ್ ಜಿಲ್ಲಾ ಲೇಖಕಿಯರ ಸಂಘ, ಆಟೋರಿಕ್ಷಾ ಯೂನಿಯನ್, ಮುಂತಾದ ಸಂಘಟನೆಗಳ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಇವರುಗಳಲ್ಲದೆ ಬೀದರ ಜಿಲ್ಲೆಯ ಉದ್ದಾಮ ಸಾಹಿತಿಗಳು, ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರೂ ಕೂಡಾ ಸಭೆಯಲ್ಲಿ ಭಾಗವಹಿಸಿದ್ದರು. ಎಲ್ಲರೂ ಸಮ್ಮೇಳನದ ಯಶಸ್ವಿಯಾಗಿ ತನುಮನಧನಗಳಿಂದ ದುಡಿಯುವುದಾಗಿ ಭರವಸೆ ನೀಡಿದರು.

ಸಮ್ಮೇಳನದ ಮಹತ್ವ ಮತ್ತು ಸಾಧ್ಯ ಸಾಧ್ಯತೆಗಳನ್ನು ಕುರಿತು ವಿಸ್ತೃತ ಚರ್ಚೆ ನಡೆಸಲು ಮೂಲಕ ಅನುಪಮವೂ, ಔಚಿತ್ಯಪೂರ್ಣವೂ ಆಗುವಂಥ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಶ್ರೀ ಸಿದ್ದರಾಮ ಶರಣರು ಬೆಲ್ದಾಳರನ್ನು ಗೌರವಾಧ್ಯಕ್ಷರೆಂದು ಒಕ್ಕೊರಲಿನಿಂದ ಆಯ್ಕೆ ಮಾಡಲಾಯಿತು. ಸಂಘಟನೆಯ ರಾಜ್ಯಾಧ್ಯಕ್ಷೆ ಕೆ.ನೀಲಾ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ, ಆರ್.ಪಿ. ರಾಜಾ ಇವರನ್ನು ಖಜಾಂಚಿಯಾಗಿ, ವಿಜಯಲಕ್ಷ್ಮಿ ಗ್ರಡ್ಡೆ ಮತ್ತು ಶಕುಂತಲಾ ದಂಡೆ, ಮೀನಾ ಬೋರಾಳಕರ್ ಮುಂತಾದವರನ್ನು ಸಹ ಕಾರ್ಯದರ್ಶಿಗಳೆಂದು ಆರಿಸಲಾಯಿತು. ಇದೇ ಸಂದರ್ಭದಲ್ಲಿ ಲೀಲಾ ಸಂಗ್ರಾಮ್ ಅವರನ್ನು ಕಛೇರಿ ಕಾರ್ಯದರ್ಶಿಯಾಗಿ ನೇಮಿಸಿ, ದಿ ಸಂಗ್ರಾಮ್ ವಕೀಲರ ಮಳಿಗೆಯಲ್ಲಿ ಜನವಾದಿಯ ನೂತನ ಕಛೇರಿಯನ್ನು ಉದ್ಘಾಟಿಸಲಾಯಿತು. ರಾಜ್ಯ ಸಮಿತಿಯ ಕಾರ್ಯದರ್ಶಿ ಕೆ.ಎಸ್. ವಿಮಲಾ ಅವರ ಅಧ್ಯಕ್ಷತೆಯಲ್ಲಿ ಸಿದ್ದರಾಮ ಶರಣರು ಬೆಲ್ದಾಳ ಇವರಿಂದ ವಿದ್ಯುಕ್ತವಾಗಿ ಕಛೇರಿಯನ್ನು ಪ್ರಾರಂಭಿಸಲಾಯಿತು. ಸಮ್ಮೇಳನದ ಒಟ್ಟು ಉಸ್ತುವಾರಿಗಾಗಿ ಹಣಕಾಸು ಸಮಿತಿ, ಮೆರವಣಿಗೆ ಸಮಿತಿ ಊಟ, ವಸತಿ ಸಮಿತಿ, ಸಾಂಸ್ಕೃತಿಕ ಸಮಿತಿ, ಸಂಘಟನಾ ಸಮಿತಿ ಇತ್ಯಾದಿ ಉಪ ಸಮಿತಿಗಳನ್ನು ರಚಿಸಿ ಸಂಚಾಲಕರಿಗೆ ಜವಾಬ್ದಾರಿ ನೀಡಲಾಯಿತು. ಸಮ್ಮೇಳನದ ಶೋಭೆ ಹೆಚ್ಚಿಸುವಂತೆ ಸ್ಥಳೀಯ ಮುಖಂಡರಾದ ಸರ್ವಶ್ರೀ ವೀರೇಂದ್ರ ಸಿಂಪಿ, ದೇಶಾಂಶ ಹುಡುಗಿ, ಡಾ: ಜಗನ್ನಾಥ ಹೆಬ್ಬಾಳೆ, ಅನ್ನಪೂರ್ಣ ರಗಟೆ, ಕಾಶೀನಾಥ ಬೇಲೂರೆ, ಚಂದ್ರಕಾಂತ ಪೋಸ್ತೆ, ಭಾರತಿ ವಸ್ತ್ರದ, ಪ್ರೇಮಾ ಸಿರ್ಸೆ, ಗಂಗಾಬಿಕಾ ಪಾಟೀಲ, ಖೈಸರ್ ರೆಹಮಾನ್, ಬಸವರಾಜ ತಂಬಾಕೆ, ಅಬ್ದುಲ್ ಖದೀರ್, ಡಾ: ಇಂದುಮತಿ ಪಾಟೀಲ, ಮುಂತಾದವರನ್ನು ಉಪಾಧ್ಯಕ್ಷರ ಮಂಡಳಿಯಾಗಿ ಜವಾಬ್ದಾರಿ ನೀಡಲಾಯಿತು. ಉಳಿದ ಉಪಸಮಿತಿಗಳಿಗೆ ಎಲ್ಲ ಸಂಘಟನೆಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನು ಸದಸ್ಯ ಸಂಚಾಲಕರಾಗಿ ನೇಮಿಸಲಾಯಿತು. ಸದರಿ ಸಮ್ಮೇಳನಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ 400 ರಿಂದ 500 ವರೆಗೆ ಪ್ರತಿನಿಧಿಗಳು ಆಗಮಿಸಲಿದ್ದು ಅವರಿಗೆ ಬೀದರ್ ಭಾಗದ ಮೊಘಲಾಯಿ ಶೈಲಿಯ ಹೃದಯ ವೈಶಾಲ್ಯವನ್ನು ಪರಿಚಯಿಸುವ ಸಂಕಲ್ಪ ತೊಡಲಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಸಮಾನತೆಯ ಬೀಜ ಮಂತ್ರವಾಗಿರುವ 'ದಾಸೋಹ' ಪರಂಪರೆಯನ್ನು ಎತ್ತಿ ಹಿಡಿಯುವ ಮೂಲಕ ಶರಣರ ಲಿಂಗ ಸಮಾನತೆಯ ಕನಸುಗಳಿಗೆ ಬಣ್ಣ ತುಂಬಲು ಆಶಿಸಲಾಯಿತು. ○



ಪತ್ತೆಯಾದ 3500 ವರ್ಷ ಹಳೆಯ ಈಜಿಪ್ಟ್ ರಾಣಿಯ ಗುರುತು

'ಹಟ್‌ಶೆಪ್ಸುಟ್' ಎಂಬ ಹೆಸರಿನ ರಾಣಿ ಈಜಿಪ್ಟ್‌ನಲ್ಲಿ ಸುಮಾರು ಕ್ರಿಸ್ತ ಪೂರ್ವ 1400 ನೇ ವರ್ಷದಲ್ಲಿ ಪ್ರಪ್ರಥಮ ರಾಣಿಯಾಗಿ ಬದುಕಿದ್ದಳು. ಈಜಿಪ್ಟ್‌ನಲ್ಲಿ ಆ ಕಾಲದ ರಾಜ ಅಥವಾ ರಾಣಿಯನ್ನು 'ಫೆರೋ' ಎಂದು ಕರೆಯಲಾಗುತ್ತಿತ್ತು. ರಾಣಿ 'ಹಟ್‌ಶೆಪ್ಸುಟ್'ಳ ದೇಹವನ್ನು 3500 ವರ್ಷಗಳಿಂದಲೂ ಕೆಡದಂತೆ 'ಮಮ್ಮಿಕರಣ' ವಿಧಾನದಿಂದ ಸದಾಕಾಲ ಸಂರಕ್ಷಿಸಿ ಇಡಲಾಗಿದೆ.



ಹೀಗಿದ್ದಳು ರಾಣಿ

'ಮಮ್ಮಿ' ಯಾಗಿ ಸಂರಕ್ಷಿಸಿಡುವ ಸಮಯದಲ್ಲಿ 'ಹಟ್‌ಶೆಪ್ಸುಟ್' ರಾಣಿಯ ದೇಹವನ್ನು ರಾಜನ ಮಗ್ಗುಲಲ್ಲೇ ಇಡದೆ ಬೇರೊಂದೆಡೆ ಇಟ್ಟಿದ್ದರಿಂದ, 1903ನೇ ಇಸವಿಯಲ್ಲಿ ದೊರೆತ 'ಮಮ್ಮಿ' ರೂಪದಲ್ಲಿದ್ದ ರಾಣಿಯ ಗುರುತು ಪುರಾತತ್ವ ಶಾಸ್ತ್ರಜ್ಞರಿಗೆ ಸಿಕ್ಕಿರಲಿಲ್ಲ. ಆದರೆ ರಾಣಿಯ ಮುರಿದು ಹೋದ ಹಲ್ಲು ಕಳೆದ ವಾರವಷ್ಟೆ ದೊರೆತಿದ್ದು ರಾಣಿಯ ದೇಹವನ್ನು ವಿಜ್ಞಾನಿಗಳು ಡಿ.ಎನ್.ಎ ಪರೀಕ್ಷೆಯಿಂದ ಪತ್ತೆ ಹಚ್ಚಿದ್ದಾರೆ. ರಾಣಿಯು ಮಧುಮೇಹ ರೋಗ ಮತ್ತು ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಸತ್ತಾಗ 50ವರ್ಷ ವಯಸ್ಸಾಗಿತ್ತೆಂದು ತಿಳಿದುಬಂದಿದೆ.

'ಮಮ್ಮಿ' ಎಂದರೇನು?

ಮನುಷ್ಯ ಅಥವಾ ಪ್ರಾಣಿಗಳು ಮೃತಗೊಂಡ ನಂತರ ದೇಹ ಕೊಳೆತು ಹೋಗದಂತೆ ಅತಿ ಹೆಚ್ಚು ಶೀತ ವಾತಾವರಣದಲ್ಲಿ ಹಲವು ಬಗೆಯ



ದೊರೆತ ಮಮ್ಮಿ

ರಾಸಾಯನಿಕ ವಸ್ತುಗಳನ್ನು ಬಳಸಿ ಕೆಡದಂತೆ ಸದಾಕಾಲ ಇಡುವಂಥಹ ಕ್ರಿಯೆಗೆ 'ಮಮ್ಮಿ' ಎಂದು ಕರೆಯಲಾಗುತ್ತದೆ. ಈ ಕ್ರಿಯೆಯಲ್ಲಿ ಮೃತಗೊಂಡ ದೇಹದ ಹೃದಯವೊಂದನ್ನು ಹೊರತುಪಡಿಸಿ ಇತರೆಲ್ಲ ಒಳಅಂಗಗಳನ್ನು ಹೊರತೆಗೆಯಲಾಗುತ್ತದೆ. ನೈಟ್ರನ್ ಎಂಬ ರಾಸಾಯನಿಕ ವಸ್ತುವಿನ ಉಪ್ಪಿನಂಶದಿಂದ ದೇಹದ ನೀರಿನಂಶವನ್ನು ಹೊರ ತೆಗೆಯಲಾಗುತ್ತದೆ. ನಂತರ ದೇಹವನ್ನು ಸುಗಂಧ ದ್ರವ್ಯಗಳಿಂದ ಲೇಪನಗೊಳಿಸ ಲಾಗುತ್ತಿತ್ತು. ದೇಹದ ಜೊತೆಗೆ ಆ ವ್ಯಕ್ತಿಯು ಬಳಸುತ್ತಿದ್ದ ಉಡುಗೆ ತೊಡುಗೆಗಳು, ಆಯುಧಗಳು ಮತ್ತು ಸಾಮಗ್ರಿಗಳನ್ನು ಇಡಲಾಗುತ್ತಿತ್ತು. ಅಂತಿಮವಾಗಿ ಇದನ್ನು ದೊಡ್ಡ ಗೋರಿ ನಿರ್ಮಾಣ ದಿಂದ ಸಂರಕ್ಷಿಸಿಡ ಲಾಗುತ್ತಿತ್ತು. ರಾಜರು ಮತ್ತು ಗಣ್ಯ ವ್ಯಕ್ತಿಗಳ ದೇಹಗಳನ್ನು ಶಾಶ್ವತ ಜೀವಂತವಿರಲಿ ಎಂಬ ನಂಬುಗೆ ಯಿಂದ 'ಮಮ್ಮಿಕರಣ' ಕ್ರಿಯೆಗೊಳಪಡಿಸಲಾಗುತ್ತಿತ್ತು. ಈಜಿಪ್ಟ್ ದೇಶದಲ್ಲಿ ಹೆಚ್ಚೆಚ್ಚು ಸಂಖ್ಯೆಯ ಮಮ್ಮಿಗಳನ್ನು ಕಾಣಬಹುದಾಗಿದೆ.

ರಾಣಿಯ ಮಹಿಳಾ ಹಕ್ಕು ಪ್ರತಿಪಾದನೆ!

'ಹಟ್‌ಶೆಪ್ಸುಟ್'ಳು ಈಜಿಪ್ಟ್‌ನ ದೊರೆ ಒಂದನೆಯ ತುಟ್ಮೋಸಿಸ್‌ನ ಮಗಳು. ಅಂದಿನ ಕಾಲದಲ್ಲಿ 'ದೊರೆಯೇ ದೇವರು' ಮತ್ತು ರಾಣಿಯೇನಿದ್ದರೂ ರಾಜನಿಗೆ ಸೇವಕಳಾಗಿರಬೇಕೇ ಹೊರತು ದೊರೆಗೆ ಸರಿಸಮಾನಳೆಂದು ಈಜಿಪ್ಟ್ ದೇವರುಗಳು ಅವಳನ್ನು ಪರಿಗಣಿಸುವುದಿಲ್ಲ ಎಂಬ ನಂಬುಗೆಯಿತ್ತು. ಹೀಗಾಗಿ 'ಹಟ್‌ಶೇಪ್ಸುಟ್'ಳಿಗೆ ದೊರೆಯ ಪಟ್ಟವನ್ನು ಕೊಡದೆ ನಿರಾಕರಿಸಿ ಅವಳ ಸವತಿಯ ಮಗ ಮೂರನೆಯ ತುಟ್ಮೋಸಿಸ್ ನಿಗೆ ಪಟ್ಟಾಭಿಷೇಕ ಮಾಡಲು ಸಿದ್ದತೆ ಮಾಡಲಾಗಿತ್ತು. ಆದರೆ ಇದರ ವಿರುದ್ಧ ಸೆಟೆದು ನಿಂತ 'ಹಟ್‌ಶೆಪ್ಸುಟ್'ಳು ತಾನೇ ದೊರೆಯೆಂದೂ ತನ್ನನ್ನೇ ದೇವರೆಂದು ಘೋಷಿಸಿಕೊಂಡಳು. ಪುರುಷರಂತೆ ವೇಷಭೂಷಣ ತೊಟ್ಟು 'ರಾಜ-ರಾಣಿ' ಎರಡೂ ಆಗಿ ಸುಮಾರು 20 ವರ್ಷಕಾಲ ರಾಜ್ಯಭಾರ ಮಾಡಿದಳು. ಹಲವಾರು ದೇವಸ್ಥಾನಗಳ ದೇವರ ಚಿತ್ರಗಳಲ್ಲಿ ಈ ರಾಣಿಯ ಪೋಟೋಗಳನ್ನು ಸ್ಥಾಪಿಸ ಲಾಯಿತು.


ಈ ಪತ್ತೆಯಿಂದಾಗಿ, ಈಜಿಪ್ಟ್‌ನ ನೆಫರ್‌ಟಿಟಿ ಮತ್ತು ಕ್ಲಿಯೋಪಾತ್ರ ರಾಣಿಯರಿಗಿಂತ ಮುಂಚೆಯೇ 'ಹಟ್‌ಶೆಪ್ಸುಟ್' ಳು ರಾಣಿಯಾಗಿ ಮೆರೆದಿರುವುದು ಸಾಬೀತಾಗಿದೆ. ಅಮೇರಿಕಾದ ನ್ಯಾಷನಲ್ ಜಿಯೋಗ್ರಾಫಿಕ್ ಸೊಸೈಟಿಯು ಈ ಯೋಜನೆಯ ವೆಚ್ಚ ಭರಿಸಿದೆ. ○

ನಗಬೇಡಿ

ಬೆಂಕಿಯಿಂದ ಬುಶ್ಗೆ ಚಿಂತೆ

ಅಮೆರಿಕದ ಅಧ್ಯಕ್ಷ ಬುಶ್ ಬೆಂಕಿಯಿಂದ ಚಿಂತಾಕ್ರಾಂತರಾಗಿದ್ದಾರೆ. ಇರಾಕ್ ಯದ್ಧದ ಬೆಂಕಿಯಿಂದಲ್ಲ. ಅವರ ಲೈಬ್ರರಿಗೆ ಇತ್ತೀಚೆಗೆ ಬೆಂಕಿ ಬಿತ್ತಂತೆ. ಅಗ್ನಿ ಶಾಮಕ ದಳದವರು ಎರಡೂ ಪುಸ್ತಕಗಳನ್ನು ಉಳಿಸುವಲ್ಲಿ ಸಫಲರಾದರಂತೆ. ಆದರೆ ಬುಶ್ ಪೂರ್ತಿ ಇನ್ನೂ ಕಲರ್ ತುಂಬಿರದ ಪುಸ್ತಕ ಪೂರ್ತಿ ಸುಟ್ಟು ಹೋಗಿತ್ತಂತೆ. ಪೂರ್ತಿ ಕಲರ್ ತುಂಬಿದ್ದ ಪುಸ್ತಕ ಅಷ್ಟೇನೂ ಸುಟ್ಟಿಲ್ಲ. ಅದೇ ಬುಶ್ ಚಿಂತೆಗೆ ಕಾರಣ.

JANASHAKTHI KANNADA VARA PATRIKE JULY 15, 2007 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09



• ನಕುಲ

'ತಮಾಷೆಗಾಗಿ' ಗಂಭೀರ ಚಿತ್ರ

ಕೋಡ್ಲು ರಾಮಕೃಷ್ಣರ ಮತ್ತೊಂದು ಚಿತ್ರ - ಡಬ್ಬದಲ್ಲೇ ಉಳಿಯಬೇಕಾದ್ದು ದುರದೃಷ್ಟವಶಾತ್ ಪ್ರೇಕ್ಷಕರ ಮುಂದೆ ಬಂದಿದೆ. 'ತಮಾಷೆಗಾಗಿ' ಎಂದು ಹೇಳಿ ನೋಡುಗರನ್ನು ಬೇಸ್ತು ಬೀಳಿಸುವಷ್ಟು ಗಂಭೀರವಾಗಿ ತೆಗೆದಿದ್ದಾರೆ ಕೋಡ್ಲು. 'ತಮಾಷೆಗಾಗಿ' ನೋಡಲು ಬಂದ ಜನ ಗಂಭೀರವದನರಾಗಿ ಎದ್ದು ಬರುವುದನ್ನು ಕಂಡರೆ ಅಯ್ಯೋ ಪಾಪ ಎನಿಸದಿರದು!.

ಮತ್ತದೇ ಹಳಸಲು ಕಥೆ. ಗಂಡ ಹೆಂಡತಿ, ಸುಂದರ ಸಂಸಾರ. ಹಾದಿ ತಪ್ಪಿದ ಗಂಡನದು, ಮತ್ತೊಬ್ಬಳೊಂದಿಗೆ ಚಕ್ಕಂದ. ಅವನನ್ನು ಸರಿ ದಾರಿಗೆ ತರಲು ಇವಳದು ಮತ್ತೊಂದು ಆಟ. ಸಾಕಪ್ಪ ಸಾಕು! ಇವರ ಚೆಲ್ಲಾಟಕ್ಕೆ ಪ್ರೇಕ್ಷಕ ಸುಸ್ತೋ ಸುಸ್ತು! ಇನ್ನೂ ಎಷ್ಟು ಅಂತ ಇದೇ ಕಥೆಯ ಚಿತ್ರಗಳನ್ನು ನೋಡುವುದು!



ಹಾದಿ ತಪ್ಪಿದ ಗಂಡಂದಿರಾಗಿ ರಾಜೇಶ್ ಮತ್ತು ಮೋಹನ್, ಅವರ ಹೆಂಡತಿಯರಾಗಿ ಸುಧಾರಾಣಿ ಮತ್ತು ಗುರುತಿಲ್ಲದ ಇನ್ನೊಬ್ಬ ನಟಿ. ಗಂಡಂದಿರ ಜೂಟಾಟ ನೋಡಿ, ಅವರಿಗೆ ಬುದ್ದಿ ಕಲಿಸುವ ಸಲುವಾಗಿ ಇವರೂ ಜೊತೆಗಾರರಿಬ್ಬರನ್ನು ಹೊಂಚಿಕೊಳ್ಳುತ್ತಾರೆ, ಅನಿರುದ್ಧ ಮತ್ತು ಕೋಮಲ್ ಅವರಿಬ್ಬರು. ಇವರಿಬ್ಬರೂ ಕತ್ತರಿ ಕೆಲಸ ಮಾಡುವ ಛತ್ರಿಗಳು. ಇವರಿಬ್ಬರನ್ನೂ ಮೆಚ್ಚುವ ಇನ್ನಿಬ್ಬರು ಬೆಡಗಿಯರು. ಈ ಛತ್ರಿಗಳನ್ನು ಹಿಡಿಯಲು ಅವರ ಹಿಂದೆ ಬಿದ್ದ ಇಬ್ಬರು ಪೋಲೀಸರು - ಗೊಂದಲವಾಯಿತೆ?, ಹೆದರಬೇಡಿ - ಕೊನೆಗೆ ಎಲ್ಲಾ ಗೊಂದಲಗಳು ಪರಿಹಾರವಾಗಿ ಸಿನಿಮಾ ಸುಖಾಂತ್ಯ. ಒಟ್ಟಿನಲ್ಲಿ ಗಂಡಂದಿರು ಮನೆ ಊಟ ಬಿಟ್ಟು ಬೀದಿ ಊಟಕ್ಕೆ ಹೋಗಬೇಡಿ ಎಂಬುದು ಕೋಡ್ಲುರವರ ಕಳಕಳಿಯ ಮನವಿ.

ಕೋಡ್ಲು ರಾಮಕೃಷ್ಣರ ನಿರ್ದೇಶನದಂತೆ ನೋಡುಗರನ್ನು ನಕ್ಕುನಗಿಸಲು ಪಾಪ ಇವರೆಲ್ಲರೂ ಹರಸಾಹಸಪಡುತ್ತಾರೆ, ಆದರೆ ಪ್ರೇಕ್ಷಕರು ಜಗ್ಗಲ್ಲ ಎಂಬುದು ಸತ್ಯ.

ತಲೆ ಖಾಲಿ ಎಂದ ಮೇಲೆ ಸುಮ್ಮನಿರುವುದು ಬಿಟ್ಟು ಬೇರೆಯವರ ತಲೆ ತಿನ್ನೋದು ಯಾಕೆ? ನಮ್ಮದು ಬಿಡಿ, 50 ರೂಪಾಯಿ ಹೋದರೆ ಹೋಯಿತು. ಪಾಪ ನಿರ್ಮಾಪಕರ ಪಾಡೇನು? ನಿರ್ದೇಶಕರಿಂದಲೇ ಜೇಬಿಗೆ ಲಕ್ಷಾಂತರ ರೂಪಾಯಿ ಕತ್ತರಿ! ಇದು ಸಾಲದೆಂಬಂತೆ ಪರದೇಶ ಸುತ್ತೋ ಖಯಾಲಿ ಬೇರೆ! ಇನ್ನೆಲ್ಲಿ ಉದ್ಧಾರವಾಗೋದು, ನಿರ್ಮಾಪಕನ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಗ್ಯಾರಂಟಿ.

ಮಿಸ್ ಕ್ಯಾಲಿಪೋರ್ನಿಯಾ, ಹಲೋ, ಇನ್ನೂ ಯಾವುಯಾವುದೋ ಸೋತ ಚಿತ್ರಗಳ ಪಟ್ಟಿಯೇ ಕೋಡ್ಲು ಕೈಯಲ್ಲಿರುವುದು. ಯಶಸ್ಸು ಎನ್ನುವುದು ಮರೀಚಿಕೆಯೇ ಆಗಿರುವಾಗ ಪ್ರತಿಬಾರಿಯೂ ಹೊಸ ಮಿಕಗಳನ್ನು ಹಿಡಿಯುವ ಕೋಡ್ಲುರವರ ಚಾಲಾಕು ನಿಜಕ್ಕೂ ಅಚ್ಚರಿಯೇ!



ಮೂರು ಕೊಡ ನೀರು

ಸುಬ್ಬಣ್ಣ ರಂಗನಾಥ ಎಕ್ಕುಂಡಿ

ಏಳಲಾರೆನು ಮಗೂ ಮರವು ಚಿಗುರುವ
ವರೆಗೆ, ಮತ್ತೊಮ್ಮೆ ಎಲೆ ಹೂವು ಬರುವವರೆಗೆ,
ಮರಳಿಬಾರದ ಕಣಿವೆಯಿಂದ, ಎತ್ತಿದ ಮೂರು
ಕೊಡ ನೀರು, ತಂದಿಲ್ಲಿ ಸುರಿವವರೆಗೆ
:1:

ಬತ್ತಿಹೋಗಿವೆ ಮಗೂ, ಬಾಳಿಸಿದ ಜೀವರಸ
ವಾಹಿನಿಗಳೆಲ್ಲ; ಕೊರಡಾದ ಮರವ, ಕಾಯುತಿವೆ
ಕಬ್ಬಿಣದ ಬೇಲಿ, ಹಾಡಿನ ಹೂವು,
ಬಾಡಿ ಹೋಗಿವೆ, ಮರೆಸಿ ಹಲವು ಸ್ವರವ
:2:

ಹಾರಿಹೋಗಿವೆ ಹಕ್ಕಿ ದೂರ ದೂರದಿ.
ಚೈತ್ರ ಕಣ್ಮರೆಸಿ ಚಿಲಿಪಿಲಿಯ ಕಾಡು ಸೇರಿ.
ತಂಬೆಲರಿಗೂ ಇಲ್ಲಿ ಉಸಿರುಗಟ್ಟಿದೆ. ಮಗೂ
ಕಂಬನಿಯ ಪರದೇಶಿ ಬೆಟ್ಟವೇರಿ
:3:

ಏಳಲಾರೆನು ಮಗೂ, ಜ್ವಾಲೆಗಳ ಹೂವರಳಿ
ಮತ್ತೊಮ್ಮೆ ಮುಡಿವನಕ ನನ್ನ ಹೆರಳು,
ಟೊಂಗೆ ಟೊಂಗೆಯ ತಬ್ಬಿ, ನೆಲದಲ್ಲಿ ನಲ
ವಿಂದ, ಸುರಿವನಕ ಮತ್ತೆ ಅಮೃತದ ನೆರಳು
:4:

ಈ ಮರದ ನೆರಳಲ್ಲಿ ಬಂಡೆ ಬೆಟ್ಟವ ಸೀಳಿ,
ಸಿಂಹಗಳ ಗುಹೆಯಿಂದ ಇಳಿದುಬಂದು,
ಬಿತ್ತಿ ಬೆಳೆದರು ಬಯಲು ಹೃದಯಗಳ ಹೊ
ಲವನ್ನು, ಹರಿವ ಹೊಳೆಗಳ ಇಲ್ಲಿಗೆಳೆದು ತಂದು
:5:

ಸಿದ್ದರಿಲ್ಲೆ ಕುಳಿತು ಎದೆ ಎದೆಯ ಕೆಂಡವನು,
ಹೊತ್ತಿಸುತ ಬೆಳಗಿದವರು ವಿಶ್ವಜ್ಯೋತಿ,
ಬುದ್ಧರಿಲ್ಲೇ ಕುಳಿತು ತಾರೆಗಳ ದಾರಿಯಲಿ
ಕರೆದೊಯ್ದು ನೀಡಿದರು. ಕರುಣೆ ಪ್ರೀತಿ
:6:

ಹಸಿದವರಿಗಿಲ್ಲಿಯೇ ಇತ್ತು ಅನ್ನದ ತಟ್ಟೆ,
ನೀರಡಿಸಿದವರಿಗಮೃತದ ಕೊಳವು,
ನೆನಪುಗಳ ನೇಗಿಲವನುತ್ತು, ಮುತ್ತಿನ
ಬೀಜ ಬಿತ್ತುವರಿಗಾಗಿ ಕಾದಿಹುದು ಹೊಲವು
:7:

ನಿಜದ ಮಡಿಕೆಯ ಹೊತ್ತು ಸುಖದ ಕೈ ಬಿಟ್ಟವರು,
ಹರಿದವೇಗದ ಹೊಳೆಗಳಲ್ಲಿ ಇಳಿದು,
ದಣಿದವರ ಕದ ತಟ್ಟಿ ಅಪ್ಪಿಕೊಂಡರು
ಮಗೂ, ಕತ್ತಲಿನ ಕೇರಿಗಳ ಕರೆಯ ತಿಳಿದು
:8:

ಎಂದು ಬರುವುದು? ಇಲ್ಲಿಗೆಂದು ಸುರಿವರು
ಮೂರುಕೊಡ ನೀರು? ಕಾದಿರುವೆ ಅವರಿಗೆಂದು,
ಬಾಯಿಬಿಟ್ಟವು ಬೇರು, ಹೊಗೆಯಾಡಿದವು ಹೊ
ತ್ತಿ ಉರಿಯ ಬೆಟ್ಟವು ತಾಯ ಕರೆಗೆ ನೊಂದು
:9:

ಒಂದು ಮರುಕದ ದನಿಗೆ ಸಿಂಹ ಗುಹೆಯಿಂದಿ
ಳಿದು, ಮೂರು ಕೊಡ ಹೊತ್ತವರು ಕಣಿವೆಯಿಂದ
ಮರಕೆ ಸುರಿಯಲು, ಚೈತ್ರ ಚಿಲ್ಲುವರಿಯಿತು
ಗೆಲ್ಲು ಗೆಲ್ಲಿನಲಿ ಎಲೆಹೂವು ಚೆಲುವಿನಿಂದ
:10:

ಕೊರಳ ಕುಣಿಕೆಗಳಿಂದ ಮೂರು ಕೊಡ
ತೂಗಿದವು; ದೀಪಗಳು ಆರಿದವು ಮೌನದಲ್ಲಿ ಹೂ
ಬಿಸಿಲಹುಡಿ ಚೆಲ್ಲಿ ಹರಡಿತು ಉಷಃಕಾಲ
ಬಣ್ಣಗಳ ಗರಿಬಿಚ್ಚಿ ಬಾನಿನಲ್ಲಿ
:11:

(ಕ್ರಾಂತಿಕಾರಿಗಳಾದ ಭಗತ್‌ಸಿಂಗ್,
ರಾಜಗುರು, ಸುಖದೇವ್‌ರವರನ್ನು
ಬ್ರಿಟೀಶರು ಗಲ್ಲಿಗೇರಿಸಿದ ಸಂದರ್ಭ
ನೆನೆದು -
'ಬಕುಲದ ಹೂಗಳು' ಸಂಕಲನದಿಂದ)

ಮಹಾಗೋಡೆ ನಂತರ ಈಗ ಮಹಾಸೇತುವೆ

ಸಾಗರದ ಮೇಲೆ ಕಟ್ಟಲಾದ ಅತಿ ದೀರ್ಘ (36 ಕಿ.ಮೀ) ಸೇತುವೆಯನ್ನು ಚೀನಾದಲ್ಲಿ ಉದ್ಘಾಟಿಸಲಾಯಿತು. ಶಾಂಘಾಯ್ ಬಳಿ ಇರುವ ಹಾಂಗ್ ರ?ಶೌ ಕೊಲ್ಲಿಯ ಮೇಲೆ ಕಟ್ಟಲಾದ ಆರು-ಹಾದಿಗಳ ಈ ಸೇತುವೆಯನ್ನು ಚೀನಿ ಇಂಜಿನಿಯರುಗಳು ವಿನ್ಯಾಸಗೊಳಿಸಿದ್ದು ಇದೊಂದು ಇಂಜಿನಿಯರಿಂಗ್ ವಿಸ್ಮಯ ಎನ್ನಲಾಗಿದೆ. ಸುಮಾರು 12 ಶತಕೋಟಿ ಯುವಾನ್ (1.4 ಶತಕೋಟಿ ಡಾಲರ್) ವೆಚ್ಚದಲ್ಲಿ ನಿರ್ಮಿಸಲಾದ ಈ ಸೇತುವೆ 100 ವರ್ಷ ಬಾಳುವಂತೆ ವಿನ್ಯಾಸಗೊಳಿಸಲಾಗಿದೆಯಂತೆ. ಸೇತುವೆಯ ಉದ್ಘಾಟನೆಯನ್ನು ವಿಶಿಷ್ಟ ರೀತಿಯಲ್ಲಿ (ಸೇತುವೆ ನಿರ್ಮಾಣದಲ್ಲಿ ಭಾಗವಹಿಸಿದ್ದ ಎಲ್ಲಾ ಕಂಪನಿಗಳ ಕಾರ್ಮಿಕರು, ಇಂಜಿನೀಯರುಗಳು, ಅಧಿಕಾರಿಗಳು ಕೊನೆಯ ಭಾಗವನ್ನು ವೆಲ್ಡ್ ಮತ್ತಿತರ ರೀತಿಯಲ್ಲಿ ಜೋಡಿಸಿ ಕೊನೆಗೊಳಿಸುವ ಮೂಲಕ) ನೆರವೇರಿಸಲಾಯಿತು.



JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE 560027 Published by G.N.NAGARAJ, No 12, 18th Cross, S.R.Nagar, BANGALORE 560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12, 18th Cross, S.R.Nagar, BANGALORE 560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor S.Y.GURUSHANTH